ತೆಗೆದುಕೊಳ್ಳಬೇಕು ಎನ್ನುವ ತತ್ವದಲ್ಲಿ ನಂಬಿಕೆ ಇಟ್ಟಿರತಕ್ಕಂಥವನ್ನು ನಾನು. ಇಲ್ಲದಿದ್ದರೆ ಸೊಸೈಟಿಗಳು ಹಾಳಾಗಿ ಹೋಗುತ್ತವೆ. ಆದರೆ ಇವತ್ತಿನ ಸಂದರ್ಭದಲ್ಲಿ ಅಲ್ಲ, ಇವತ್ತು ರೈತರು ಬಹಳ ತೊಂದರೆಯಲ್ಲಿದ್ದಾರೆ. ಅವರ ಬೆಳೆ ಎಲ್ಲಾ ನಾಶವಾಗಿದೆ. ಅವರಲ್ಲಿ ಮೂರುಕಾಸು ಇಲ್ಲ, ನೀವು ಏನಾದರೂ ಮಾರ್ಚಿ 31ರ ನಂತರ ಸಾಲ ವಸೂಲಿ ಮಾಡಲು ಹೋದರೆ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಕ್ರಿಯೇಟ್ ಆಗುವುದರಲ್ಲಿ ಯಾವುದೇ ಸಂಶಯ ಇಟ್ಟುಕೊಳ್ಳಬೇಡಿ.

ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಯ ಫಂಕ್ಷನ್ ಬಗ್ಗೆ

ನಿನ್ನೆ ದಿನ ಮತ್ತು ಈಗ ಈ ಸದನದಲ್ಲಿ ಬಹಳ ಚರ್ಚೆ ಮಾಡಿಬಿಟ್ಟಿದ್ದೇವೆ. ಇವತ್ತು ಏನು ಹಣವನ್ನು ಕೊಟ್ಟಿದ್ದಾರೆ ಅದು ಜಿಲ್ಲಾಪರಿಷತ್ತಿನಲ್ಲಿ ಸರ್ಕಾರ ಅಪ್ರೂವ್ ಮಾಡಿರತಕ್ಕಂಥ ರೆಗ್ಯುಲರ್ ಆಕ್ಷನ್ ಪ್ಲಾನ್‌ನಲ್ಲಿ ಇದ್ದಂಥಾ ದುಡ್ಡನ್ನು ಜೆ.ಆರ್.ವೈ. ಫಂಡ್ಸನ್ನು ಕುಡಿಯುವ ನೀರಿಗೋಸ್ಕರ ಎಂದು ನೀವು ಡೈವರ್ಟ್ ಮಾಡಿದ್ದೀರಿ. ಇದರಿಂದಾಗಿ ಏನಾಗಿದೆ? ಇವತ್ತು ಜಿಲ್ಲಾಪರಿಷತ್ತಿನ ಆಶ್ರಯದಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೋಡಬೇಕಾಗಿತ್ತೋ ಅಥವಾ ಮಿನಿ ವಾಟರ್ ಸಪ್ಲೈ ಮಾಡಬೇಕಾಗಿತ್ತೋ ಅದನ್ನು ಹೇಗೆ ಮಾಡುತ್ತಾರೆಂದು ನನಗೆ ಅರ್ಥವಾಗುತ್ತಿಲ್ಲ, ಇದನ್ನು ಡಿ.ಸಿ. ಯವರ ಮೂಲಕ ಮಾಡಿಸುತ್ತಿರೋ ಚೀಫ್ ಸೆಕ್ರೆಟರಿಯವರು ಮೂಲಕ ಮಾಡಿಸುತ್ತೀರೋ ಅದು ನನಗೆ ಸಂಬಂಧವಿಲ್ಲ, ಆದರೆ ನನಗೆ ಮುಖ್ಯವಾಗಿ ಅರ್ಥವಾಗದೇ ಇರತಕ್ಕಂಥಾದ್ದು ಏನೆಂದರೆ ನೀವು ಡಿ.ಸಿ.ಗಳಿಗೆ ಎಲ್ಲಾ ಕಡೆ ಹಣವನ್ನು ಕೊಟ್ಟಿದ್ದೀರಿ. ಡಿ.ಸಿ.ಯವರು ಯಾರ ಮೂಲಕ ಕೆಲಸ ಮಾಡಿಸುತ್ತಾರೆ? ಅವರು ಜಿಲ್ಲಾಪರಿಷತ್ತಿನ ಎಕ್ಸಿಕ್ಯುಟಿವ್‌ಇಂಜಿನಿಯರ್ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜನಿಯರ್ ಮೂಲಕ ತಾನೇ ಕೆಲಸ ಮಾಡಿಸುವುದು? ಯಾವ ಕಾರಣದಿಂದ ಇದನ್ನು ಮಾಡಿದ್ದೀರಿ? ಅಂದರೆ ರಾಜಕೀಯ ಜಿಲ್ಲಾಪರಿಷತ್ತಿನಲ್ಲಿ ಮತ್ತು ಮಂಡಲ ಪಂಚಾಯಿತಿಗಳಲ್ಲಿ ನಿಮಗೆ ಬೆಂಬಲ ಕೊಡತಕ್ಕಂಥ ಹೆಚ್ಚಿನ ಪ್ರಧಾನರು ಮತ್ತು ಜಿಲ್ಲಾಪರಿಷತ್ತಿನ ಅಧ್ಯಕ್ಷರುಗಳು ಇಲ್ಲ ಎನ್ನುವ ಒಂದೇ ಕಾರಣದಿಂದ ಅದನ್ನು ಸ್ಥಗಿತ ಮಾಡಿದ್ದೀರಿ. ನೀವು ಮಂಡಲ ಪಂಚಾಯಿತಿಗಳಲ್ಲಿ ಏನು ಮಾಡಿದ್ದೀರಾ ಎಂದರೆ, ಜೆ.ಆರ್.ವೈ ಫಂಡ್ಸ್ ನ್ನು ನಿಲ್ಲಿಸಿರುವುದರಿಂದಾಗಿ ಇವತ್ತು ಎಲ್ಲಾ ಮಂಡಲ ಪಂಚಾಯಿತಿ ಪ್ರಧಾನರುಗಳು ನಿಮಗೆ ಶಾಪ ಹಾಕುತ್ತಿದ್ದಾರೆ. ಹಳ್ಳಿಗಳಲ್ಲಿ ಬಲ್ಬುಗಳನ್ನು ಹಾಕಿಸುವುದಕ್ಕೆ ಸಹಿತ ಅವರ ಹತ್ತಿರ ದುಡ್ಡಿಲ್ಲ ಎನ್ನುವುದನ್ನು ತಾವು ದಯವಿಟ್ಟು ತಿಳಿದುಕೊಳ್ಳಬೇಕು. ಈ ಪರಿಸ್ಥಿತಿಗೆ ನೀವು ತಂದಿದ್ದೀರಿ. ವಿದ್ಯುತ್ ಸರಬರಾಜು ಎಷ್ಟೊಂದು ಅವ್ಯವಸ್ಥೆಯಾಗಿದೆ? ಕಳೆದ ಒಂದು ವರ್ಷದಿಂದಲೂ ವಿದ್ಯುತ್ ಇಲಾಖೆ ಬಗ್ಗೆ ಚರ್ಚೆ ಮಾಡಿದ್ದೇವೆ. ನಮ್ಮ ಬೈರೇಗೌಡರು, ಮುಖ್ಯ ಮಂತ್ರಿಗಳ ಮನೆ ಮುಂದೆ ಕುಳಿತುಕೊಂಡು ಧರಣಿ ಮಾಡಿದ್ದಾರೆ. ಅದರಿಂದ ಏನೂ ಆಗಲಿಲ್ಲ, ಇವತ್ತು ವಿದ್ಯುತ್ತಿಗೂ ಬರಗಾಲಕ್ಕೂ ಏನು ಸಂಬಂಧ? ಮಿನಿ ವಾಟರ್ ಸಪ್ಲೈ ಇರತಕ್ಕಂಥ ಹಳ್ಳಿಗಳಲ್ಲಿ ಕರೆಂಟ್ ಇಲ್ಲದೆ ಹೋದರೆ ಕುಡಿಯಲಿಕ್ಕೆ ನೀರನ್ನು ಎಲ್ಲಿಂದ ತರುತ್ತಾರೆ. ಬೋರ್‌ವೆಲ್‌ಗಳು ಇರುವ ಹಳ್ಳಿಗಳಾದರೆ ಪರ್ವಾಗಿಲ್ಲ, ಆಮೇಲೆ ನೀರಾವರಿ ಪಂಪುಸೆಟ್ಟುಗಳಿಗೆ ಸರಿಯಾದ ವಿದ್ಯುಚ್ಛಕ್ತಿ ದೊರೆಯದೆ ಬಹಳ ಕಷ್ಟಪಡುತ್ತಿದ್ದಾರೆ. ಮಾನ್ಯ ಬಂಗಾರಪ್ಪನವರು ಮುಖ್ಯ ಮಂತ್ರಿಗಳಾದ ಮೇಲೆ ರೈತರುಗಳಿಗೆ ಕೊಟ್ಟಿರತಕ್ಕಂಥ ಸವಲತ್ತನ್ನು ಒಪ್ಪತಕ್ಕಂಥಾದ್ದೆ. ನಾನು ಇಲ್ಲವೆಂದು ಹೇಳುವುದಿಲ್ಲ, ಆದರೆ ರೈತರು ಏನು ಹೇಳುತ್ತಾರೆ ಅಂದರೆ ಆ ಸೌಲಭ್ಯ ನಮಗೆ ಬೇಕಾಗಿಲ್ಲ, ನಮಗೆ un-interrupted power supply ಮಾಡಬೇಕು ಎಂದು ಹೇಳುತ್ತಿದ್ದಾರೆ. ಬೆಳಿಗ್ಗೆ 6 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಅಥವಾ ಮಧ್ಯಾಹ್ನ 12 ರಿಂದ ಸಾಯಂಕಾಲ 6 ಗಂಟೆಯವರೆಗೆ ಯಾವುದಾದರೂ 8 ಗಂಟೆ ಸಮಯ. un-interrupted power supply ಕೊಡುವುದಕ್ಕೆ ಈ ಸರ್ಕಾರಕ್ಕೆ ಏಕೆ

ಆಗುತ್ತಿಲ್ಲ ಎಂದು ನನಗೆ ಅರ್ಥವಾಗುತ್ತಿಲ್ಲ ಅದನ್ನು ಏಕೆ ನೀವು monitor ಮಾಡುವುದಕ್ಕಾಗುತ್ತಿಲ್ಲ? ಬಿಲ್ ಮಾತ್ರ ಬರುತ್ತಿದೆ. ಮಾನ್ಯ ಶಿವರಾಮೇಗೌಡರೇ ತಾವು ಏನಾದರೂ ಹೇಳುವುದಿದ್ದರೆ ದಯವಿಟ್ಟು ಎದ್ದುನಿಂತು ಹೇಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ: ನಮ್ಮ ಸರ್ಕಾರ ಬಂದು ಕೇವಲ 1 ವರ್ಷ 3 ತಿಂಗಳಲ್ಲಿ ಈ ರಾಜ್ಯದಲ್ಲಿ ಬಹಳ ಶಾರ್ಟೇಜ್ ಇರುವ ಕರೆಂಟ್‌ನ್ನು ಸರಿ ಮಾಡಲಿಕ್ಕಾಗುವುದಿಲ್ಲ. ಕಳೆದ 8-10 ವರ್ಷ ನೀವು ಏನು ರಾಜ್ಯಭಾರ ಮಾಡಿದ್ದೀರಿ, ಆ ಸಂದರ್ಭದಲ್ಲಿ ವಿದ್ಯುಚ್ಛಕ್ತಿಗೆ ಸಾಕಷ್ಟು ಗಮನ ಕೊಡದೇ ಇದ್ದುದರಿಂದ ಈ ಪರಿಸ್ಥಿತಿಯನ್ನು ನಾವು ಅನುಭವಿಸುತ್ತಿದ್ದೇವೆ. ಮಿನಿ ವಾಟರ್ ಸಪ್ಲೈಗೆ ವಿದ್ಯುಚ್ಛಕ್ತಿ ಕೊಡಲಿಲ್ಲವೆಂದರೆ ಏನು ಮಾಡುವುದಕ್ಕಾಗುತ್ತದೆ.

ಶ್ರೀ ಎಸ್.ಹೆಚ್. ಕೌಜಲಗಿ: ನಮ್ಮ ತಾಲ್ಲೂಕಿನಲ್ಲಿ 526 ಐ.ಪಿ.ಸೆಟ್‌ಗಳಿಗೆ ಕರೆಂಟ್ ಕೊಡುವ ವ್ಯವಸ್ಥೆ ಇತ್ತು. ಈವರೆಗೆ 192 ಐ.ಪಿ.ಸೆಟ್‌ಗೆ ಮಾತ್ರ ಕೊಟ್ಟಿದ್ದಾರೆ. ಇರುವ ಕ್ವೋಟಾ ಕೊಡುವುದಕ್ಕೂ ಆಗಲಿಲ್ಲ. ಸುಮ್ಮನೆ ನಾವು 60-70 ಸಾವಿರ ಪಂಪುಸೆಟ್ಟುಗಳಿಗೆ ಕರೆಂಟ್ ಕೊಡುತ್ತೇವೆಂದು ಹೇಳುತ್ತಾರೆ. ಇದು ಬರೀ ಪೇಪರ್ ಪಬ್ಲಿಸಿಟಿ ಗೌರ್ನಮೆಂಟ್.

ಶ್ರೀ ಆರ್.ಎಲ್. ಜಾಲಪ್ಪ: ಮಾನ್ಯ ಸಭಾಧ್ಯಕ್ಷಣಿಯವರೇ ಮಾನ್ಯ ಶಿವರಾಮೇಗೌಡರು ಈ ಸಭೆಗೆ ಬಂದು ಇನ್ನೂ ಒಂದು ವರ್ಷವಾಗಿಲ್ಲ. ವಿಷಯವನ್ನು ಅರ್ಥಂಬರ್ಥ ತಿಳಿದುಕೊಂಡಿದ್ದಾರೆ.

ಆರು ವರ್ಷ ನೀವು ಅಧಿಕಾರದಲ್ಲಿ ಇದ್ದಿರಲಿಲ್ಲ ಆಗ ಏನು ಮಾಡಿದಿರಿ ಎಂದದು ಹೇಳಿದರು. ಹಿಂದೆ 35 ವರ್ಷ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇತ್ತಲ್ಲ, ಏನು ಮಾಡಿದೆ? ಕಾಳಿ ಪ್ರಾಜೆಕ್ಟ್‌ಗೆ ಸಿಮೆಂಟ್ ಕೊಟ್ಟಿದ್ದು ಅದನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿಕೊಂಡಿದ್ದಾರೆ. ಅದು ಪಿಎಸಿಯೊಳಗೆ ರಿಪೋರ್ಟ್ ಆಯಿತು. ಅಲ್ಲಿ ಗುಂಡೂರಾವ್ ಅವರು ಇದ್ದಾಗ ಅದನ್ನು ಓಟ್ ಡೌನ್ ಮಾಡಿದರು. ಆಗ ಮಾನ್ಯ ಶಿವರಾಮೇಗೌಡರು ಎಲ್ಲಿದ್ದರು.

ಉಪಾಧ್ಯಕ್ಷರು: ಶ್ರೀಯುತ ಸಿಂಧ್ಯವರು ಮುಂದುವರೆಸಿ.

ಶ್ರೀ ಆರ್. ದಯಾನಂದ ರಾವ್: ಸ್ವಾಮಿ ಹಿಂದಿನದೆಲ್ಲ ಮಾತನಾಡುವುದಕ್ಕೆ ಹೋಗಬೇಡಿ. ಮಾಡಬಾರದ್ದನ್ನು ಮಾಡಿದ್ದರಿಂದಲೇ ಜನ 185 ಜನರನ್ನು ಇಲ್ಲಿಗೆ ಕಳಿಹಿಸಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಏನು ಮಾಡಿದ್ದರು, ಇವರು ಏನು ಮಾಡಿದ್ದರು ಎಂದು ಹೇಳುವುದು ಬೇಡ. ಎಲ್ಲ ಜನತೆಗೆ ಗೊತ್ತಿದೆ. ಸುಮ್ಮನೆ ನಾವು ಏಕೆ ಮಾತನಾಡಬೇಕು?

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ರಾಜಕೀಯವನ್ನು ಬೆರೆಸತಕ್ಕ ಭಾಷಣವನ್ನು ಮಾಡುತ್ತಿಲ್ಲ. ನನಗೆ ಅನಿಸುವ ಹಾಗೆ ಮಾನ್ಯ ಶಿರಾಮೇಗೌಡರು ಮಧ್ಯದಲ್ಲಿ ಎದ್ದುನಿಂತುಕೊಂಡು ನಮಗೆ ಚುಚ್ಚುವ ಹಾಗೆ ಮಾತನಾಡಿದ್ದಾರೆ. ಅವರು ಆ ರೀತಿ ಮಾತನಾಡಿದ್ದರಿಂದ ನಾನು ಯೀಲ್ಡ್ ಆದೆ. ಇಲ್ಲದಿದ್ದರೆ ನಾನು ಯೀಲ್ಡ್ ಆಗುತ್ತಾ ಇರಲಿಲ್ಲ. ಶಿವರಾಮೇಗೌಡರ ನಾಗಮಂಡಲ ಕ್ಷೇತ್ರದಲ್ಲಿ ರೈತರಿಗೆ ತೊಂದರೆ ಆಗದೇ ಇರುವ ರೀತಿಯಲ್ಲಿ ವಿದ್ಯುತ್ ಸರಬರಾಜು ಆಗುತ್ತಾ ಇರುವುದರಿಂದ ಅವರಿಗೆ ಏನೂ ತೊಂದರೆ ಇಲ್ಲ, ನಾಗಮಂಡಲ ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ತೊಂದರೆ ಇಲ್ಲ, ಅಲ್ಲಿ ಬರಗಾಲ ಇಲ್ಲ, ಮಿನಿ ವಾಟರ್ ಸಪ್ಲೈಗೆ ಕರೆಂಟ್ ಇದೆ. ಆದ್ದರಿಂದ ಅವರು ಬಹಳ ಸಂತೋಷವಾಗಿ ಇದ್ದಾರೆ.

ಅವರು ನನ್ನ ಕ್ಷೇತ್ರದಲ್ಲಿ ತೊಂದರೆ ಇರುವುದರಿಂದ ಮತ್ತೆ ರಾಜ್ಯದಿಂದ ಬರತಕ್ಕ ಸಾಮಾನ್ಯವಾದ ಜನ ಈ ಸಮಸ್ಯೆಗಳನ್ನು ಹೇಳುತ್ತಾ ಇರುವುದರಿಂದ ತಾವು ನನಗೆ ಅನುಮತಿ ಕೊಟ್ಟಿರುವುದರಿಂದ ನಾನು ಮಾತನಾಡುತ್ತಿದ್ದೇನೆ. ಕರೆಂಟ್ ಸೌಲಭ್ಯವನ್ನು ಸರಿ ಮಾಡದೇ ಹೋದರೆ ರಾಜ್ಯಾದ್ಯಂತ ನೀವು ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆ, ನಿಮ್ಮ ಸರ್ಕಾರಕ್ಕೆ ಬಹಳ ಕೆಟ್ಟ ಹೆಸರು ಬರುತ್ತದೆ ಎಂದು ನಾನು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.ದಯಮಾಡಿ ರೈತರ ಶಾಪಕ್ಕೆ ನೀವು ಒಳಗಾಗಬೇಡಿ. ಬೆಳೆ ಬೆಳೆಯತಕ್ಕ ರೈತರಿಗೆ ಬಹಳ ತೊಂದರೆ ಆಗಿದೆ. ಕುಡಿಯುವ ನೀರಿಗೆ ಬಹಳ ತೊಂದರೆ ಆಗಿದೆ. ಇದಕ್ಕೆ ದಯವಿಟ್ಟು ತಾವು ಗಮನವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಡೀಸಲ್ ವಿಚಾರ ಹೇಳುತ್ತೇನೆ. ಇವತ್ತು ಡೀಸಲ್ ಇಲ್ಲದೇ ಇರುವುದರಿಂದ ಯಾರಿಗೆ ಬೇಕಾದರೂ ಡೀಸಲ್ ಸಿಗುತ್ತದೆ. ನನ್ನ ತಾಲ್ಲೂಕಿನ ಬಗ್ಗೆ ಹೇಳುತ್ತೇನೆ. ಮೊನ್ನೆ ತಾಲ್ಲೂಕು ಪಂಚಾಯಿತಿ ಸಭೆಯಲ್ಲಿ ನಾನು ಭಾಗವಹಿಸಿದ್ದೆ. ನಾನು ತಾಲ್ಲೂಕು ಪಂಚಾಯತಿ ಸಭೆಯಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ನಮ್ಮ ತಾಲ್ಲೂಕಿಗೆ ಎಷ್ಟು ಡೀಸೆಲ್ ಬರುತ್ತದೆ, ಯಾವು ಯಾವುದಕ್ಕೆ ಖರ್ಚು ಮಾಡುತ್ತೀರಿ ಎಂದು ಕೇಳಿದೆ. ನಮಗೆ ಬರುವ ಡೀಸೆಲ್‌ನಲ್ಲಿ ಅರ್ಧ ಭಾಗ ಡೀಸೆಲ್ ಗ್ರಾನೈಟ್ ಕಳ್ಳತನ ಮಾಡುತ್ತಾ ಇರತಕ್ಕವರಿಗೆ ಕೊಡುತ್ತಿದ್ದೇವೆಂದು ಹೇಳಿದರು. ಅರ್ಧ ಭಾಗ ಡೀಸಲ್ ಅನ್ನು ಕಳ್ಳತನದಲ್ಲಿ ಸರ್ಕಾರದ ಪರವಾನಗಿಯನ್ನು ಪಡೆದು ಕನಪುರ ತಾಲ್ಲೂಕಿನಲ್ಲಿ ಗ್ರಾನೈಟ್ ಅನ್ನು ಸಾಗಿಸಲಿಕ್ಕೆ ಕೊಡತ್ತಿದ್ದಾರೆ. ಅದೂ ಒಬ್ಬರಿಗೆ. ಇನ್ನು ಆರು ತಿಂಗಳಲ್ಲಿ ಅವರ ಅವಧಿ ಮುಗಿದು ಹೋಗುತ್ತದೆ. ಆದರೆ ಮಾತ್ತಾ ಇರುವವರು ಐನೂರು ಜನ. ಅವರಿಗೆ ಎಷ್ಟು ಬೇಕಾದರೂ ಡೀಸಲ್ ಸಿಗುತ್ತದೆ. ಬ್ಯಾರಲ್‌ಗಟ್ಟಲೆ ಡೀಸಲ್ ಸಿಗುತ್ತದೆ. ನೀವು ಹೋಗಿ ನೋಡಬೇಕಾ? ಯಾರು ಬೇಕಾದರೂ ಮಂತ್ರಿಗಳು ಇವತ್ತು ಸಾಯಂಕಾಲ ಹೋಗಿ ನೋಡಬಹುದು. ಈ ಕೆಲಸ ಅವ್ಯಾಹತವಾಗಿ ನಡೆಯುತ್ತಾ ಇದೆ. ಕನಕಪುರದಿಂದ ಬೆಂಗಳೂರಿನವರೆಗೆ ಗ್ರಾನೈಟ್ ಕಲ್ಲುಗಳ ಲಾರಿಗಳು ಹೋಗುತ್ತವೆ. ದೊಡ್ಡ ದೊಡ್ಡ ಶಬ್ದಗಳನ್ನು ಮಾಡುತ್ತವೆ. ದೊಡ್ಡ ದೊಡ್ಡ ವಾಹನಗಳು ಹೋಗುತ್ತವೆ. ಆ ವಾಹನಗಳು ರೋಡಿನಲ್ಲಿ ಹೋಗುತ್ತಾ ಇದ್ದರೆ ನಮಗೆ ಭಯ ಆಗುತ್ತದೆ. ನಾವು ಪಕ್ಕಕ್ಕೆ ಸರಿದು ಬಿಡುತ್ತೇವೆ. ಅಂತಹ ಸ್ಥಿತಿ ಬಂದಿದೆ. ಅದಕ್ಕೆ ಎಷ್ಟು ಬೇಕಾದರೂ ಡೀಸೆಲ್ ಸಿಗುತ್ತದೆ. ನಮ್ಮ ರೈತರಿಗೆ ಮಾತ್ರ ಡೀಸಲ್ ಸಿಗುತ್ತಾ ಇಲ್ಲ. ನಾನು ಕೇವುತ್ತಿದ್ದೇನೆ, ಡೀಸಲ್ ಯಾರಿಗೆ ಅವಶ್ಯಕತೆ ಇದೆ ಯಾರಿಗೆ ಟ್ರ್ಯಾಕ್ಟರ್ ಇದೆ ಯಾರಿಗೆ ಡೀಸಲ್ ಪಂಪುಸೆಟ್ಟು ಇದೆ ಅವರಿಗೆ ಕರ್ಡ್ ಮಾಡಿ ಕೊಡಿ ಕಾರ್ಡ್ ಮಾಡಿ ಕೊಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ? ಯಾಕೆ ನೀವು ಜಿಲ್ಲಾಧಿಕಾಗಳಿಗೆ ಹೇಳಿ ಇದನ್ನು ಏಕೆ ಮಾಡಿಸ ಬಾರದು? ಆದ್ದರಿಂದ ಈ ಸರ್ಕಾರ ಬರಗಾಲ ಪರಿಸ್ಥಿತಿಯನ್ನು ಎದುರಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳುತ್ತೇನೆ. ನೀವು ಹೇಗಾದರೂ ಅರ್ಥ ತಿಳಿದುಕೊಳ್ಳಿ. 180 ಜನ ಇರುವ ಶಾಸಕಾಂಗದ ಪಕ್ಷದ ಸರ್ಕಾರ ನಿಮ್ಮದಾಗಿ ಬಡವರ ಪರವಾಗಿ ಮಾತನಾಡತಕ್ಕ ಸರ್ಕಾರ ನಿಮ್ಮದಾಗಿ ಏಕೆ ಈ ಕೆಲಸ ಮಾಡುತ್ತಾ ಇಲ್ಲವೆಂದು ನನಗೆ ಅರ್ಥ ಆಗುತ್ತಿಲ್ಲ, ಇದನ್ನು ನಾನು ಖಂಡಿಸುತ್ತೇನೆ. ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡತಕ್ಕಂಥಾದದ್ದು ಏನೆಂದರೆ ಕೊನೆಯ ಪಕ್ಷ ಇನ್ನೂರು ಕೋಟಿ ರೂಪಾಯಿಗಳನ್ನು ನೀವು ಖರ್ಚು ಮಾಡಬೇಕು. ಬರ ಬಂದಿರತಕ್ಕ ಪ್ರತಿ ಒಂದು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಕೊನೆಯ ಪಕ್ಷ 50-60 ಲಕ್ಷ ರೂಪಾಯಿ ಬೇಕಾಗುತ್ತದೆ. ಕೊನೆಯ ಪಕ್ಷ ನೂರು ಕೋಟಿ ರೂಪಾಯಿಯನ್ನು ನೀವು ಈ ಬಾಬ್ತಿಗಾಗಿ ಖರ್ಚು ಮಾಡಿ. ತಕ್ಷಣ ಕೇಂದ್ರ ಸರ್ಕಾರಕ್ಕೆ ಎಲ್ಲ ಪಕ್ಷಗಳ ಒಂದು ನಿಯೋಗವನ್ನು ತೆಗೆದುಕೊಂಡು ಹೋಗಬೇಕು. ಇದನ್ನು ಏಕೆ ಮಾಡುತ್ತಿಲ್ಲ. ನಡೆಯಿರಿ ಪ್ರಾಧಾನಿಯವರ ಹತ್ತಿರ

ಹೋಗೋಣ, ನಾವೂ ಬರುತ್ತೇವೆ. ಬರಗಾಲದ ಕೆಲಸ ಬಹಳ ಇದೆ. ನಾವು ಇಕ್ಕಟ್ಟಿನ ಸ್ಥಿತಿಯಲ್ಲಿ ಇದ್ದೇವೆ. ಇವತ್ತು ಪ್ರಾಧಾನಿಯವರ ಹತ್ತಿರ ಹೋಗೋಣ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಏಕೆ ಇದರ ಬಗ್ಗೆ ಮನಸ್ಸು ಮಾಡಬಾರದು? ರೈತರಿಗೆ ಡೀಸೆಲ್ ಹಂಚಿಕೆಯಲ್ಲಿ ಕಾರ್ಡನ್ನು ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಯಾವುದೇ ಕಾರಣದಿಂದಲೂ ಮಾರ್ಚ್ 31ರ ನಂತರ ಸಾಲ ವಸೂಲಾತಿಯನ್ನು ನೀವು ಕಡ್ಡಾಯವಾಗಿ ಮಾಡುವುದಕ್ಕೆ ಹೋಗಬೇಡಿ ಎಂದು ನಾನು ಹೇಳುತ್ತೇನೆ. ನಿಮ್ಮ ಸರ್ಕಾರಕ್ಕೆ ಮಿತವ್ಯಯ ಎನ್ನುವುದೇ ಇಲ್ಲ. ನಾನು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಸಂದರ್ಭದಲ್ಲಿ ಇದರ ಬಗ್ಗೆ ಮಾತನಾಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಆ ಕಡೆಯಲ್ಲಿ ಕೊಲ್ಲಿಯುದ್ಧ ನಡೆಯುತ್ತಾ ಇದೆ. ತಾವುಗಳು ಎಲ್ಲಾ ಕಡೆಗಳಲ್ಲಿಯೂ ಪೆಟ್ರೋಲ್ ಡೀಸೆಲ್ ಮಿತ ವ್ಯಯ ಮಾಡಬೇಕೆಂದು ಹೇಳಿಕೆಗಳನ್ನು ಕೊಡುತ್ತಾ ಇದ್ದೀರಿ. ಹೇಳಿಕೆಗಳನ್ನು ಕೊಡುತ್ತಿರುವ ನೀವುಗಳೆಲ್ಲರೂ ಆ ಕುರಿತು ಯಾವ ರೀತಿಯಲ್ಲಿ ಇದ್ದೀರಿ ಎಂಬುದನ್ನು ನಿಮ್ಮ ನಿಮ್ಮ ಆತ್ಮಕ್ಕೆ ಪ್ರಶ್ನೆಗಳನ್ನು ಹಾಕಿಕೊಳ್ಳಿ. ರಾಜ್ಯದಲ್ಲಿ ಬರಗಾಲ ಪರಿಸ್ಥಿತಿಯು ಹೆಚ್ಚುತ್ತಿದ್ದಂತೆಯೇ ಬೆಂಕಿ ಅನಾಹುತಗಳು ಕೂಡ ಹೆಚ್ಚಿಗೆ ಆಗುತ್ತಾ ಇವೆ. ಅದನ್ನು ನಿರ್ವಹಿಸುವಲ್ಲಿ ನಿಮ್ಮ ಪೋಲೀಸ್ ಇಲಾಖೆಯವರಿಗೆ ಸೂಚನೆ ಕೊಟ್ಟು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಅಗ್ನಿಶಾಮಕ ದಳಗಳು ಇರುವಂತೆ ಒಂದು ವ್ಯವಸ್ಥೆಯನ್ನು ಮಾಡಿ. ಹಾಗೆಯೇ ಈ ಪರಿಸ್ಥಿತಿ ಸಾಂಕ್ರಾಮಿಕ ರೋಗಗಳು ಹೆಚ್ಚಾಗಿ ಪ್ರಾರಂಭವಾಗುತ್ತವೆ. ಕಾಲರಾ, ಅತಿಸಾರ ಮುಂತಾದ ರೋಗಗಳು ಕಾಣಿಸಿಕೊಳ್ಳುವುದು ಇಂಥ ಕಾಲದಲ್ಲಿಯೇ ಇದರ ಕಡೆಗೆ ಹೆಚ್ಚು ಗಮನಕೊಟ್ಟು ಸೂಕ್ತ ಮುಂಜಾಗರೂಕತಾ ಕ್ರಮವನ್ನು ತೆಗೆದುಕೊಳ್ಳಲು ನಿಮ್ಮ ಆರೋಗ್ಯ ಇಲಾಖಾ ಅಧಿಕಾರಿಗಳಿಗೆ ಸೂಚನೆ ಮಾಡಬೇಕು. ಇನ್ನೊಂದು ಮುಖ್ಯ ವಿಚಾರ ಅಂದರೆ, ರಾಜ್ಯದಲ್ಲಿ ಈ ವರ್ಷ ನಡೆಯುತ್ತಿರುವ ಜಾತ್ರೆಗಳನ್ನು ರದ್ದುಗೊಳಿಸಬೇಕು. ಕಾರಣ ಏನೆಂದರೆ ಜಾತ್ರೆಗಳನ್ನು ನಡೆಸುವುದಕ್ಕೆ ಹೋದರೆ ಅಲ್ಲಿ ನೀರು ಹೆಚ್ಚು ಬೇಕಾಗುತ್ತದೆ. ಹೀಗೆ ನೀರಿಲ್ಲದೇ ಇರುವಾಗ ಹೆಚ್ಚು ವ್ಯಯ ಮಾಡುವುದು ತಪ್ಪಬೇಕು. ಆ ಕಾರಣಕ್ಕಾಗಿ ಜಾತ್ರೆಗಳನ್ನು ರದ್ದು ಮಾಡಬೇಕೆಂದು ಸೂಚನೆ ಕೊಡಲಿಚ್ಛಿಸುತ್ತೇನೆ.

ಕೊನೆಯದಾಗಿ ನಾನು ಒಂದು ಮೋಷನನ್ನು ಮೂವ್ ಮಾಡಿದ್ದೆ. ನಿಯಮ 301ರ ಪ್ರಕಾರವಾಗಿ ಈ ಸದನದ ಒಂದು ಸಮಿತಿಯನ್ನು ಮಾಡಬೇಕು. ಇಂಥ ಸಮಿತಿಗಳನ್ನು ಮಾಡುವುದು ಹೊಸತೇನೂ ಅಲ್ಲ. ಅದರಲ್ಲಿ ಎಲ್ಲಾ ಪಕ್ಷದವರು ಇರಬೇಕು. ಎಲ್ಲಾ ಪಕ್ಷದ ಸದಸ್ಯರುಗಳು ಬರ ಇರತಕ್ಕಂಥ ಜಿಲ್ಲೆಗಳಲ್ಲಿ ಪ್ರವಾಸವನ್ನು ಮಾಡಬೇಕು. ಆಯಾಯ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಏನು ಮಾಡಿದ್ದಾರೆ ಜಿಲ್ಲಾಪರಿಷತ್‌ನವರು ಏನು ಮಾಡಿದ್ದಾರೆ ಎಂಬುದನ್ನು ನೋಡಿ ತಿಳಿದುಕೊಳ್ಳಬೇಕು. ಈ ಅಧಿವೇಶನವು ಇನ್ನೂ 15-20 ದಿವಸಗಳ ಕಾಲ ಇರುತ್ತದೆ. ಆ ಮೇಲೆ ನಾವು ಪುನಃ ಬಜೆಟ್ ಅಪ್ರೂವ್ ಮಾಡುವುದಕ್ಕೆ ಸೇರುತ್ತೇವೆ. ಆ ಸಂದರ್ಭದಲ್ಲಿ ಈ ಸದನದ ಸಮಿತಿಯವರು ಬರಗಾಲದ ಬಗ್ಗೆ ತಮ್ಮ ವರದಿಯನ್ನು ಕೊಡುವಂತಾಗಬೇಕು. ಇದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ಆದುದರಿಂದ ನಾನು ಕಳುಹಿಸಿರತಕ್ಕಂಥ ನಿರ್ಣಯಕ್ಕೆ ಎಲ್ಲರೂ ಬೆಂಬಲವನ್ನು ಸೂಚಿಸಬೇಕೆಂದು ಒತ್ತಾಯಿಸಿ, ಸರಕಾರವು ಬರಗಾಲದ ಈ ಪರಿಸ್ಥಿತಿಯಲ್ಲಿ ಏನು ಕಾರ್ಯಕ್ರಮಗಳನ್ನು ಕೈಗೊಂಡಿದೆ ಎಂದು ಕೇಳಬಯಸಿ, ಅದರ ನೀತಿಯನ್ನು ಖಂಡಿಸಿ, ಈಗಲಾದರೂ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಎಚ್ಚರಿಕೆ ವಹಿಸಬೇಕೆಂದು ಹೇಳಿ ಬರಗಾಲವನ್ನು ಎದುರಿಸಲು ಸೂಕ್ತ ಪರಿಹಾರ ಕಾಮಗಾರಿಗಳನ್ನು ಸಕಾಲದಲ್ಲಿ ತೆಗೆದುಕೊಳ್ಳಬೇಕೆಂದು ಕೇಳಿಕೊಂಡು ಅವಕಾಶ ಕೊಟ್ಟ ತಮ್ಮನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : (ಚಾಮರಾಜನಗರ) ಉಪಾಧ್ಯಕ್ಷಿಣಿಯವರೇ ನನಗೆ ಅವಕಾಶವನ್ನು ದಯಮಾಡಿ ಮಾಡಿಕೊಡಬೇಕು.

ಉಪಾಧ್ಯಕ್ಷಿಣಿಯವರು: ನೀವು ಪ್ರಸ್ತಾಪ ಮಾಡಬೇಕಿಲ್ಲ. ಈಗಾಗಲೇ ಅವರು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ನಾನು ಮಾಡಿದ ಹಾಗೆ ಆಗಲಿಲ್ಲ. ನಾನು ಏನು ಹೇಳಬೇಕಾಗಿತ್ತು ಅದನ್ನು ಅವರು ಹೇಳಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ನಿನ್ನೆ ನಾನು ಕೂಡ ಹೆಸರು ಕೊಟ್ಟಿದ್ದೇನೆ. ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಉಪಾಧ್ಯಕ್ಷಿಣಿಯವರು : ಮಾನ್ಯ ವಾಟಾಳ್ ನಾಗರಾಜ್‌ರವರು ಒಂದು ನಿಮಿಷದಲ್ಲಿ ತಮ್ಮ ಮಾತುಗಳನ್ನು ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷಿಣಿಯವರೆ, ನಿನ್ನೆ ದಿವಸ ಈ ಸದನದಲ್ಲಿ ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಬಗ್ಗೆ ನಾವು ಬಹಳ ಹೆಚ್ಚಿನ ಗಮನವನ್ನು ಹರಿಸಿದ್ದೇವೆ, ಅದನ್ನು ಪರಿಹಿಸಲು ಸುಮಾರು 300 ಕೊಳವೆ ಬಾವಿಗಳನ್ನು ತೆಗೆಯುತ್ತೇವೆ, ಟ್ಯಾಂಕ್‌ಗಳನ್ನು ನಿರ್ಮಿಸುತ್ತೇವೆ ಎಂದೆಲ್ಲಾ ಮಾನ್ಯರುಗಳು ಹೇಳಿದ್ದಾರೆ. ಆದರೆ ನಾನು ಇಂದು ಬೆಳಿಗ್ಗೆ 6 ಗಂಟೆಯಿಂದ 10 ಗಂಟೆಯ ವರೆಗೆ ಸುಮಾರು ಅರ್ದ ಬೆಂಗಳೂರನ್ನು ಸುತ್ತಿದ್ದೇನೆ. ಆದರೆ ಅಲ್ಲೆಲ್ಲೂ ಕುಡಿಯುವ ನೀರಿನ ಸಮರ್ಪಕ ಸರಬರಾಜು ಇಲ್ಲ. ಎಲ್ಲಿ ಕೇಳಿದರೂ ಕುಡಿಯುವ ನೀರು ಸರಬರಾಜು ಆಗುತ್ತಿಲ್ಲ ಎಂದು ಜನರು ಹೇಳುತ್ತಾರೆ. ಮಾನ್ಯರು ಹೇಳಿದ ಹಾಗೆ ಕೊಳವೆ ಬಾವಿಗಳನ್ನು ಎಲ್ಲಿ ತೆಗೆಸಿದ್ದಾರೋ ನನಗಂತೂ ಗೊತ್ತಿಲ್ಲ. ಜಲಮಂಡಳಿಯವರು ವಾರಕ್ಕೆ 5 ದಿವಸಗಳಿಗೊಮ್ಮೆ 3 ದಿವಸಗಳಿಗೊಮ್ಮೆ ನೀರು ಕೊಡುತ್ತೇವೆ ಎಂದು ಹೇಳುವುದಕ್ಕೆ ಹೊರಟಿದ್ದಾರೆ. ಸರಕಾರದವರು ಹೇಳಿದ ಪ್ರಕಾರ ನಡೆದುಕೊಳ್ಳುತ್ತಾ ಇಲ್ಲ. ತಿಪ್ಪಗೊಂಡನ ಹಳ್ಳಿ ಜಲಾಶಯದಲ್ಲಿ ಇನ್ನು ಕೆಲವೇ ಕೆಲವು ದಿವಸಗಳಿಗಾಗುವಷ್ಟು ನೀರು ಇರಬಹುದು. ಅದಾದಮೇಲೆ ಬೆಂಗಳೂರಿಗೆ ಕುಡಿಯುವ ನೀರಿನ ಸರಬರಾಜು ಮಾಡುವುದು ಹೇಗೆ ಎಂಬ ಪ್ರಶ್ನೆ ಇದೆ. ಇಂಥ ಚರ್ಚೆ ನಡೆಯುತ್ತಿರುವಾಗ ಮಾನ್ಯ ಸಚಿವರುಗಳು ತಮ್ಮ ಮನಸ್ಸಿಗೆ ಬಂದ ಹಾಗೆ ಬರುತ್ತಾರೆ, ಹೋಗುತ್ತಾರೆ. ಅವರು ಹಾಗೆ ಮಾಡುವುದಕ್ಕೆ ಇದೇನು ತಿಂಡಿ ಹೋಟೆಲ್ ಅಲ್ಲವಲ್ಲ? ಅವರಿಗೂ ಸೂಕ್ತ ಜವಾಬ್ದಾರಿ ಇದೆ. ಅವರುಗಳು ಇಲ್ಲಿ ಉಪಸ್ಥಿತರಿರಬೇಕು. ನಾವುಗಳು ಕೂಡ ಇಲ್ಲಿ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಕುಳಿತಿರುತ್ತೇವೆ ಅವರೂ ಇರಬೇಕು. ನಾವುಗಳು ಅನಾವಶ್ಯಕವಾಗಿ ಹೊರಗೆ ಹೋಗುವುದಿಲ್ಲ. ನಾನು ಸರಕಾರದವರಲ್ಲಿ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ಈ ಸಮಸ್ಯೆಗಾಗಿ ರಾಜ್ಯದ ಎಲ್ಲಾ ವಿರೋಧಿ ಪಕ್ಷದವರು ವಿಧಾನಸೌಧದ ಮುಂದೆ ಧರಣಿ ಮಾಡುತ್ತಾ ಇದ್ದಾರೆ. ಸರಕಾರದವರು ಹೇಳಿದಂತೆ ವಿರೋಧಿ ಪಕ್ಷದವರನ್ನು ಕರೆಸಿ ಇಷ್ಟರವರೆಗೆ ಯಾವುದೇ ಒಂದು ತೀರ್ಮಾನಕ್ಕೆ ಬರಲಿಲ್ಲ ಇದು ಸರಿಯಲ್ಲ...

ಉಪಾಧ್ಯಕ್ಷಿಣಿಯವರು : ಮಾನ್ಯ ಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಪಿ.ಜಿ. ಆರ್.ಸಿಂಧ್ಯಾ : ಏಕೆಂದರೆ, ನಿನ್ನೆ ದಿನ ಶ್ರೀ ಜಾರ್ಜ್ ಅವರು ಆಶ್ವಾಸನೆ ಕೊಟ್ಟಿದ್ದರು. ಯಾರು ಧರಣಿ ಕುಳಿತಿದ್ದಾರೆ ಅವರನ್ನು ಕರೆಸಿ ಮಾತನಾಡಿ ಅವರ ಸಮಸ್ಯೆಯನ್ನು ಬಗೆಹರಿಸುತ್ತೇವೆಂದಿದ್ದರು. ಆದರೆ ಇದುವರೆಗೂ ಅದನ್ನು ಮಾಡಿಲ್ಲ. ನಿನ್ನೆ ಆಶ್ವಾಸನೆ ಕೊಟ್ಟು ಇಂದು ನಾಪತ್ತೆಯಾಗಿದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ : ನಿನ್ನೆ ಸನ್ಮಾನ್ಯ ಸಚಿವರಿಗೆ ಹೇಳಿದ್ದೆ ಧರಣಿಯಾಗುತ್ತದೆ, ಎಲ್ಲಾ ವಿರೋಧ ಪಕ್ಷದವರು ಮಾಡುತ್ತಾ ಇದ್ದಾರೆ, ನೀವು ಬಂದು ಮಾತನಾಡಿ ಎಂದು ಹೇಳಿದ್ದೆ. ಆದರೆ ಏನೂ ಮಾಡಲಿಲ್ಲ, ಮಾತೂ ಆಡಿಲ್ಲ, ಇದು ಬೇಜವಾಬ್ದಾರಿ ಸರ್ಕಾರ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ಈ ನೀತಿಯನ್ನು ವಿರೋಧಿಸುತ್ತೇನೆ ಯಾವುದೇ ವಿರೋಧಪಕ್ಷದವರನ್ನೂ ಕರೆದು ಮಾತನಾಡಿಲ್ಲ, ನೀರಿನ ಬಗ್ಗೆ ಕಾಳಜಿ ಇಲ್ಲ, ನಾನು ಒಂದಾದರೂ ಕೊಳವೆಬಾವಿ ತೆಗೆಯುತ್ತಿದ್ದಾರಾ ಎಂದು ನೋಡಿದೆ, ಒಂದೂ ಇಲ್ಲ, ಹೋಗಲಿ ವಿರೋಧಪಕ್ಷದವರನ್ನು ಕರೆಸಿಯೂ ಇಲ್ಲ, ಇದು ಬೇಜವಾಬ್ದಾರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಜಾರ್ಜ್ ಅವರು ಕರೆಸಿ ಮಾತನಾಡುತ್ತೇನೆಂದು ನಿನ್ನೆ ಹೇಳಿದ್ದರು. ಅವರು ಬಂದ ಮೇಲೆ ಮಾತನಾಡಬಹುದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನಂತೂ ಇಲ್ಲ ಕುಳಿತುಕೊಳ್ಳುವುದಕ್ಕೆ ತಯಾರಿಲ್ಲ ಇದು ಜನವಿರೋಧಿ, ಇದನ್ನು ಪ್ರತಿಭಟನೆ ಮಾಡಬೇಕಾಗಿದೆ. ಬೆಂಗಳೂರಿನಲ್ಲಿ 45 ಲಕ್ಷ ಜನ ಇದ್ದಾರೆ, ಅವರ ಪರಿಸ್ಥಿತಿ ಏನು? ಆಗಲೇ ನಗರದ ಮಾಜಿ ಮೇಯರ್ ಶ್ರೀ ಅನಂತಕೃಷ್ಣ ಅವರು ನನ್ನ ಮನೆಗೇ ನೀರು ಬರುತ್ತಿಲ್ಲ ಎಂದು ಹೇಳಿದರು. ಶಾಸಕರ ಮನೆಯಲ್ಲಿಯೇ ನೀರು ಬರುತ್ತಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ನೀತಿ ಸರಿಯಿಲ್ಲ, ಇದು ಘೋರ ಅನ್ಯಾಯ ನಿಮ್ಮ ಸರ್ಕಾರಕ್ಕೆ ಧಿಕ್ಕಾರ ಹಾಕುತ್ತೇನೆ, ಮಾತುಕತೆಗೆ ಕರೆಸಿಲ್ಲ -ಇದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುವೆನು.

(ಶ್ರೀ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಿನ್ನೆ ಮಾನ್ಯ ಜಾರ್ಜ್‌ರವರು ಅವರನ್ನು ಕರೆಸಿ ಮಾತನಾಡುತ್ತೇನೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ ಇದುವರೆಗೂ ನಮ್ಮನ್ನು ಕರೆಸಿಲ್ಲ ಏನಾಗಿದೆ ಎಂದು ನಮಗೆ ಗೊತ್ತಾಗಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೌನ್ಸಿಲ್‌ನಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದಾರೆಂದು ಕೇಳಿದೆ. ಮತ್ತೊಮ್ಮೆ ಕರೆಸಿ ಮಾತನಾಡಿ ಎಂದು ಹೇಳುತ್ತೇನೆ. ತಾವು ಸ್ಟೇಟ್‌ಮೆಂಟ್ ನೋಡಿರಬಹುದು. ಬೋರ್‌ವೆಲ್ಲನ್ನು ನಾವು ಕೊಟ್ಟಿದ್ದಾದರೂ ನೋಡಿ, ಆಮೇಲೆ ಬೈಯಿರಿ ಬೈಸಿಕೊಳ್ಳುತ್ತೇವೆ ಅದಕ್ಕಾಗಿಯೇ ಬಂದಿದ್ದೇವೆ. ಆದರೆ ಬೆಂಗಳೂರು ವಾಟರ್ ಸಪ್ಲೈಗೆ ನ್ಯಾಚುರಲ್ ಕಲಾಮಿಟಿ ಫಂಡ್ ಅಲ್ಲದೆ ಸುಮಾರು 50ಲಕ್ಷ ರೂಪಾಯಿಗಳನ್ನು ಒಂದೇ ದಿವಸ ಬಿಡುಗಡೆ ಮಾಡಿದ್ದೇವೆ. Minimum 200 bore wells in Bangalore City alone they can take up.In one instalment I have given. ಅದನ್ನು ತಾವು ಸ್ವಲ್ಪ ನೋಡಿದರೆ ಸರಿಹೋಗಬಹುದು.

ಶ್ರೀ ಆರ್.ವಿ.ದೇಶಪಾಂಡೆ : ನಿನ್ನೆ ಕಾಲಿಂಗ್ ಅಟೆನ್‌ಷನ್ ರೇಸಾದ ಮೇಲೆ ಒಂದು ಕೋಟಿ ಚಿಲ್ಲರೆ ಹಣ ಬಿಡುಗಡೆಯಾಗಿದೆ. ಆದರೆ ಕಳೆದ ಎರಡು ತಿಂಗಳಿಂದ ಸಚಿವರು 600, 300 ಬೋರ್‌ವೆಲ್ ತೆಗೆಸುತ್ತೇನೆ ಎಂದು ಹೇಳಿಕೆ ಕೊಡುತ್ತಿದ್ದಾರೆ. ಆದರೆ ಕೇವಲ 7 ಮಾತ್ರ ತೆಗೆಸಿದ್ದಾರೆ. ಅದರಲ್ಲಿ 6 ಅವರ ಕ್ಷೇತ್ರದಲ್ಲೇ ಇವೆ.

He never denied. I also charged that only in your Constituency borewells have been dugged.

SRI M. MALLIKARJUNA KHARGE : I will give you the Government order we have released money 15 days back.

SRI R.V. DESHPANDE : Orders and sanctioning of money is different. Funds were released only yesterday...+

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನ್ಯಾಚುರಲ್ ಕಲಾಮಿಟೀಸ್‌ನಲ್ಲಿ ಡೈರೆಕ್ಟ್ ಆಗಿ ಚೆಕ್ ಹೋಗುತ್ತದೆ. ಅದು ತಮಗೂ ಕೂಡಾ ಗೊತ್ತಿದೆ.

.+ ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಅಧ್ಯಕ್ಷಿಣಿಯವರೇ, ಬಹುಶಃ ನನ್ನ ಒಂದು ಅರಿವಿಗೆ ಬಂದಂತೆ 1964-65ನೇ ಸಾಲಿನಲ್ಲಿ ಇದ್ದಂಥ ಒಂದು ಬರಗಾಲದ ಭೀಕರವಾದ ಪರಿಸ್ಥಿತಿಯನ್ನು ನಮ್ಮ ಗ್ರಾಮಾಂತರ ಜಿಲ್ಲೆಯಲ್ಲಿ ಇವತ್ತು ನಾವು ಕಾಣುತ್ತಿದ್ದೇವೆ. ಕುಡಿಯುವ ನೀರಿನ ಸಮಸ್ಯೆಯಂತೂ ವಿಪರೀತವಾಗಿದೆ. ಈಗಾಗಲೆ ತೋಡಿದಂಥ ಬೋರ್‌ವೆಲ್‌ಗಳೆಲ್ಲಾ ಒಣಗಿ ಹೋಗಿ ಕೆರೆಕುಂಟೆಗಳಲ್ಲಿ ಕಿಂಚಿತೂ ಸಹಾ ನೀರಿಲ್ಲದೆ ಕೊರೆಕುಂಟೆಗಳೆಲ್ಲಾ ಒಣಗಿಹೋಗಿ, ತೋಡುಬಾವಿಗಳೆಲ್ಲಾ ಬತ್ತಿ ಹೋಗಿರುವ ದಾರುಣವಾದ ಒಂದು ಪರಿಸ್ಥಿತಿಯನ್ನು ಇವತ್ತು ನಾವು ಕಾಣುತ್ತಿದ್ದೇವೆ. ಅಲ್ಪಸ್ವಲ್ಪ ಬೆಳೆಯಾಗಿ ಕೇವಲ ಎರಡು-ಮೂರು ತಿಂಗಳಿಗೆ ಆಗುವಷ್ಟು ಆಹಾರ ಮತ್ತು ದನಕರುಗಳಿಗೆ ಮೇವು-ಇಷ್ಟು ಮಾತ್ರ ಲಭ್ಯವಿತ್ತು. ಈಗಾಗಲೇ ಬಯಲುಸೀಮೆ ಕಡೆ ಸುಗ್ಗಿಕಾಲ ಮುಗಿದುಹೋಗಿ ಇವತ್ತಿನ ದಿವಸ ಎಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ ಎಂದರೆ, ದನಕರುಗಳಿಗೂ ಮೇವು ಇಲ್ಲ, ಕುಡಿಯುವ ನೀರಿಗಾಗಿ ಬಹಳಷ್ಟು ಕಷ್ಟಪಡುತ್ತಿದ್ದೇವೆ. ನಮ್ಮ ತಾಲ್ಲೂಕಿನಲ್ಲಂತೂ ಈವರೆಗೂ ಕೆಲಸವನ್ನು ಮಾಡಿದಂಥ ಕಿರು ನೀರು ಸರಬರಾಜು, ಕೊಳಾಯಿ ನೀರು ಸರಬರಾಜು ಮತ್ತು ಕೈಪಂಪುಗಳು ಇದೆಲ್ಲಾ ಬಹುಪಾಲು ಇವತ್ತು ಒಣಗಿಹೋಗಿದೆ. ಬಹುಶಃ ಈ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಸರಕಾರದವರು ಮುಂಚಿತವಾಗಿ ಕ್ರಮಗಳನ್ನು ಕೈಗೊಂಡಿದ್ದರೆ ಸರಿಹೋಗುತ್ತಿತ್ತು ಎನ್ನಕ್ಕಂಥ ಒಂದು ಸಾರ್ವತ್ರಿಕವಾದ ಅಭಿಪ್ರಾಯ ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲೂ ಕೇಳಿಬರುತ್ತಿದೆ. ಅದರೂ ಕೂಡಾ ಸರ್ಕಾರದವರೂ ಹೆಚ್ಚಿನ ಕಾಳಜಿಯನ್ನು ವಹಿಸಿ ಕುಡಿಯುವ ನೀರಿಗಾಗಿ ಮತ್ತೆ ಉದ್ಯೋಗ ಇಲ್ಲದೇ ಇರತಕ್ಕಂಥವರಿಗೆ ಉದ್ಯೋಗವನ್ನು ನಿರ್ಮಾಣ ಮಾಡಿಕೊಡುವುದಕ್ಕಾಗಿ ಒಂದಿಷ್ಟು ಹಣವನ್ನು ಇತ್ತೀಚೆಗೆ ಬಿಡುಗಡೆ ಮಾಡಿದ್ದಾರೆ. ಈಗ ಸರ್ಕಾರ ತೆಗೆದುಕೊಳ್ಳಬೇಕಾಗಿರತಕ್ಕಂಥ ಮುಖ್ಯವಾದ ಕಾರ್ಯಕ್ರಮ ಎಂದರೆ,ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು. ಎಲ್ಲಾ ಗ್ರಾಮಗಳಿಗೂ ಸಾಕಷ್ಟು ನೀರು ದೊರೆಯುವ ರೀತಿಯಲ್ಲಿ ಸರ್ಕಾರ ತೀವ್ರವಾದ ಕ್ರಮವನ್ನು ಕೈಗೊಳ್ಳಬೇಕು. ಈಗಾಗಲೆ ಬತ್ತಿ ಹೋಗಿರತಕ್ಕಂಥ ಕರೆಕುಂಟೆಗಳಲ್ಲಿ ಮತ್ತೆ ತೋಡುಬಾವಿಗಳನ್ನು ಮಾಡಿಸಿ ಜಲವಸತಿ ಇರತಕ್ಕಂಥ ಕಡೆ ಅಂತಹ ಸೌಕರ್ಯವನ್ನು ಏರ್ಪಡಿಸಿ ದನಕರುಗಳಿಗೆ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕು. ಮೇವಿನ ಸರಬರಾಜಂತೂ ಬಹಳ ಹೆಚ್ಚಿನ ರೀತಿಯಲ್ಲಿ ಆಗಬೇಕಾಗಿದೆ. ಬಹುಶಃ ನನಗಾದರೂ ಅನಿಸುತ್ತದೆ. ಕರ್ನಾಟಕ 132-135 ತಾಲ್ಲೂಕುಗಳಲ್ಲಿ ಇಂಥ ಒಂದು ಬರಗಾಲದ ಪರಿಸ್ಥಿತಿ ಇರುವುದರಿಂದ ಅವರು ಹುಲ್ಲನ್ನು ಎಲ್ಲಿಂದ ತರಬೇಕು. ಬಹುಶಃ ನೆರೆಯ ರಾಜ್ಯವಾದ ಆಂದ್ರಪ್ರದೇಶದಿಂದ ತರಬೇಕಾಗುತ್ತದೆ. ಅಷ್ಟು ದೂರ ಹೋಗಿ ರೈತರು ಹುಲ್ಲನ್ನು ಕೊಂಡು ಸರ್ಕಾರ ಒದಗಿಸತಕ್ಕಂಥ ಸಬ್ಸಿಡಿ ದರದಲ್ಲಿ ಲಾರಿಯಲ್ಲಿ ಹುಲ್ಲನ್ನು ತೆಗೆದುಕೊಂಡು ಬಂದು ದನಕರುಗಳನ್ನು ಸಾಕುವುದು ಬಹಳ ಕಷ್ಟವಾಗುತ್ತದೆ. ಅದಕ್ಕಾಗಿ ತಮ್ಮ ಮೂಲಕ ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಲಭ್ಯವಿರತಕ್ಕಂಥ ಕಡೆಯಿಂದ ಉಚಿತವಾಗಿ ಸಾಗಣಿಕೆ ಮಾಡಿಕೊಟ್ಟು ಎಲ್ಲೆಲ್ಲಿ ಬರಗಾಲ ಪರಿಸ್ಥಿತಿ ಇದೆ,

ಅಲ್ಲೆಲ್ಲಾ ರಿಯಾಯಿತಿ ದರದಲ್ಲಿ ಮೇವನ್ನು ಸರಬರಾಜು ಮಾಡಬೇಕು. ಏಕೆಂದರೆ ಆಹಾರ ಧಾನ್ಯಗಳನ್ನು ಮನುಷ್ಯರು ಹೇಗಾದರೂ ಲಭ್ಯ ಮಾಡಿ ಕೊಳ್ಳಬಹುದು. ಆದರೆ ದನಕರುಗಳಿಗೆ ಮೇವನ್ನು ಲಭ್ಯ ಮಾಡಿಕೊಳ್ಳಬೇಕಾದರೆ ತೀರಾ ಕಷ್ಟವಾಗುತ್ತದೆ. ಮೇಲಾಗಿ ಇನ್ನು ನಮ್ಮ ಕಡೆ ಮಳೆ ಪ್ರಾರಂಭವಾಗಬೇಕಾದರೆ ಕನಿಷ್ಠಪಕ್ಷ ಮೂರು ನಾಲ್ಕು ತಿಂಗಳು ಬೇಕು. ಈ ಮೂರು ನಾಲ್ಕು ತಿಂಗಳ ಪರಿಸ್ಥಿತಿಯನ್ನು ನಾವು ಯೋಚನೆ ಮಾಡಿದಾಗ ಎಂಥ ಕಷ್ಟದ ಕಾಲ ನಮಗೆ ಕಾದಿದೆ ಎಂದು ಊಹೆ ಮಾಡಿಕೊಳ್ಳುವುದಕ್ಕೂ ಕೂಡ ಕಷ್ಟವಾಗುತ್ತೆದೆ. ಈಗ ಇನ್ನೊಂದು ಬಹಳ ಮುಖ್ಯವಾದ ವಿಚಾರವೇನೆಂದರೆ ಸಧ್ಯಕ್ಕೆ ಸರಕಾರ ಸಹಕಾರ ಸಂಘಗಳಲ್ಲಿ ಇರತಕ್ಕಂಥ ಬಾಕಿಗಳನ್ನು ವಸೂಲು ಮಾಡುವುದನ್ನು ಮುಂದಕ್ಕೆ ಹಾಕಿದೆ. ಈ ಒಂದು ಪರಿಸ್ಥಿತಿ ಬಂದಿರುವಾಗ ರೈತ ತನ್ನ ಕುಟುಂಬದ ಪೋಷಣೆ ಮತ್ತು ತನ್ನ ಜಾನುವಾರುಗಳ ಪೋಷಣೆಯನ್ನು ಮಾಡಿಕೊಳ್ಳುವುದೇ ಬಹಳ ಮುಖ್ಯವಾಗಿರುವಾಗ ಸಾಲ ವಸೂಲಾತಿಯನ್ನೂ ಕೂಡಾ ಬಿಗಿ ಮಾಡಿದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಈ ಸಂದರ್ಭದಲ್ಲಿ ಇಂಥ ಒಂದು ಪರಿಸ್ಥಿತಿ ಬಂದಿರುವುದರಿಂದಾಗಿ ನಾನು ಸರ್ಕಾರದವರಲ್ಲಿ ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈಗ ಇರತಕ್ಕಂಥ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಿ ಸುಲಭದ ಕಂತಿನಲ್ಲಿ ಅಸಲನ್ನು ಕಟ್ಟತಕ್ಕಂಥ ರೀತಿಯಲ್ಲಿ ಮಾಡಿ ಅವರನ್ನು ಋಣಮುಕ್ತರನ್ನಾಗಿ ಮಾಡಬೇಕು. ಈ ರೀತಿಯ ಒಂದು ಸುಲಭದ ವ್ಯವಸ್ಥೆಯನ್ನು ಮಾಡಲಿಕ್ಕೆ ಸರ್ಕಾರ ಇದರ ಬಗ್ಗೆ ತೀವ್ರವಾದ ಒಂದು ಆಲೋಚನೆ ಮಾಡಿ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇಲ್ಲ ಅಂದರೆ ಕೂಡಿಕೊಳ್ಳುತ್ತಿರತಕ್ಕಂಥ ಅಸಲು ಮತ್ತು ಬಡ್ಡಿ ಜೊತೆ ಸೇರಿ ತುಂಬಾ ಹೆಚ್ಚಾಗತಕ್ಕಂಥ ಸಾಲದ ಹೊರೆಯನ್ನು ಈ ಒಂದು ಪರಿಸ್ಥಿತಿಯಲ್ಲಿ ರೈತಾಪಿ ಜನ ತೀರಿಸಲಿಕ್ಕೆ ಬಹಳ ಕಷ್ಟವಾಗುತ್ತದೆ. ಇದನ್ನು ಸರ್ಕಾರ ತೀವ್ರವಾಗಿ ಮನದಂಡು ರೈತ ಸಮುದಾಯಕ್ಕೆ ಒಂದು ಹೆಚ್ಚಿನ, ರೀತಿಯ, ಒಂದು ಉನ್ನತಮಟ್ಟದ ಒಂದು ರಿಯಾಯಿತಿಯನ್ನು ಕೊಡಬೇಕೆನ್ನುವ ಪ್ರಾರ್ಥನೆಯನ್ನು ತಮ್ಮ ಮೂಲಕ ನಾನು ಮಂಡಿಸುತ್ತಿದ್ದೇನೆ. ಇನ್ನು ಇರತಕ್ಕಂಥ ನಾಲ್ಕೈದು ತಿಂಗಳುಗಳ ಈ ಪರಿಸ್ಥಿತಿಗನುಗುಣವಾಗಿ ಕರ್ನಾಟಕ ಸರ್ಕಾರ ಅದರಲ್ಲೂ ನಮ್ಮ ಸನ್ಮಾನ್ಯ ಕಂದಾಯ ಮಂತ್ರಿಗಳು ಹೆಚ್ಚಿನ ಆಸ್ಥೆ ಮುತುವರ್ಜಿ ವಹಿಸಿ, ಎಲ್ಲೆಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಾಗಬೇಕು, ಎಲ್ಲೆಲ್ಲಿ ದನಕರುಗಳಿಗೆ ಮೇವಿನ ಸರಬರಾಜು ಆಗಲೇಬೇಕು ಮತ್ತು ಎಲ್ಲೆಲ್ಲಿ ಉದ್ಯೋಗಗಳನ್ನು ನಿರ್ಮಾಣ ಮಾಡಿಕೊಡಬೇಕು, ಆ ವಿಚಾರದಲ್ಲಿ ಹೆಚ್ಚಿನ ಕಾಳಜಿ ವಹಿಸಿ, ಕಾರ್ಯಕ್ರಮವನ್ನು ಕೈಗೊಂಡು ಈ ಒಂದು ಬರಗಾಲ ಪರಿಸ್ಥಿತಿಯನ್ನು ಬಹಳ ಯಶಸ್ವಿಯಾಗಿ ನಿಭಾಯಿಸುತ್ತೀರೆಂಬ ಒಂದು ಆಶಾಭಾವನೆಯನ್ನು ವ್ಯಕ್ತಪಡಿಸಿ, ಈಗಾಗಲೇ ಸರ್ಕಾರ ಏನು ಹಣ ಖರ್ಚುಮಾಡಿದೆ ಇದು ನಿಜವಾಗಿಯೂ ಸಮಾಧಾನವಾಗಿದೆ, ಇದನ್ನು ಮುಂದುವರೆಸಿಕೊಂಡು ಹೋಗಬೇಕೆಂದು ತಮ್ಮ ಮೂಲಕ ಮಂಡಿಸಿ, ನನಗೆ ಎರಡು ಮಾತುಗಳನ್ನು ಆಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಆರ್.ಎಲ್. ಜಾಲಪ್ಪ : (ದೊಡ್ಡಬಳ್ಳಾಪುರ): ಸನ್ಮಾನ್ಯ ಅಧ್ಯಕ್ಷಿಣಿಯವರೆ, ಈಗಾಗಲೇ ಬಹಳಷ್ಟು ಚರ್ಚೆಯಾಗಿರುವುದರಿಂದ, ನಾನು ಕೇವಲ ಹತ್ತು ನಿಮಿಷದಲ್ಲಿಯೇ ನನ್ನ ಭಾಷಣವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮೊಟ್ಟಮೊದಲನೆಯದಾಗಿ ನೀರಿನ ಸಮಸ್ಯೆ ಬಗ್ಗೆ ಈಗಾಗಾಲೇ ಬಹಳಷ್ಟು ಹೇಳಿದ್ದಾರೆ. ಈಗ ಬರಗಾಲ ಎಲ್ಲೆಲ್ಲಿವೆ, ಆ ತಾಲ್ಲೂಕುಗಳಲ್ಲಿ, ಕರೆಕಟ್ಟೆಗಳಲ್ಲಿ ಗುಬ್ಬಚ್ಚಿ ಕುಡಿಯುವುದಕ್ಕೆ ಕೂಡ ನೀರು ಇಲ್ಲ, ದನಕರುಗಳಿಗೆ ನೀರು ಇಲ್ಲ. ಈಗ ದನಕರುಗಳಿಗೆ ನೀರು ಕೊಡಬೇಕಾದರೆ, ಬೋರ್‌ವೆಲ್‌ಗಳಲ್ಲಿ ನೀರನ್ನು ಒದಗಿಸಬೇಕಾದ ಪರಿಸ್ಥಿತಿ ಬಂದಿದೆ. ಈಗ ಎಷ್ಟೆ ಹಣ

ಖರ್ಚಾದರೂ ಪರವಾಯಿಲ್ಲಾ, ಮೊದಲು ಈ ಬೋರ್‌ವೆಲ್‌ಗಳನ್ನು ಮಾಡಿಕೊಡಬೇಕಾಗಿದೆ. ಬೇರೆ ಎಲ್ಲಾ ಕೆಲಸಗಳನ್ನು ನಿಲ್ಲಿಸಿದರೂ ಏನು ತೊಂದರೆಯಾಗುವುದಿಲ್ಲ. ಈಗ ನಮ್ಮಲ್ಲಿರತಕ್ಕ ರಿಗ್ಸ್ ಸಾಲುವುದಿಲ್ಲ, ಬೇರೆ ರಾಜ್ಯಗಳಿಂದ ರಿಗ್ಸ್ ತಂದು, ಅವರುಗಳಿಗೆ ಕೆಲಸ ಒದಗಿಸಿ, ಅವರಿಂದ ಕೆಲಸವನ್ನು ತೆಗೆದುಕೊಳ್ಳಬೇಕಾಗಿದೆ. ನಮ್ಮ ಸರ್ಕಾರ ಇದ್ದಾಗ, ನಾವು ಅದನ್ನು ಮಾಡಿದ್ದೇವೆ. ನಮ್ಮಲ್ಲಿರತಕ್ಕ ರಿಗ್ಸ್ ನಂಬಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ನನಗೆ ಗೊತ್ತಿದ್ದ ಹಾಗೆ, ನೆನ್ನೆಯ ದಿವಸ ಮಾನ್ಯ ಸದಸ್ಯರೊಬ್ಬರು ಆಗ್ರೋ ಇಂಡಸ್ಟ್ರೀಸ್‌ನಲ್ಲಿ 5 ರಿಗ್ಸ್ ಮಾತ್ರ ಇದೆ ಎಂದು ಹೇಳಿದರು. ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರದವರು, ನೆಲಮಂಗಲದವರು, ಎಲ್ಲರೂ ಅವರಿಗೆ ಕೊಡುತ್ತಿದ್ದಾರೆ. ಅವರು ಕೇವಲ 5ರಿಗ್ಸ್ ಇಟ್ಟುಕೊಂಡು ಏನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಅವರು ಕೂಡ ಬೇರೆ ಪ್ರೈವೇಟ್ ರಿಗ್ಸ್ ತಂದು ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ, ಬೇರೆ ಕಡೆಯಿಂದ ರಿಗ್ಸ್ ತೆಗೆದುಕೊಂಡು ಬರಬೇಕು ಮತ್ತು ಸೂಪರ್‌ವಿಷನ್ ಸರಿಯಾಗಿ ಮಾಡಬೇಕು. ಯಾರೇ ಆಗಲಿ, 200 ಅಡಿ ಬೋರ್ ಕೊರೆದು 300ಅಡಿ ಎಂದು ಹೇಳಿ ದುಡ್ಡು ತೆಗೆದುಕೊಂಡು ಹೋಗುವಂಥಾದ್ದು ಆಗಬಾರದು. ಇದರ ಬಗ್ಗೆ ಯಾರನ್ನಾದರೂ ಜವಬ್ದಾರರನ್ನಾಗಿ ಮಾಡಬೇಕು. ಈಗ ಅಂತಹ ಜವಾಬ್ದಾರಿ ಇಲ್ಲ. ಒಂದು ಕಡೆ ಪಾಯಿಂಟ್ಸ್ ಮಾಡಿರುತ್ತಾರೆ, ಅವರು ಹೇಳುವುದಿಲ್ಲ, ಕೇಳುವುದಿಲ್ಲ, ಅಲ್ಲಿ ಹೋಗುತ್ತಾರೆ, ಬೋರ್ ಕೊರೆದು ಹೊರಟು ಹೋಗುತ್ತಾರೆ. ಒಂದು ಸಾವಿರ ಗ್ಯಾಲನ್ ನೀರು ಬಂತು, ಎರಡು ಸಾವಿರ ಗ್ಯಾಲನ್ ನೀರು ನೀರು ಬಂತು ಎಂದು ಹೇಳುತ್ತಾರೆ. ಕೆಲವು ಬೋರ್‌ವೆಲ್‌ಗಳನು ಡ್ರೈವ್ ಮಾಡಿದಾಗ ನೂರು ಗ್ಯಾಲನ್ ಕೂಡ ನೀರು ಬರುವುದಿಲ್ಲ. ಇದರಿಂದ ಹಣವೂ ವ್ಯಯವಾಗುತ್ತದೆ ಮತ್ತು ಫರ್‌ದರ್ ಹಳ್ಳಿಗಳಿಗೆ ರಿಗ್ಸ್ ಬೇಕಾದರೆ ಸಿಕ್ಕುವುದಿಲ್ಲ. ಈ ರೀತಿಯಲ್ಲಿ ವೇಸ್ಟ್ ಆಗುವುದನ್ನು ತಾವು ಉಳಿಸಬೇಕು. ನಮ್ಮ ಕಾಲದಲ್ಲಿ ಸುಮಾರು 60 ಸಾವಿರ ಬೋರ್‌ವೆಲ್ ಮಾಡಿದ್ದೆವು. ಆದರೆ ದುರದೃಷ್ಟವಶಾತ್, ಮಳೆ ಇಲ್ಲದೇ ಇರುವುದರಿಂದ, ಈ ವರ್ಷ 200 ಅಡಿ ನಾವು ಬೋರ್‌ವೆಲ್ ಮಾಡಿ ಒಂದು ಸಾವಿರ ಗ್ಯಾಲನ್ ನೀರು ಬರುತ್ತದೆ ಅಂದರೆ, ಮಳೆ ಬೀಳದಿದ್ದರೆ ಬರುವ ವರ್ಷಕ್ಕೆ ಅದು ಡ್ರೈ ಆಗುತ್ತದೆ. ಯಾವ ಬಾವಿಗಳಲ್ಲೂ ಒಂದು ಹನಿ ನೀರು ಕೂಡ ಸಿಕ್ಕುವುದಿಲ್ಲ. ಎಲ್ಲಿ ಬಾವಿಗಳೂ ಡ್ರೈ ಆಗಿವೆ. ಒಂದು ಕಾಲದಲ್ಲಿ ನಮ್ಮ ಹಳ್ಳಿಗಳ ಬಾವಿಗಳಲ್ಲಿ ಬಾವಿ ಮಾಡಿದಾಗ ಫುಟ್‌ಬಾಲ್ ಕಾಣುತ್ತಿದ್ದರೂ ನೀರು ಮಾತ್ರ ಬರುವುದು ಯಾವಾಗಲೂ ನಿಲ್ಲುತ್ತಾ ಇರಲಿಲ್ಲ. ಗೌರಿಬಿದನೂರು ಕಡೆ ಹತ್ತು ಹೆಚ್.ಪಿ. ಮೋಟಾರ್ ಹಾಕಿದರೆ ಕರೆಂಟ್ 15 ದಿವಸಕ್ಕೋ, ಒಂದು ತಿಂಗಳಿಗೋ ಒಂದು ಸಾರಿ ಹೋದಾಗ ಮಾತ್ರ ನೀರು ನಿಲ್ಲುತ್ತಾ ಇತ್ತೇ ಹೊರತು, ಇಲ್ಲದೇ ಹೋದರೆ ನೀರು ನಿಲ್ಲುತ್ತಾ ಇರಲಿಲ್ಲ.

ಇವತ್ತು ಏನಾಗಿದೆ ಎಂದರೆ, 100-150 ಅಡಿ ತೆರೆದ ಬಾವಿಗಳನ್ನು ತೋಡಿದರೂ ಕೂಡ ನೀರು ಸಿಕ್ಕುತ್ತಿಲ್ಲ. ಅದೃಷ್ಟವಶಾತ್, ಎಲ್ಲೋ ಅಲ್ಲೊಂದು, ಇಲ್ಲೊಂದು ಬೋರ್‌ವೆಲ್‌ಗಳನ್ನು ರೈತರು ಹಾಕಿಕೊಂಡಿದ್ದರೆ ಅಲ್ಲಿಗೆ ಹೋಗಿ ಅಲ್ಲಿಂದ ಒಂದೆರಡು ಬಿಂದಿಗೆ ನೀರನ್ನು ತಂದು ಕುಡಿದು ಜೀವನ ಮಾಡುತ್ತಿದ್ದಾರೆ. ಸ್ವಾತಂತ್ರ್ಯ ಬಂದು 40 ವರ್ಷಗಳಾದರೂ ಕೂಡ ನಾವು ರಾಜ್ಯದ ಜನರಿಗೆ ಕುಡಿಯುವುದಕ್ಕೆ ನೀರನ್ನು ಕೊಡಲಿಲ್ಲ ಎಂದರೆ we are falling in our duty. ಆದ್ದರಿಂದ ಇದರ ಕಡೆಗೆ ಹೆಚ್ಚಿನ ಗಮನವನ್ನು ಸರ್ಕಾರದವರು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹೆಚ್ಚಿಗೆ ಹಣವನ್ನು ನೀವು ಏನು ರಿಲೀಸ್ ಮಾಡುತ್ತಿದ್ದೀರಿ ಅದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ನನ್ನ ತಾಲೂಕಿಗೆ ಕೇವಲ 50ಸಾವಿರ ರೂಪಾಯಿಗಳನ್ನು ಮಾತುಕೊಟ್ಟಿದ್ದಾರೆ. ಇದು ಕೋಳಿ ಮರಿಗೆ ಮೇವು ಹಾಕಿದಂತಾಗಿದೆ. ಚಿಕನ್

ಷೀಡಿಂಗ್ ಹಾಕಿದಂತಾಗಿದೇ ನನ್ನ ತಾಲೂಕಿಗೆ ಬರಪರಿಹಾರಕ್ಕಾಗಿ 50 ಸಾವಿರ ರೂಪಾಯಿಗಳನ್ನು ಏನು ಕೊಟ್ಟಿದ್ದೀರಿ ಇದು ಏನೇನೂ ಸಾಲದು. 50 ಸಾವಿರ ರೂಪಾಯಿಗಳನ್ನು ಅಸೆಟ್ಸ್‌ಕ್ರಿಯೇಟ್ ಮಾಡಿ ಎಂದು ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ : ಕೊನೇಪಕ್ಷ ನಿಮ್ಮ ಏರಿಯಾದಲ್ಲಿ 47 ಬೋರ್‌ವೆಲ್‌ಗಳಾದರೂ ಇವೆ.

ಶ್ರೀ ಆರ್.ಎಲ್. ಜಾಲಪ್ಪ : ನಾವು 85 ಬೋರ್‌ವೆಲ್‌ಗಳನ್ನು ಕೇಳಿದ್ದಕ್ಕೆ 47 ಬೋರ್‌ವೆಲ್‌ಗಳನ್ನು ಮಾಡಿಕೊಡುತ್ತೇವೆಂದು ಹೇಳಿದ್ದಾರೆ ಅಷ್ಟೆ. ಇದನ್ನು ಇನ್ನೂ ಕೊರೆಸಿಕೊಟ್ಟಿಲ್ಲ. ನಾನು ಜಿಲ್ಲಾಧಿಕಾರಿಗಳ ಹತ್ತಿರ, ಡಿವಿಜನಲ್ ಕಮೀಷನರ್‌ರವರ ಹತ್ತಿರ ಮಾತನಾಡಿದ್ದೇನೆ. ಅವರು ತಮ್ಮ ಅಸಮರ್ಥತೆಯನ್ನು ವ್ಯಕ್ತಪಡಿಸಿದರು. ಅಲ್ಲಿ ನೋಡಿದರೆ ಒಂದು ಕಡೆ ದುಡ್ಡಿಲ್ಲ, ಇನ್ನೊಂದು ಕಡೆ ರಿಗ್ಸ್ ಇಲ್ಲ. ಆದ್ದರಿಂದ ನಾನಾದರೂ ಹೇಳುತ್ತೇನೆ, ಬೇರೆ ರಾಜ್ಯಗಳಿಂದಲಾದರೂ ರಿಗ್ಸ್‌ನ್ನು ತರಿಸಿ ನಮಗೆ ಬೋರ್‌ವೆಲ್‌ಗಳನ್ನು ಮಾಡಿಸಿಕೊಡಿ. ಕೇವಲ ಸರಸ್ವತಿ ಪ್ರಸನ್ನ ಆದರೆ ಏನೂ ಪ್ರಯೋಜನವಿಲ್ಲ, ಲಕ್ಷ್ಮೀ ಪ್ರಸನ್ನವೂ ಆಗಬೇಕು, ಕೆಲಸ ಆಗಬೇಕು 50 ಸಾವಿರ ರೂಪಾಯಿಗಳನ್ನು ಕೊಟ್ಟು ಅಸೆಟ್ಸ್ ಕ್ರಿಯೇಟ್ ಮಾಡಿ ಎಂದು ಹೇಳುತ್ತಿದ್ದೀರಿ, ಇದನ್ನು ನಾನು ಒಪ್ಪುತ್ತೇನೆ. ಅಸೆಟ್ಸ್ ಕ್ರಿಯೇಟ್ ಆಗಬೇಕು, ಜನರಿಗೆ ಕೆಲಸ ಸಿಗಲಿ ಎಂದು ನಾವು ಮಾಡಬೇಕು. ಅಸೆಟ್ಸ್ ಎಂದರೆ, ಕಲ್ವರ್ಟ್ಸ್ ಕಟ್ಟಿಸುವುದು, ಸ್ಕೂಲ್ ಕಟ್ಟಡಗಳನ್ನು ಕಟ್ಟಿಸುವುದೂ ಕೂಡ ಅಸೆಟ್ಸ್ ಆಗುತ್ತದೆ. ಇದರಲ್ಲಿ 30 ಪರ್ಸೆಂಟ್ ಕೂಡ ಕೂಲಿ ಸಿಗುವುದಿಲ್ಲ. ನನ್ನ ಸಲಹೆ ಏನೆಂದರೆ ಕಾಂಟೂರು ಬಂಡಿಗ್ಸ್ ಮಾಡಿಸಿದರೆ ಜನರಿಗೆ ಕೆಲಸ ಸಿಕ್ಕುತ್ತದೆ ಮತ್ತು ಇದು ಅಸೆಟ್ಸ್ ಆಗುತ್ತದೆ. ಮಂಡಲ ಏರಿಯಾದಲ್ಲಿ ಎಲ್ಲೆಲ್ಲಿ ಅಫರ್‌ಸ್ಟೇಷನ್ಸ್‌ಗೆ ಜಾಗ ಇದೆ ಅಲ್ಲೆಲ್ಲಾ ಪಿಟ್ಸ್ ಮಾಡಿಸಿದರೆ ಬಹಳ ಅನುಕೂಲವಾಗುತ್ತದೆ. ನಾಳೆ ಮಳೆ ಬಂದಾಗ ಅಲ್ಲೆಲ್ಲಾ ಗಿಡಗಳನ್ನು ನೆಡಿಸಿದರೆ ಅದರಲ್ಲಿ 50 ಪರ್ಸೆಂಟ್ ಸಸಿಗಳು ಉಳಿದರೂ ಕೂಡ ಮುಂದೆ 5-10 ವರ್ಷಗಳು ಕಳೆದ ಮೇಲೆ ನಮ್ಮ ರಾಜ್ಯಕ್ಕೆ ಬಹಳ ಒಳ್ಳೆಯದಾಗುತ್ತದೆ. ನಾನು ತಮಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. ನಾವಂತೂ ಒಂದು ಕೆಲಸವನ್ನು ಮಾಡುವುದಕ್ಕೆ ಆಗಲಿಲ್ಲ, ನೀವಾದರೂ ಮಾಡಿ. ನಾನು ಸಲಹೆಯನ್ನು ಕೊಟ್ಟರೂ ಅದನ್ನು ಅವರು ತೆಗೆದುಕೊಳ್ಳಲಿಲ್ಲ. ಪ್ರತಿಯೊಂದು ಎಕರೆಗೂ ಕಾಂಟೂರ್ ಬಂಡಿಗ್ಸ್ ಮಾಡಿಸಬೇಕು. ಇದಕ್ಕೆ ಕಾನೂನು ಮಾಡಿ. 10 ಎಕರೆ ಜಮೀನು ಇದ್ದರೆ ಅದರಲ್ಲಿ ಒಂದು ಎಕರೆಯಲ್ಲಾದರೂ ಅಫೋರ್‌ಸ್ಟೇಷನ್ಸ್ ಮಾಡಿಸಿ. ಇದೇನೂ ಅಷ್ಟೊಂದು ಕಷ್ಟವಾಗುವುದಿಲ್ಲ. ಮರಗಳನ್ನು ಹೆಚ್ಚು ಹೆಚ್ಚು ಬೆಳಸಬೇಕು. ಇನ್ನು ಹತ್ತು ವರ್ಷಗಳು ಕಳೆದ ಮೇಲೆ ಯಾರಾದರೂ ಸತ್ತರೆ ಸುಡುವುದಕ್ಕೂ ಸಹ ಸೌದೆ ಸಿಕ್ಕುವುದಿಲ್ಲ. ಒಲೆಗೆ ಸೌದೆ ಸಿಕ್ಕುವುದಿಲ್ಲ. ನಾವು ದೇವರನ್ನು ಬೈಯುವುದು ಬೇಡ. ಇರತಕ್ಕ ಮರಗಳನ್ನು ಕಡಿಯಿರಿ ಎಂದು ದೇವರು ಹೇಳಿದ್ದಾನೆಯೆ? ಇರತಕ್ಕ ಬದುಗಳನ್ನೆಲ್ಲಾ ಉತ್ತು ಬಂಜರು ಮಾಡಿ ಎಂದು ದೇವರು ಹೇಳಿಲ್ಲ. ಇದರ ಬಗ್ಗೆ ಸರ್ಕಾರ ಗಮನಕೊಡುತ್ತದೆಂದು ನಾನು ಅಂದುಕೊಂಡಿದ್ದೇನೆ.

ಇನ್ನು ಎರಡನೆಯದಾಗಿ ಆಹಾರ ಸರಬರಾಜಿನ ವಿಚಾರ. ಕಳೆದ 4 ತಿಂಗಳಿಂದ ಆಹಾರಪದಾರ್ಥಗಳು ಹೆಚ್ಚಿಗೆ ಬರುತ್ತಿವೆ ಎಂದು ನಿನ್ನೆ ಮಾನ್ಯ ಮಂತ್ರಿಗಳು ಹೇಳಿದರು. ಈಗ ಗೋಧಿ ಹೆಚ್ಚಿಗೆ ಬರುತ್ತಿದೆ ಎಂದು ಹೇಳಿದ್ದಾರೆ, ಸಂತೋಷ ಅವರು ಹೇಳಿರತಕ್ಕದ್ದು ನಿಜವೇ ಆಗಿದ್ದರೆ ರಿಲೀಫ್ ವರ್ಕ್ಸ್‌ಗೆ ವಾರಕ್ಕೊಮ್ಮೆ ಬಟವಾಡೆಯನ್ನು ಮಾಡಿಸಿ. ಅಲ್ಲಿನ ಪ್ರಧಾನರನ್ನೋ ಅಥವಾ ಬೇರೆ ಯಾರನ್ನಾದರೂ ಅಧಿಕಾರಿಗಳನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡುಹೋಗಿ ವಾರಕ್ಕೊಮ್ಮೆ ಆಹಾರಪದಾರ್ಥಗಳನ್ನು ಹಂಚಿ ಬರಲಿ. ಈಗ 45 ಸಾವಿರ ಟನ್ ಅಕ್ಕಿ ಬರುತ್ತಿದೆ ಎಂದು ಮಾನ್ಯ ಸಚಿವರು

ಹೇಳಿದರು. ಹಾಗದರೆ ಗ್ರೀನ್ ಕಾರ್ಡ್‌ನವರಿಗೆ 4-5 ಕೆ.ಜಿ.ಯನ್ನೇ ಏತಕ್ಕೆ ಕೊಡುತ್ತಿದ್ದೀರಿ, ಒಟ್ಟಿಗೆ 10 ಕೆ.ಜಿ. ಏತಕ್ಕೆ ಕೊಡುವುದಿಲ್ಲ. ನಮಗೆ 2 ರೂಪಾಯಿ ಇದ್ದುದನ್ನು 2.50 ರೂಪಾಯಿ ಮಾಡಿದಿರಿ. ಆದರೂ ಚಿಂತೆಯಿಲ್ಲ ಅದನ್ನಾದರೂ ಪೂರ್ತಿಯಾಗಿ ಅವರಿಗೆ ಸಪ್ಲೈ ಮಾಡಿ ಎಂದು ಹೇಳಬಯಸುತ್ತೇನೆ.

ಇನ್ನು ಹಣದ ಅಭಾವ. ನೀವು ಕೊಟ್ಟಿರತಕ್ಕ ಹಣವನ್ನು ನಾನು ನೋಡಿದೆ. ನಮಗೆ ಗೊತ್ತಾಗುವುದಿಲ್ಲವೆಂದು ಈ ಅಂಕಿಅಂಶಗಳನ್ನು ಕೊಟ್ಟಿದ್ದೀರೋ ಏನೋ ಗೊತ್ತಿಲ್ಲ. Relief on account of accidental fire. ಇದನ್ನು 3-4 ತಿಂಗಳಿಂದ ಮಾಡಿದಿರಾ? ಇದು ಜುಲೈ 1ನೇ ತಾರೀಖಿನಿಂದ ಆಗಿರತಕ್ಕದ್ದು. ರಿಲಿಫ್ ವರ್ಕ್ಸ್‌ಗೂ ಇದಕ್ಕೂ ಸಂಬಂಧವಲ್ಲ. ನ್ಯಾಚುರಲ್ ಕೆಲಾಮಿಟೀಸ್ ಎಂದು...

SRI M.MALLIKARJUNA KHARGE : This is a statement on natural calamity. He have given a statement...

ಶ್ರೀ ಆರ್.ಎಲ್. ಜಾಲಪ್ಪ : ಅದನ್ನು ನಾನೂ ಕೂಡ ನೋಡಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನ್ಯಾಚುರಲ್ ಕ್ಯಲಾಮಿಟೀಸ್ ಆಕ್ಸಿಡೆಂಟ್, ಬರುತ್ತದೆ ಫ್ಲಡ್ ಬರುತ್ತದೆ, ಸ್ಕೇರ್‌ಸಿಟಿ, ಫಾದರ್ ಬರುತ್ತದೆ. ಡ್ರಿಂಕಿಂಗ್ ವಾಟರ್ ಬರುತ್ತದೆ It covers all. ಜವಾಹರ್ ರೋಜ್‌ಗಾರ್ ಯೋಜನೆ ಮತ್ತು ನಾರ್ಮಲ್ ವಾಟರ್ ಸಪ್ಲೈ ಸ್ಕೀಮ್‌ಗೆ ಏನು ಖರ್ಚು ಮಾಡಿದ್ದೇವೆ ಅದು ಕೂಡ ಬೇರೆ ಇದೆ.

ಶ್ರೀ ಆರ್.ಎಲ್. ಜಾಲಪ್ಪ : ಈಗ ಫೈರ್ ಆಕ್ಸಿಡೆಂಟ್‌ಗೆ ಕೊಟ್ಟಿರುವುದಕ್ಕೂ ರಿಲೀಫ್ ವರ್ಕ್ಸ್‌ಗೂ ಸಂಬಂಧವಿಲ್ಲ. ಅದನ್ನು ಒಪ್ಪಿಕೊಳ್ಳಿ. ಈಗ ಡ್ರಾಟ್ ಬಗ್ಗೆ ಡಿಸ್‌ಕಸ್ ಮಾಡುತ್ತಿರುವುದು, ಫ್ಲಡ್ ರಿಲೀಫ್ ಬಗ್ಗೆ ಅಲ್ಲ. ಆದಕ್ಕೆ ಹಣವನ್ನು ಕೊಟ್ಟಿದ್ದೀರಿ, ಅದನ್ನು ಬಿಡಿ. ಆಮೇಲೆ ಡ್ರಿಂಕಿಂಗ್ ವಾಟರ್. ಇದರ ಬಗ್ಗೆ ಮಾನ್ಯ ಯಡಿಯೂರಪ್ಪನವರು ಮಾತನಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಯಡಿಯೂರಪ್ಪನವರು ಮಾತನಾಡಲಿಲ್ಲ. ಯಾರಿಗೆ ಎಫೆಕ್ಟ್ ಆಗಿದೆಯೋ ಅವರು ಮಾತನಾಡಿದ್ದಾರೆ. ಬೀದರ್ ಎಫೆಕ್ಟ್ ಆಗಿದೆ, ಗುಲ್ಬರ್ಗಾಕ್ಕೆ ಎಫೆಕ್ಟ್ ಆಗಿದೆ. ಅವರು ಮಾತನಾಡಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ನಾವು ಇವತ್ತು ಡಿಸ್‌ಕಸ್ ಮಾಡುತ್ತಿರುವುದು ಕ್ಷಾಮ ಪರಿಹಾರದ ಬಗ್ಗೆ. ಡ್ರಾಟ್ ರಿಲೀಫ್ ವರ್ಕ್ಸ್ ಬಗ್ಗೆ ಮಾತನಾಡುತ್ತಿರುವುದು, ಇದನ್ನು ದಯವಿಟ್ಟು ತಾವು ಅರ್ಥ ಮಾಡಿ ಕೊಳ್ಳಬೇಕು. ರಿಲೀಫ್ ವರ್ಕ್ಸ್‌ನಲ್ಲಿ ಎನ್‌ಆರ್‌ಡಬ್ಲುಎಸ್ ಮಾಡಿದ್ದೀರಾ ಅದನ್ನು ಏತಕ್ಕೆ ಕೊಡುತ್ತೀರಿ. ನಮಗೆ ಅರ್ಥವಾಗುವುದಿಲ್ಲವೆಂದು ಕೊಡುತ್ತೀರ. ಅದೆಲ್ಲಾ ಬೇಡ, ನಮಗೂ ಅಲ್ಪಸ್ವಲ್ಪ ಅರ್ಥವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ : ಮಾನ್ಯ ಜಾಲಪ್ಪನವರೆ ತಮಗೂ ಕೂಡ ಗೊತ್ತಿದೆ. ನಾರ್ಮಲ್ ಡೆವಲಪ್‌ಮೆಂಟ್ ವರ್ಕ್ಸ್‌ನ್ನು ಸ್ಟಾಪ್ ಮಾಡಿ ನಾವು ರಿಲೀಫ್ ವರ್ಕ್ಸ್‌ನ್ನು ತೆಗೆದುಕೊಳ್ಳುತ್ತಿದ್ದೇವೆನ್ನತಕ್ಕಂಥದನ್ನು ನಾವು ಘೋಷಣೆ ಮಾಡಿದ್ದೇವೆ. ತಾವು ಇದ್ದಾಗಲೂ ಕೂಡ ಎಷ್ಟು ಹಣವನ್ನು ನಿಗದಿಪಡಿಸಿರತಕ್ಕಂಥದ್ದು ಇತ್ತು, ಅದು ಮುಗಿದಮೇಲೆ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ತೆಗೆದುಕೊಳ್ಳಬೇಕಾಗುತ್ತದೆ, ಇಲ್ಲವೇ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್ ತೆಗೆದುಕೊಳ್ಳಬೇಕಾಗುತ್ತದೆ, ಇಲ್ಲವೇ ನಾರ್ಮಲಿ ಪ್ಲಾನಿಂಗ್ ಬಜೆಟ್‌ನಲ್ಲಿಯೇ ತೆಗೆದುಕೊಂಡು ಖರ್ಚುಮಾಡಬೇಕಾಗುತ್ತದೆಯೇ ಹೊರತಾಗಿ ಹೊಸದಾಗಿ ಟ್ಯಾಕ್ಸ್‌ಹಾಕಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅಥವಾ ನೋಟ್ಸ್ ಪ್ರಿಂಟ್

ಮಾಡಿದರೂ ಹಂಚುವುದಕ್ಕಾಗುವುದಿಲ್ಲ. ಯಾವುದಾದರೂ ಕೆಲಸವನ್ನು ನಿಲ್ಲಿಸಿಯಾದರೂ ಇದನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ನಾವೂ ಕೂಡ ಬೇರೆ ಕೆಲಸಗಳನ್ನು ಅಂದರೆ ಡೆವೆಲಪ್‌ಮೆಂಟಲ್‌ಆಕ್ಟಿವಿಟೀಸ್ ವರ್ಕ್ಸ್ ನಿಲ್ಲಿಸಿ, ರಿಲೀಫ್‌ವರ್ಕ್ಸ್‌ಗೆ ಕೊಡಬೇಕೆನ್ನುವ ದೃಷ್ಟಿಯಿಂದ ಇದನ್ನು ತೆಗೆದುಕೊಂಡಿದ್ದೇವೆ. ಇದನ್ನು ನೀವು ಹಿಂದೆ ಮಾಡಿದ್ದೀರಿ, ಹಾಗೆಯೇ ನಾವು ಮಾಡುತ್ತಿದ್ದೇವೆ. ಇನ್ನೊಂದು ಸರ್ಕಾರ ಬಂದರೂ ಕೂಡ ಮಾಡುವುದು ಹೀಗೆಯೇ.

ಶ್ರೀ ಆರ್.ಎಲ್. ಜಾಲಪ್ಪ : ಎನ್‌ಆರ್‌ಡಬ್ಲುಎಸ್ ವರ್ಕ್ಸ್ ನಿಲ್ಲಿಸಿ ಇದನ್ನು ತೆಗೆದುಕೊಂಡಿರುವುದು, ರಿಲೀಫ್ ವರ್ಕ್ಸ್‌ಗೋಸ್ಕರ ಖರ್ಚುಮಾಡಿರುವುದಿಲ್ಲ. ಡ್ರಾಟ್‌ಗೋಸ್ಕರ ಎನ್‌ಆರ್‌ಡಬ್ಲುಎಸ್ ಮಾಡಿದಿರುವುದಿಲ್ಲ ಇದನ್ನು ಒಪ್ಪಿಕೊಳ್ಳುತ್ತೀರ ಎನ್‌ಆರ್‌ಡಬ್ಲುಎಸ್ ಮಾಡಿರುವುದು ಈಗ ಬಂದಿರುವ ಕ್ಷಾಮಪರಿಸ್ಥಿತಿಗೋಸ್ಕರ ಖರ್ಚು ಮಾಡಿರುವುದಿಲ್ಲ ಇದು ರೆಗ್ಯುಲರ್ ಸ್ಕೀಮ್‌ನಿಂದ ನಡೆಯುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ : ಏತಕ್ಕೆ ಈ ಕಲಮನ್ನು ಕೊಟ್ಟಿರುವುದೆಂದರೆ, ಎಲ್ಲ ಎಂಜಿನಿಯರ್ಸ್‌ನನ್ನು ಕರೆಸಿ ಅವರನ್ನು ನಾರ್ಮಲ್ ಅಪ್ರೈಲಬಲ್ ಬಜೆಟ್ ಎಷ್ಟಿದೆ,how meny bugget works are there with them? What is the amount spent upto January end. They are not able to spend for 2-3 months. That money is withdrawn and kept at the disposal of the D.C. ಅದು ನಿಮಗೆ ಗೊತ್ತಾಗಲಿ, ಆ ಹೆಡ್‌ನಲ್ಲಿ ತೆಗೆದುಕೊಂಡಿರುವುದು ಗೊತ್ತಾಗಲಿ ಎನ್ನುವ .ದೃಷ್ಟಿಯಿಂದ ಕೊಟ್ಟಿದ್ದು.

ಶ್ರೀ ಆರ್.ಎಲ್. ಜಾಲಪ್ಪ : ಅದು ಬೇರೆ ವಿಚಾರ. ಬಿಡಬ್ಲುಎಸ್‌ಎಸ್‌ಗೆ ಎಂದು ಕೊಟ್ಟಿರುವ ಹಣ ಅಲ್ಲಿ ಇಟ್ಟಿದ್ದೀರಿ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ,35 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆಂದು ನಮಗೆಲ್ಲ ಅಕೌಂಟ್ಸ್ ಕೊಟ್ಟಿದ್ದೀರಲ್ಲ, ಇವನ್ನೆಲ್ಲ ಸೇರಿಸಿ ಕೊಟ್ಟಿದ್ದೀರಿ. ನಿಜವಾಗಿ ಇಷ್ಟು ಹಣ ಡ್ರಾಟ್ಗೋಸ್ಕರ ಖರ್ಚಾಗಿಲ್ಲವೆಂದು ನಾನು ಸದನದ ಗಮನಕ್ಕೆ ತರುತ್ತಿದ್ದೇನೆ.

ಇನ್ನು ಜವಾಹರ್ ರೋಜ್‌ಗಾರ್ ಯೋಜನೆ. ಡ್ರಾಟ್ ಬರದಿದ್ದರೂ ಈ ಹಣ ಖರ್ಚಾಗುತ್ತಿತ್ತು. ಪಂಚಾಯಿತಿಯವರು, ಜಿಲ್ಲಾಪರಿಷತ್‌ನವರು. ಪ್ಲಾನ್ ನಲ್ಲಿ ಅಪ್ರೂ ಮಾಡಿದರು. ಆಕ್ಷನ್ ನೀವು ಎಕ್‌ಸ್ಟ್ರಾ ಫಂಡನ್ನು ಏನು ಪ್ರೊವೈಡ್ ಮಾಡಿಲ್ಲ. ಅಲ್ಲಿರುವುದನ್ನು ತೆಗೆದುಕೊಂಡು ಬಂದು ನಿಮಗೆ ಏನು ಅನುಕೂಲ ಆಗಬೇಕೊ ಯಾರಿಗೋ ಎಂ.ಎಲ್.ಎ ಎಂ.ಎಲ್.ಸಿ.ಗೋ. ಹಣವನ್ನು ಜಾಸ್ತಿ ಕೊಡಬೇಕೆಂದು ಹೇಳಿ, ಅಲ್ಲಿರುವುದನ್ನು ಕಿತ್ತು ಕೊಂಡು ಬಂದು ಇಲ್ಲಿಗೆ ಕೊಟ್ಟಿದ್ದರೇ ವಿನಃ ಬೇರೆ ಏನೂ ಇಲ್ಲ. ಇದೆಲ್ಲ ನಮಗೆ ಅರ್ಥವಾಗು'. ನಾವೂ ಆಡಳಿತವನ್ನು ನಡೆಸಿದ್ದೇವೆ. ನಾನು ಹೇಳುವುದಿಷ್ಟು. ನಿಮಗೆ ಸಿನ್ಸಿಯಾರಿಟಿ ಇರಬಹುದು, ಇದೆ ಏತಕ್ಕೆಂದರೆ ನೀವು ಕೂಡ ಈ ರಾಜ್ಯದ ಪ್ರಜೆ. ನೀವು ಸರ್ಕಾರದವನ್ನು ನಡೆಸುತ್ತಿದ್ದೀರಿ, ಜನರಿಗೆ ಒಳ್ಳೆಯದಾಗಬೇಕು ಎನ್ನುವ ಆಶಯ ನಿಮಗೆ ಇದೆ. ಆದರೆ ಅದನ್ನು ಮಾಡುವಾಗ ಬೇರೆಯವರಿಗೆ ಮೋಸ ಮಾಡಿ ನಮ್ಮನ್ನು ನಾವು ಮೋಸ ಮಾಡಿಕೊಳ್ಳುವುದು ಬೇಡ. ನಮ್ಮ ಹತ್ತಿರ ಹಣ ಇಷ್ಟಿದೆ, ಇದಕ್ಕೆ ಏನು ಮಾಡೋಣ ಎಂದು ಅದನ್ನು ಸರಿಯಾಗಿ ಹೇಳಿ. ಅಥವಾ ನಮ್ಮಿಂದ ಏನು ಸಹಕಾರಬೇಕೊ ಅದನ್ನು ಕೊಡಲಿಕ್ಕೆ ನಾವು ತಯಾರಾಗಿದ್ದೇವೆ. ಅದನ್ನು ತಾವು ಮಾಡುತ್ತೀರೆಂದು ನಾನು ನಂಬಿಕೊಂಡಿದ್ದೇನೆ. ಇನ್ನು ಎಕ್ಸೈಜ್ ಬಗ್ಗೆ ಹೇಳುವುದಾದರೆ, ಎಕ್ಸೈಜ್ ಬಾಬಿನಲ್ಲಿ ಇವತ್ತು 350 - 400 ಕೋಟಿ ರೂಪಾಯಿ ಜಾಸ್ತಿ ಬರುತ್ತಿದೆ. ಎಂದು ಹೇಳಿದ್ದೀರಿ, ಈ ಹಣ ಏನು ಬರುತ್ತಿದೆ. ಇದರಲ್ಲಿ ಕಾಲು ಭಾಗವನ್ನಾದರೂ ಕುಡಿಯುವ ನೀರಿಗೆ ಖರ್ಚು ಮಾಡಿ. ಇದು ಬಡವರ ದುಡ್ಡು. ಸಾರಾಯಿ ಕುಡಿಯುವವರು

ಬಡವರೇ, ಆದ್ದರಿಂದ ಅವರ ದುಡ್ಡನ್ನು ಅವರಿಗೆ ಖರ್ಚು ಮಾಡಿ ನೀರನ್ನು ಕೊಡುವ ವ್ಯವಸ್ಥೆ ಮಾಡಿ. ದೊಡ್ಡ ಬಳ್ಳಾಪುರ ತಾಲ್ಲೂಕಿನಲ್ಲಿ 4 ಲಕ್ಷ ರೂಪಾಯಿ ಕಲೆಕ್ಟ್ ಆಗಿದೆ. ಅದರಲ್ಲಿ 4 ಲಕ್ಷ ರೂಪಾಯಿಗಳನ್ನಾದರೂ ಖರ್ಚು ಮಾಡಿ. ಕುಡಿಯುವ ನೀರನ್ನು ಕೊಡಿ. ನೀವು ಮಾಡತಕ್ಕ ಎಕ್ಸೆಪೆಂಡಿಚ ಅನ್ನು ಕಡಿಮೆ ಮಾಡಿ. ಇವೆಲ್ಲ ಸಣ್ಣ ಪುಟ್ಟ ವಿಚಾರಗಳಾದ್ದರಿಂದ ಹೇಳ ವರದು. ಆದರೂ ಹೇಳಬೇಕಾಗಿದೆ. ಹೋದ ತಿಂಗಳು ಮಂತ್ರಿಗಳು ರಾಯಚೂರಿಗೆ ನಲ್ಲಿ ಹೋದರು. ಸಂತೋಷ. ಆದರೆ ಅವರ ಕಾಂಟೆಸ್ಸಾ ಕಾರು ರಾಯಚೂರಿಗೆ ಲಿ ಹೋಯಿತು. ಬರುವಾಗ ಮುಖ್ಯಮಂತ್ರಿಗಳ ಜೊತೆಯಲ್ಲಿ ಬಂದರು. ಕಾರಿನ ಡ್ರೈವರ್ ೊಡ್ಡಬಳ್ಳಾಪುರದಲ್ಲಿ ಪೆಟ್ರೋಲ್ ಹಾಕಿಸಿಕೊಳ್ಳುವಾಗ ಹೇಳಿದರು. ಮಂತ್ರಿಗಳು ರಾಯಚೂ ಗೆ ಹೋಗಿದ್ದಾರೆ. ನಾವು ಹೋಗಿತ್ತಿದ್ದೇವೆ ಎಂದು ಏಕೆ ಇದೆಲ್ಲ ಖರ್ಚು ಮಾಡ ತ್ತಿದ್ದೀರಿ? ನಾವು ಖರ್ಚು ಮಾಡಬೇಡಿ ಎಂದು ಹೇಳುವುದಿಲ್ಲ, ಆದರೆ ಅನವ ಕವಾಗಿ ಖರ್ಚು ಮಾಡಬೇಡಿ. ರಾಯಚೂರಿಗೆ ಕಾರಿನಲ್ಲಿ ಹೋಗುವಾಗ ಜನರನ್ನು ಭೇಟಿಯಾಗುತ್ತಾ ಹೋಗಬಹುದು. ಕಾರಿನಿಂದ ಇಳಿದು ಎಲ್ಲರನ್ನು ಮಾತನಾಡಿಸಿಕೊಂಡು ಹೋಗಬಹುದು. ಅದನ್ನು ನಾವು ಸ್ವಾಗತಿಸುತ್ತೇವೆ ಅನವ್ಯಶಕವಾಗಿ ಕಾರು ಖಾಲಿ ಹೋಗುವುದು ಮತ್ತೆ ಅಲ್ಲಿಂದ ವಾಪಸ್ಸು ಬರುವುದು ಸರಿಯಲ್ಲ. ಸಾರಾಯಿಯಲ್ಲಿ ದುಡ್ಡು ಬಂತು ಎಂದು ಕಾಂಟೆಸ್ಸಾ ಕಾರು ತೆಗೆದುಕೊಂಡರು. ಹಳೇ ಕಾರುಗಳನ್ನು ರಿಪೇರಿ ಮಾಡಿಸಿಕ ಳ್ಳಬಹುದಾಗಿತ್ತು. ಬೇರೆ ರಾಜ್ಯದವರು ಬಂದಾಗ ನೋಡಿ ಸಂತೋಷಪಡುತ್ತಾರೆ. ಮಾ ಿ. ಕೆಲವಕ್ಕೆಲ್ಲಾ ಎ.ಸಿ.ಯನ್ನು ಹಾಕಿಸಿದ್ದೀರಿ. ಮಾಡಿ. ನನ್ನ ಸಲಹೆ ಏನೆಂದರೆ ಸಮಯ ನೋಡಿಕೊಳ್ಳಿ. ಆದರೆ ಜನರು ನಮ್ಮ ಬಗ್ಗೆ ಕೆಟ್ಟದಾಗಿ ನೋಡಬಾರದು. ಹಾಗೆ ನಡೆಸಿಕೊಂಡು ಹೋಗುತ್ತೀರೆಂದು ನಾನು ಅಂದು ಕೊಂಡಿದ್ದೇನೆ. ಇನ್ನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ, ನಿಮಗೂ ಜವಾಬ್ದಾರಿ ಇದೆ, ನಿಮಗೆ ಜವಾಬ್ದಾ ಇಲ್ಲವೆಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ, ಆದರೆ ಕೆಲಸ ಮಾಡುವಾಗ, ಮಾ ಸಿಂಧ್ಯರವರು ಹೇಳಿದ ಹಾಗೆ, ಅಧಿಕಾರವನ್ನು ಪೂರ್ಣವಾಗಿಯಾದರೂ ಕೊಡಿ, ಇಂಟರ್‌ಫಿಯರೆನ್ಸ್ ಬೇಡ ಎಂದು ಹೇಳಿ, ಇಲ್ಲವೇ ನಿಮ್ಮ ಕೈಗೆ ಅಧಿಕಾರ ತೆಗೆದುಕೊಂಡು ನಡೆಸಿ. ನೀವು ಓಡಾಡಿ, ನೀವು ಓಡಾಡದಿದ್ದರೆ ಏನೂ ಆಗುವುದಿಲ್ಲ, ನೀವು ಪ್ರತಿಯೊಂದು ತಾಲ್ಲೂಕಿಗೆ ಹೋಗುವುದಕ್ಕೆ ಸಾಧ್ಯವಿಲ್ಲ, ಜಿಲ್ಲಾ ಮಟ್ಟದಲ್ಲಾದರೂ ಕರೆದು ಮಾತನಾಡಿ. ಮೊನ್ನೆ ಇಲ್ಲಿ ಮೀಟಿಂಗ್ ಮಾಡಿದಿರಿ, ನಮಗೆ ಗೊತ್ತೇ ಇಲ್ಲ, ಏತಕ್ಕೆ ಶಾಸಕರು ಬರಲಿಲ್ಲವೆಂದು ಹೇಳಿದಿರಿ. ನಮ್ಮನ್ನು ಕರೆದರೆ ನಮ್ಮ ಕೈಲಾದ ಸಹಕಾರ ಕೊಡುತ್ತೇವೆ. ನಾವು ಬರೀ ಕ್ರಿಟಿಸೈಸ್ ಮಾಡುವುದಕ್ಕೆ ಇದ್ದೇವೆಂದು ದಯವಿಟ್ಟು ತಿಳಿದುಕೊಳ್ಳಬೇಡಿ. We are prepared to coËoperate with you provided you have got that genuineness. Thank you very much.

ಉಪಾಧ್ಯಕ್ಷಿಣಿಯವರು : ಮಾನ್ಯ ಶಿವರಾಮೇಗೌಡರು 5-10ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನನಗೆ ಉತ್ತರ ಹೇಳಬೇಕಾದರೆ ಸ್ವಲ್ಪ ಹೆಚ್ಚಿಗೆ ಸಮಯ ಬೇಕಾಗುತ್ತದೆ. ಏಕೆಂದರೆ, ಅನೇಕ ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ, ಟೀಕೆಗಳನ್ನು ಮಾಡಿದ್ದಾರೆ. ಆದ್ದರಿಂದ ಸ್ವಲ್ಪ ಬೇಗನೆ ಮುಗಿಸಿದರೆ ಒಳ್ಳೆಯದು. ಮಾನ್ಯ ಸದಸ್ಯರು ಹೇಳುವುದನ್ನು ಕೇಳಿದೆ, ನಾನು ಹೇಳುವುದನ್ನು ಅವರು ಕೇಳಬೇಕೆಂದರೆ ಸ್ವಲ್ಪ ಸಮಯ ಬೇಕಾಗುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಕಳೆದ ಅಧಿವೇಶನದಲ್ಲಿ 100 ತಾಲ್ಲೂಕುಗಳಲ್ಲಿ ಬರಗಾಲ ಇದೆ ಎಂದು ಹೇಳಿದ್ದರು. ಆಗ ನಾವು ಬರಗಾಲದ ಬಗ್ಗೆ ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ಇದಕ್ಕೆ ಸಮರೋಪಾದಿಯಲ್ಲಿ ಸರ್ಕಾರದವರು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳಿದ್ದೇವು.

ಆದರೆ ಇತ್ತೀಚೆಗೆ 132 ತಾಲ್ಲೂಕುಗಳಿಗೆ ಈ ಬರಗಾಲ ಕಾಲಿಟ್ಟಿದೆ. 4758 ಹಳ್ಳಿಗಳಲ್ಲಿ ತೀವ್ರ ಬರಗಾಲ ಅತೀ ಹೆಚ್ಚಿನ ಬರಗಾಲ ಇರತಕ್ಕ ತಾಲ್ಲೂಕು ಎಂದರೆ ಬಹುಶಃ ನಾಗಮಂಗಲ ತಾಲ್ಲೂಕು. ತಮಗೆ ಗೊತ್ತಿದೆ. ಹಿಂದೆ ಬರ ಬಂದು ನಾಗಮಂಗಲ ತಾಲ್ಲೂಕಿನ ಜನ ಗೇಣುದ್ದ ಹೊಟ್ಟೆಗೆ ಮಾರುದ್ದ ಬಟ್ಟೆಗೆ ಆ ಊರುಬಿಟ್ಟು ಬಂದು ಬೆಂಗಳೂರಿನಲ್ಲಿ ಲೋಟ ತೊಳೆಯುವುದಕ್ಕೆ ಸೇರಿದ್ದಾರೆ

5.40 ಪಿ.ಎಂ.

ಇವತ್ತು ಈ ಹೆಚ್ಚಿನ ಬರಗಾಲದಲ್ಲಿ ಎಲ್ಲರೂ ವಲಸೆ ಬರುತ್ತಿದ್ದಾರೆ. ಬೊಂಬಾಯಿಗೆ, ಭದ್ರಾವತಿಗೆ, ಬೆಂಗಳೂರು ಕಡೆಗೆ ಪ್ರತಿನಿತ್ಯ ಗಂಟು ಮೂಟೆ ಕಟ್ಟಿಕೊಂಡು ಬಸ್ಸಿನಲ್ಲಿ ನಾಗಮಂಗಲ ಬಿಡುತ್ತಿದ್ದಾರೆ. ನಾನು ಸಂಬಂಧಪಟ್ಟ ಮಂತ್ರಿಗಳಿಗೆ, ಜಿಲ್ಲಾಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೂ ಈ ವಿಚಾರ ಸಂಕ್ಷಿಪ್ತವಾಗಿ ತಿಳಿಸಿದ್ದೇನೆ. ಇವತ್ತು ಈ ನಾಗಮಂಗಲ ತಾಲ್ಲೂಕು ಒಂದೇ ಅಲ್ಲ, ಹೆಚ್ಚು ಬರಗಾಲ ಇರತಕ್ಕಪ್ರತಿ ವರ್ಷವೂ ಬರಗಾಲದ ದವಡೆಗೆ ಸಿಕ್ಕಿ ನರಳುತ್ತಾ ಇರತಕ್ಕ ತಾಲ್ಲೂಕುಗಳನ್ನು ಅದರಲ್ಲೂ ನನ್ನ ತಾಲ್ಲೂಕನ್ನು ಶಾಶ್ವತ ಬರಗಾಲ ಪ್ರದೇಶ ಎಂದು ಘೋಷಣೆ ಮಾಡಿ ಅದರ ಅಭಿವೃದ್ಧಿ ಕಾರ್ಯಕ್ಕೆ ಹೆಚ್ಚು ಹಣವನ್ನು ನೀಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ತಾಲ್ಲೂಕಿನಲ್ಲಿ 130 ಕೆರೆಗಳಿವೆ. ಅದರಲ್ಲಿ 7 ದೊಡ್ಡ ಕೆರೆಗಳಿವೆ. ಆದರೆ ಒಂದು ಕೆರೆಯಲ್ಲೂ ನೀರಿಲ್ಲ, ದನಕರುಗಳಿಗೆ, ಪಶುಪಕ್ಷಿಗಳಿಗೆ ಕುಡಿಯುವುದಕ್ಕೆ ನೀರಿಲ್ಲ. ಮಾನ್ಯ ಕಂದಾಯ ಸಚಿವರು ಬಂದಾಗ ಆ ಕೆರೆಗಳನ್ನು ತೋರಿಸಿದ್ದೇನೆ. ಮತ್ತು ರೆವಿನ್ಯೂ ಕಮಿಷನ್ ಬಂದಾಗ ಕೂಡ ನಾನು ಆ ಕೆರೆಗಳನ್ನು ತೋರಿಸಿದ್ದೇನೆ. ಕಾವೇರಿ ಟ್ರಿಬ್ಯುನಲ್‌ನವರು ಬಂದಾಗ ಕೂಡ ಅವರಿಗೆ ತೋರಿಸಿ ನಾಗಮಂಗಲ ತಾಲ್ಲೂಕನ್ನು ಹೆಚ್ಚು ಬರಪೀಡಿತ ಪ್ರದೇಶ ಎಂದು ಹೇಳಿ, ನಮಗೆ ಅನ್ಯಾಯ ಮಾಡಬೇಡಿ ಎಂದು ಹೇಳಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ಮತ್ತು ಬರಗಾಲ ಇರತಕ್ಕ ಪ್ರದೇಶಗಳಲ್ಲಿ ಬಹು ಮುಖ್ಯವಾಗಿ ಮಾಡಬೇಕಾದ ಕೆಲಸ ಕುಡಿಯುವ ನೀರಿನ ವ್ಯವಸ್ಥೆ, ದನಕರುಗಳಿಗೆ ಮೇವು, ಕೃಷಿ ಕಾರ್ಮಿಕರಿಗೆ ಕೆಲಸ ಮಾಡತಕ್ಕ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಕುಡಿಯುವ ನೀರಿನ ವಿಚಾರ ತೆಗೆದುಕೊಂಡರೆ, ಹೊಸದಾಗಿ ಬೋರ್‌ವೆಲ್ ಹಾಕಿಸತಕ್ಕದ್ದು, ಮಿನಿ ವಾಟರ್ ಸಪ್ಲೈ ಮಾಡತಕ್ಕದ್ದು ಎರಡನೇ ವಿಚಾರ. ಆದರೆ ಇರತಕ್ಕ ಬೋರ್‌ವೆಲ್‌ಗಳೇ ರಿಪೇರಿ ಆಗದೆ ಪ್ರತಿ ಹಳ್ಳಿಯಲ್ಲಿ ಜನ ದೂರು ಹೇಳುತ್ತಿದ್ದಾರೆ. ಈಗಿರತಕ್ಕ ಬೋರ್‌ವೆಲ್ ರಿಪೇರಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾವಣೆ ಮಾಡಬೇಕು. ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಜಿಲ್ಲಾ ಪರಿಷತ್ತು ಅದನ್ನು ಮಾಡುತ್ತದೆಂದು ಹೇಳಿದರು. ಇದು ಬಹಳಷ್ಟು ಗೊಂದಲಮಯವಾಗಿದೆ. 100 ಬೋರ್‌ವೆಲ್ಸ್ ಒಂದು ತಾಲ್ಲೂಕಿನಲ್ಲಿದ್ದರೆ ಕೇವಲ 10 ಪರ್ಸೆಂಟ್ ರಿಪೇರಿ ಹಿಂದೆ ಬರುತ್ತಿತ್ತು. ಇವತ್ತು ದನಕರುಗಳಿಂದ ಹಿಡಿದು ಪ್ರತಿಯೊಬ್ಬರೂ ನೀರನ್ನು ಬೋರ್‌ವೆಲ್‌ನಿಂದ ತೆಗೆದುಕೊಂಡು ಅದನ್ನೇ ಅವಲಂಬಿಸಿರುವುದರಿಂದ ಈ ಪರಿಸ್ಥಿತಿಯಲ್ಲಿ 90 ಪರ್ಸೆಂಟ್ ರಿಪೇರಿ ಬರುತ್ತಿದೆ. 10 ಪರ್ಸೆಂಟ್ ರಿಪೇರಿ ಮಾಡತಕ್ಕ ವ್ಯವಸ್ಥೆಯಲ್ಲಿ 90 ಪರ್ಸೆಂಟ್ ರಿಪೇರಿ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಪ್ರಪ್ರಥಮವಾಗಿ ಬೋರ್‌ವೆಲ್ ರಿಪೇರಿ ಕಾರ್ಯ ಮಾಡಬೇಕು. ಹೊಸ ಬೋರ್‌ವೆಲ್ ಹಾಕತಕ್ಕದ್ದು, ಕಿರುನೀರು ಸರಬರಾಜು ಯೋಜನೆ ಮಾಡತಕ್ಕಂಥಾದ್ದು ಎರಡನೇ ವಿಚಾರವಿರಲಿ.

ಬೋರ್‌ವೆಲ್ ರಿಪೇರಿಗೆ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ಏನು ಟೀಮ್ ಇದೆ. ಅದರ ಜೊತೆ ಇನ್ನೊಂದು ಏಜೆನ್ಸಿಯನ್ನು ಕ್ರಿಯೇಟ್ ಮಾಡಿ ಇಡೀ ಬರ ಇರತಕ್ಕ ತಾಲ್ಲೂಕುಗಳಲ್ಲಿ ಎಲ್ಲಾ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸತಕ್ಕದ್ದು ಪ್ರಪ್ರಥಮವಾಗಿ ಆಗಬೇಕು. ಎರಡನೆಯದು, ಬೋರ್‌ವೆಲ್ ಜೊತೆಗೆ ಬೋರ್‌ವೆಲ್ ಆಳ ಮಾಡತಕ್ಕದ್ದು

ಆಗಬೇಕು. ಉದಾಹರಣೆಗೆ 1437 ಬೋರ್‌ವೆಲ್‌ಗಳು ನನ್ನ ತಾಲ್ಲೂಕಿನಲ್ಲಿದೆ. 900 ಬೋರ್‌ವೆಲ್‌ಗಳಲ್ಲಿ ನೀರು ಬರುತ್ತಿಲ್ಲ. ಅರ್ಧ ಘಂಟೆ ಹ್ಯಾಂಡಲ್ ಹೊಡೆದರೆ ಎರಡು ಬಿಂದಿಗೆ ನೀರು ಬಂದುನಿಂತುಹೋಗುತ್ತದೆ. ಕೊನೆಪಕ್ಷ ೫೦೦ ಬೋರ್ ವೆಲ್‌ಗಳಿಗೆ ಒಂದು ಸಾವಿರ ರೂಪಾಯಿ ಖರ್ಚು ಮಾಡಿ ಉದ್ದವಾದ ಪೈಪ್ ಹಾಕಿದರೆ ಕೊನೇಪಕ್ಷ ಒಂದು ತಾಲ್ಲೂಕಿನಲ್ಲಿ ಹೊಸದಾಗಿ ಹಾಕತಕ್ಕ ಬೋರ್‌ವೆಲ್‌ಗಿಂತ ಒಳ್ಳೆಯದಾಗುತ್ತದೆ. ಆದ್ದರಿಂದ 500 ಬೋರ್‌ವೆಲ್ ರಿಪೇರಿ ಮಾಡಿ ನೀರು ಕುಡಿಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಹೊಸ ಬೋರ್‌ವೆಲ್ ಸಹ ಹೆಚ್ಚು ಹಾಕಬೇಕು. ಸನ್ಮಾನ್ಯ ಮಂತ್ರಿಗಳು ಬೋರ್‌ವೆಲ್ ವಿಚಾರದಲ್ಲಿ ನಾಳೆ ನಾಡಿದ್ದು ಸ್ಟೇಟ್ ಮೆಂಟ್ ಮಾಡುತ್ತೇನೆ ಎಂದು ಹೇಳಿದ್ದಾರೆ. ಹೆಚ್ಚು ವಿಫಲವಾಗಿರುವ ಕಡೆ ನಾಲ್ಕೈದು ಬೋರ್‌ವೆಲ್ ಹಾಕಿದರೂ ನೀರು ಬರುವುದಿಲ್ಲ. ನನ್ನ ತಾಲ್ಲೂಕಿನಲ್ಲಿ 496ಹಳ್ಳಿಗಳಿವೆ. ಪಿ.ಎಚ್.ಇ.ಗೆ ಬರೆದರೆ, ಸರ್ಕಾರ ಐದಾರು ಬೋರ್‌ವೆಲ್ ಹಾಕಿದರೂ ಪ್ರಯೋಜನವಾಗುವುದಿಲ್ಲ, ಆದ್ದರಿಂದ ಮಿನಿ ವಾಟರ್ ಸಪ್ಲೈ ಸ್ಕೀಮ್ ಮಾಡಿ ಎಂದು ಹೇಳಿದರೆ ಅವರು ಜನಸಂಖ್ಯೆ ಆಧಾರ ತೆಗೆದು ಕೊಳ್ಳುತ್ತಾರೆ. ಹೀಗಾದರೆ ಕುಡಿಯುವ ನೀರಿನ ಪರಿಸ್ಥಿತಿ ತಪ್ಪಿಸುವುದಕ್ಕೆ ಏನು ಮಾಡಬೇಕು ಎಂಬುದನ್ನು ಸರ್ಕಾರ ತಿಳಿಸಬೇಕು. ಮಿನಿ ವಾಡರ್ ಸಪ್ಲೈ ಸ್ಕೀಂ ಮಾಡಿದರೆ ಪರ್ಮನೆಂಟ್ ಅಸೆಟ್ ಆಗುತ್ತದೆ. ಆದ್ದರಿಂದ ಮಿನಿ ವಾಟರ್ ಸಪ್ಲೈ ಸ್ಕೀಂ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಎಲ್ಲಿ ನಾಲ್ಕೈದು ಬೋರ್‌ವೆಲ್ ಹಾಕಿದರೂ ನೀರು ಬರುವುದಿಲ್ಲವೊ ಅಲ್ಲಿ ಸಮಸ್ಯಾತ್ಮಕ ಗ್ರಾಮ ಎಂದು ಮಾಡಬೇಕು. ಮಾನ್ಯ ಫೋರ್ಜಡೆ ಅವರು ಗ್ರಾಮೀಣಾಭಿವೃದ್ಧಿ ಮಂತ್ರಿಗಳಾಗಿದ್ದಾಗ ಈ ಸದನದಲ್ಲಿ ಅವರನ್ನು ಕೇಳಿದ್ದೆ. ನಾಗಮಂಗಲ ತಾಲ್ಲೂಕಿನಲ್ಲಿ ಕೆಲವು ಹಳ್ಳಿಗಳಲ್ಲಿ ನಾಲ್ಕೈದು ಕಿಲೋಮೀಟರ್‌ನಿಂದ ನೀರು ಹೊತ್ತುಕೊಂಡು ಬಂದು ಕುಡಿಯುತ್ತಿದ್ದಾರೆ. ಅದ್ದರಿಂದ ಅಲ್ಲಿ ಜನಸಂಖ್ಯೆ ಆಧಾರ ಇಟ್ಟುಕೊಳ್ಳದೆ ಸಮಸ್ಯಾತ್ಮಕ ಹಳ್ಳಿಗಳು ಎಂದು ಮಾಡಿ ಕಿರುನೀರು ಸರಬರಾಜು ಯೋಜನೆ ಮಾಡಬೇಕು ಎಂದು ನಾವು ಹೇಳಿದ್ದೆವು.

ಅದನ್ನೂ ಕೂಡಾ ವ್ಯವಸ್ಥಿತವಾಗಿ ಮಾಡಬೇಕು. ನಮ್ಮ ತಾಲ್ಲೂಕಿಗೆ 200 ಬೋರ್‌ವೆಲ್‌ಗಳನ್ನು ಮಾಡುವ ಬಗ್ಗೆ ಅನೌನ್ಸ್ ಮಾಡಬೇಕು. ನಮ್ಮ ತಾಲ್ಲೂಕಿನ ಪ್ರತಿ ಹಳ್ಳಿಗಳಲ್ಲಿ ನಾವು ತಿರುಗಾಡುವುದಕ್ಕಾಗುವುದಿಲ್ಲ. ಇವತ್ತು ಜನರು ಬಹಳ ಎಚ್ಚೆತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ತಾವು ಜನತೆಗೆ ಕುಡಿಯುವುದಕ್ಕೆ ನೀರು ಕೊಡದೇ ಇನ್ನೇನು ಕೊಡುತ್ತೀರಿ ಎಂದು ನಮ್ಮನ್ನು ಪ್ರಶ್ನೆ ಕೇಳುತ್ತಾರೆ. ಇವತ್ತು ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವ ಕೆಲಸವನ್ನು ಸರ್ಕಾರ ಮಾಡಬೇಕು. ಇವತ್ತು ದನಕರುಗಳಿಗೆ ಮೇವು ಬೇಕಾಗಿದೆ. ಇದಕ್ಕಾಗಿ ಫಾಡರ್ ಬ್ಯಾಂಕ್‌ಗಳನ್ನು ತೆಗೆಯಬೇಕು. ಮತ್ತೆ ಗೋಶಾಲೆಗಳನ್ನು ತೆಗೆಯತಕ್ಕ ವ್ಯವಸ್ಥೆ ಮಾಡಬೇಕು. ಹೊರ ರಾಜ್ಯಗಳಲ್ಲಿ ಎಲ್ಲಿ ಹುಲ್ಲು ಸಿಗುತ್ತದೋ ಅದನ್ನು ತಂದು ಕೊಡತಕ್ಕ ವ್ಯವಸ್ಥೆ ಮಾಡಬೇಕು. ಹುಲ್ಲನ್ನು ನೀವೇ ತೆಗೆದುಕೊಳ್ಳಿ, ಪ್ರಯಾಣಿಕ ವೆಚ್ಚವನ್ನು ಮಾತ್ರ ಕೊಡುತ್ತೇವೆಂದು ತಹಶೀಲ್ದಾರರು, ಜಿಲ್ಲಾಧಿಕಾರಿಗಳು ಹೇಳುತ್ತಾರೆ. ಆದರಿಂದ ಏನೂ ಪ್ರಯೋಜನವಾಗುವುದಿಲ್ಲ. ಹೊರರಾಜ್ಯಗಳಿಂದ ಹುಲ್ಲನ್ನು ಟ್ರೆನ್ ಮತ್ತು ಲಾರಿಗಳಲ್ಲಿ ತರಿಸಿ ಇಟ್ಟುಕೊಳ್ಳಬೇಕು. ಮಾರ್ಚ್, ಏಪ್ರಿಲ್, ಮೇ ತಿಂಗಳಲ್ಲಿ ದನಕರುಗಳು ಬದುಕಬೇಕಾದರೆ ಈಗಿನಿಂದಲೇ ಮೇವಿಗೆ ಸಿದ್ಧತೆ ಮಾಡಿಕೊಳ್ಳುವುದು ಸೂಕ್ತ. ಇವತ್ತು ದನಕರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಪಿಟ್ ವೆಲ್ಸ್ ಮಾಡಿಸಬೇಕಾಗಿದೆ. ಒಂದು ವಿಷಯವನ್ನು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ತುಮಕೂರು, ಹಾಸನ ಮತ್ತು ಮಂಡ್ಯಕ್ಕೆ ಮೂರು ಜನ ಜಿಲ್ಲಾಧಿಕಾರಿಗಳು ಬಂದಿದ್ದಾರೆ. ಅವರಿಗೆ ಗೋಶಾಲೆ ಎಂದರೆ ಗೊತ್ತಿಲ್ಲ. ಗಂಜಿ ಕೇಂದ್ರ ಎಂದರೆ ಮೊದಲೆ ಗೊತ್ತಿಲ್ಲ. ಕಾರ್ ಹತ್ತುವಾಗ ಒಂದು ಆದೇಶ ಮಾಡಿ, ಕಾರಿನಿಂದ ಇಳಿಯುವಾಗ ಅದನ್ನು ಕಿತ್ತುಹಾಕುತ್ತಾರೆ.

ಪ್ರಜಾಪ್ರತಿನಿಧಿಗಳ ಜೊತೆಯಲ್ಲಿ ಯಾವ ರೀತಿ ಸಹಕರಿಸಬೇಕು ಮಾತನಾಡಬೇಕೆಂದು ಈ ಮೂವರು ಜಿಲ್ಲಾಧಿಕಾರಿಗಳಿಗೆ ಗೊತ್ತಿಲ್ಲ. ಮಾನ್ಯ ಖರ್ಗೆಯವರು ಬಹಳ ಅನುಭವಸ್ಥರಿದ್ದಾರೆ, ಅವರಿಗೆ ಒಳ್ಳೆಯ ಹೆಸರಿದೆ. ದಯಮಾಡಿ ಈ 3 ಜನರನ್ನು ಕರೆದು ಶಾಸಕರ ಜೊತೆ, ಪ್ರಜಾ ಪ್ರತಿನಿಧಿಗಳ ಜೊತೆ ಹೇಗೆ ನಡೆದುಕೊಳ್ಳಬೇಕು, ಯಾವ ರೀತಿ ಕೆಲಸ ಮಾಡಿಸಬೇಕೆಂಬುದರ ಬಗ್ಗೆ ಒಂದು ವ್ಯವಸ್ಥೆ ನಿರೂಪಿಸಬೇಕಾಗಿದೆ. ಒಂದು ಸಾರಿ 3 ಕೆಲಸಗಳನ್ನು ಒಟ್ಟಿಗೆ ಕೊಡುತ್ತೇವೆಂದು ನಾಗಮಂಗಲಕ್ಕೆ ಬಂದು ಹೇಳಿ ಹೋಗುತ್ತಾರೆ. ಆ ನಂತರ ಮಂಡ್ಯಾಕ್ಕೆ ಹೋಗಿ ಈ ಕೆಲಸ ಮಾಡಲು ಯಾರು ಹೇಳಿದ್ದು ಎಂದು ಬಿಡಿಒಗಳಿಗೆ ತರಾಟೆಗೆ ತೆಗೆದುಕೊಳ್ಳುತ್ತಾರೆ. ಅನಂತರ ಈ 3 ಕೆಲಸಗಳನ್ನು ಕ್ಯಾನ್ಸಲ್ ಮಾಡಿ 10 ಕೆಲಸ ಕೊಟ್ಟಿದ್ದೇವೆ ಮಾಡಿ ಎಂದು ಹೇಳುತ್ತಾರೆ. ಇದಕ್ಕೆ ನಿಜವಾದ ಒಂದು ವ್ಯವಸ್ಥೆಯಿಲ್ಲ. ಸ್ಕೀಮ್ಗಳಿಗೆ ಪ್ರತ್ಯೇಕ ಕಮಿಟಿಯನ್ನು ಜಿಲ್ಲಾ ಪರಿಷತ್ತಿನ ಆಕ್ಟ್‌ನಲ್ಲಿ ಸರಿಯಾಗಿ ತೋರಿಸಿಲ್ಲದೇ ಇರುವುದರಿಂದ ಈ ಅಡಚಣೆಯಾಗಿದೆ. ಈ ಬಗ್ಗೆ ಪ್ರತ್ಯೇಕ ಕಮಿಟಿ ಮಾಡಿ ಅದರ ಶಿಫಾರಸ್ಸುಗಳನ್ನು ಪರಿಶೀಲನೆ ಮಾಡಿ ಕೆಲಸಕಾರ್ಯಗಳನ್ನು ನೋಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನು ಕೃಷಿ ಕಾರ್ಮಿಕರಿಗೆ ಕೆಲಸ. ನಮ್ಮ ತಾಲ್ಲೂಕಿನ ವಿಷಯ ತಮಗೇ ಗೊತ್ತಿದೆ. ತಾವು ಈ ಊರಿನಲ್ಲಿ ಯಾವುದಾದರೂ ಹೋಟೆಲಿಗೆ ಹೋಗಿ ಅಲ್ಲಿ ತಿಂಡಿ ತಿಂದರೆ ಅದರ ಲೋಟ ತೋಳೆಯುವವನು ನಮ್ಮ ತಾಲ್ಲೂಕಿನವನು. ವಿದಾನಸೌಧದ ಗೇಟ್‌ನಲ್ಲಿ ಇರುವ ಜವಾನರು, ಕಸ ಗುಡಿಸುವವರು ಎಲ್ಲಾ ಹೆಚ್ಚು ಕಡಿಮೆ ನಮ್ಮ ತಾಲ್ಲೂಕಿನವರೇ. ಇವತ್ತು ನಾನು ಏನಾದರೂ ಒಂದು ಕರೆಕೊಟ್ಟರೆ ನಮ್ಮ ತಾಲ್ಲೂಕಿನವರೇ ವಿಧಾನಸೌಧದ ಬೀಗ ಹಾಕಿಬಿಡುತ್ತಾರೆ. ಆಗ ಯಾರೂ ಕೂಡಾ ಒಳಕ್ಕೆ ಬರಲು ಸಾಧ್ಯವಾಗುವುದಿಲ್ಲ. ನಮ್ಮ ತಾಲ್ಲೂಕಿನ ಜನ ಎಲ್ಲಾ ಕಡೆ ವಲಸೆ ಹೋಗುತ್ತಿದ್ದಾರೆ. ಇವತ್ತು ಕೃಷಿ ಕಾರ್ಮಿಕರಿಗೆ ಕೆಲಸ ಕೊಡುವ ಅವಕಾಶವನ್ನು ತಾವು ಮಾಡಿಕೊಡಬೇಕು. ಜವಾಹರ್ ರೋಜ್ಗಾರ್ ಯೋಜನೆ ಬಗ್ಗೆ ನಮ್ಮ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಚೆನ್ನಾಗಿ ಹೇಳಿದರು. ಜವಾಹರ್ ರೋಜ್ಗಾರ್‌ನ್ನು ಕಿತ್ತುಕೊಂಡಿರಿ, ಇದನ್ನು ಬೇರೆ ಭಾಗದಲ್ಲಿ ಕೊಡಬಾರದು ಎಂದು ಹೇಳಿದರು. ನನ್ನ ಅನಿಸಿಕೆಯಲ್ಲಿ ಜವಾಹರ್ ರೋಜ್ಗಾರ್ ಬಗ್ಗೆ ಇರುವ ಹಣವನ್ನು ಕೊಟ್ಟಿರತಕ್ಕದ್ದು ಸೂಕ್ತ ಆಗಿದೆ. ಇದು ಕೇವಲ ಕೆಲವೇ ಏಜೆಂಟರುಗಳ ಕಿಸೆಗೆ ಹೋಗುತ್ತಾ ಇತ್ತು. ಮಂಡಲ ಪಂಚಾಯಿತಿಯಲ್ಲಿ ದುರ್ವ್ಯವಹಾರ ಆಗುತ್ತಾ ಇತ್ತು ಜಿಲ್ಲಾಪರಿಷತ್ತಿನಲ್ಲಿ ಹಣನೇರವಾಗಿ ಅಲ್ಲಿಗೆ ತಲುಪುತ್ತಿರಲಿಲ್ಲ. ಇವತ್ತು ಜವಾಹರ್ ರೋಜ್ಗಾರ್ ಹಣವನ್ನು ಬೇರೆ ಕಡೆಗೆ ಏನೂ ಕೊಟ್ಟಿಲ್ಲ. ಇದನ್ನು ಮಂಡಲದಲ್ಲಿ ಖರ್ಚು ಮಾಡುವುದಕ್ಕೆ ಕೊಡುತ್ತಿದ್ದಾರೆ ಅಲ್ಲಿ ಅದಷ್ಟು ಶೀಘ್ರವಾಗಿ ಕೆಲಸ ತೆಗೆದುಕೊಳ್ಳುವುದಕ್ಕೆ ಆದೇಶ ಕೊಡಬೇಕು. ಇದರಲ್ಲಿ ಯಾವ ಬದಲಾವಣೆಯನ್ನೂ ಮಾಡಬಾರದು ಎಂದು ಹೇಳುತ್ತೇನೆ. ಇನ್ನು.....

ಉಪಾಧ್ಯಕ್ಷರು: ಇನ್ನೂ 7-8 ಜನ ಮಾತನಾಡುವವರು ಇದ್ದಾರೆ. ತಾವು ಬೇಗ ಮುಕ್ತಾಯ ಮಾಡಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇನ್ನು 2 ನಿಮಿಷದಲ್ಲಿ ಮುಗಿಸುತ್ತೇನೆ. ಇವತ್ತು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪರಿಷತ್ತಿನ ನಡುವೆ ಸ್ವಲ್ಪ ಗೊಂದಲ ಇದೆ. ಈ ಗೊಂದಲವನ್ನು ಮೊದಲು ನಿವಾರಣೆ ಮಾಡಬೇಕು. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಜಾಯತಿ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂಬ ಅನಿಸಿಕೆ ಮೇಲೆ ಜಿಲ್ಲಾಧಿಕಾರಿಗಳ ಮೂಲಕ ಹಣವನ್ನು ಕೊಟ್ಟರೂ ಸಹ ಅಲ್ಲಿ ಕೆಲಸ ಮಾಡಿಸತಕ್ಕಂಥಾದ್ದು ಜಿಲ್ಲಾ ಪರಿಷತ್ತಿನ ಅಧಿಕಾರಿಗಳ ಮುಖಾಂತರವೇ. ಅಲ್ಲಿ ಕೆಲಸ ಮಾಡಿದಕ್ಕಂಥಾದು ಜಿಲ್ಲಾ ಪರಿಷತ್ತಿನ ಅಧಿಕಾರಿಗಳೇ ಆದರೂ ಅವರು ಜಿಲ್ಲಾ ಪರಿಷತ್ತಿನ ಕಂಟ್ರೋಲ್

ನಲ್ಲಿರುತ್ತಾರೆ. ಈ ವ್ಯವಸ್ಥೆಯಲ್ಲಿ ಜಿಲ್ಲಾ ಪರಿಷತ್ತು ಮತ್ತು ಜಿಲ್ಲಾಧಿಕಾರಿಗಳೂ ಸ್ವಲ್ಪ ಗೊಂದಲ ಇದೆ. ಇದನ್ನು ಸರಿಪಡಿಸುವುದಕ್ಕೆ ಒಂದು ಕಮಿಟಿ ಮಾಡಿ ಬೇರೆ ನಾರ್ಮ್ಸ್ ಅನ್ನು ಹಾಕಿ ಈ ಅಧಿಕಾರಿಗಳು ಅಲ್ಲೇ ಕೆಲಸ ಮಾಡಬೇಕು ಒಂದು ಹೇಳಬೇಕು. ಇವತ್ತು 36 ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ, ಅದು ಏನೇನೂ ಸಾಲದು. ಉದಾಹರಣೆಗೆ ನಾಗಮಂಡಲ ತಾಲ್ಲೂಕಿಗೆ 32ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಅಲ್ಲಿ 496 ಹಳ್ಳಿಗಳು ಇದೆ. 5400 ರೂಪಾಯಿ ಒಂದು ಹಳ್ಳಿಗೆ ಬರುತ್ತದೆ. ನಾಗಮಂಗಲ ತಾಲ್ಲೂಕಿನಲ್ಲಿ ಸಂಪೂರ್ಣ ನೂರಕ್ಕೆ ನೂರರಷ್ಟು ಬರ ಇದೆ ಎಂದು ತಹಶೀಲ್ದಾರರು ರಿಪೋರ್ಟ್ ಕೊಟ್ಟಿದ್ದಾರೆ. ಇದನ್ನು ಜಿಲ್ಲಾಧಿಕಾರಿಗಳು ಹಾಗೂ ಕಂದಾಯ ಮಂತ್ರಿಗಳೂ ಕೂಡ ಒಪ್ಪಿಕೊಂಡಿದ್ದಾರೆ. ಕಂದಾಯ ಇಲಾಖೆಯ ಕಾರ್ಯದರ್ಶಿಗೂ ಕೂಡ ಒಪ್ಪಿಕೊಂಡಿದ್ದಾರೆ, ಆದರೆ ಹೆಚ್ಚು ಹಣವನ್ನು ಮಾತ್ರ ಕೊಟ್ಟಿಲ್ಲ. ಹಣದ ಕೊರತೆ ಇದೆ ಆದರೆ ಇಂತಹ ಕಡೆಗಳಲ್ಲಿ ಸ್ವಲ್ಪ ಹೆಚ್ಚು ಹಣವನ್ನು ನೀಡಬೇಕು. ರೋಗಿಗೆ ಮೊದಲು ಉಸಿರಾಡುವುದಕ್ಕೆ ಆಮ್ಲಜನಕವನ್ನು ಕೊಟ್ಟು ನಂತರ ದೊಡ್ಡ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಳ್ಳಲಿ ಎಂದು ಮಾನ್ಯ ಕಂದಾಯ ಮಂತ್ರಿಗಳು ಹೇಳಿದರು. ಆದರೆ ಆಮ್ಲಜನಕವೇ ಇಲ್ಲದೆ ಇರತಕ್ಕಂತಹ ಪರಿಸ್ಥಿತಿ ನಮ್ಮ ತಾಲ್ಲೂಕಿಗೆ ಆಗಿದೆ. ಆಮ್ಲಜನಕ ಕೊಡಬೇಕಾದರೂ ಕೊನೇಪಕ್ಷ ಒಂದು ಕೋಟಿ ರೂಪಾಯಿಯನ್ನಾದರೂ ನಮ್ಮ ತಾಲ್ಲೂಕಿಗೆ ಬಿಡುಗಡೆ ಮಾಡಬೇಕು. ದಯಮಾಡಿ ಶೀಘ್ರವಾಗಿ ಒಂದು ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿ ಅಲ್ಲಿ ಏನು ಬರ ಇದೆ ಅದಕ್ಕೆ ಆಮ್ಲಜನಕವನ್ನು ನೀಡಿ ಉಸಿರಾಡಲು ಅನುವು ಮಾಡಿಕೊಡಬೇಕು. ನಾಗಮಂಗಲ, ಬೆಳ್ಳೂರು ಕಡೆಗಳಲ್ಲಿ ನೀರಿನ ಅಭಾವವಿದೆ. ನಗರಗಳಲ್ಲಿ, ತಾಲ್ಲೂಕು ಮಟ್ಟದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಅಲ್ಲಿ ಕುಡಿಯುವ ನೀರಿನ ಅಸ್ತವ್ಯಸ್ತ ಅಷ್ಟಿಷ್ಟಲ್ಲ. ನಾಗಮಂಗಲದಲ್ಲಿ ಹೆಂಗಸರು ನೀರು ಹಿಡಿಯಬೇಕಾದರೆ ಹಳೇ ಕಾಲದಲ್ಲಿ ಹಾಕಿರತಕ್ಕಂತಹ ಪೈಪುಗಳು ಇವೆ, ಅವು 5 ಅಡಿ ಆಳದಲ್ಲಿ ಇದೆ. ಅಲ್ಲಿ ಹೋಗಿ ನೀರನ್ನು ಹಿಡಿಯಬೇಕಾಗುತ್ತದೆ. ನೀರು ಬರತಕ್ಕಂಥಾದ್ದು ಅಲ್ಲೇ, ಮೇಲೆ ನೀರಂತೂ ಬರುವುದೇ ಇಲ್ಲ. ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟು ಕೊನೇ ಪಕ್ಷ 25 ಬೋರ್‌ವೆಲ್ ಗಳನ್ನು ಬೆಳ್ಳೂರಿಗೆ ತಾತ್ಕಾಲಿಕವಾಗಿ ಹಾಕಿಸಿಕೊಡಬೇಕು. ಬರಗಾಲ ಇನ್ನೂ ಹೆಚ್ಚಿನ ರೀತಿಯಲ್ಲಿ ಇನ್ನು 3 ತಿಂಗಳಲ್ಲಿ ಬರುತ್ತದೆ. ಇದಕ್ಕೆ ಸಮರೋಪಾದಿಯಲ್ಲಿ ಹೋರಾಟ ಮಾಡುವುದಕ್ಕೆ ಸರಕಾರ ಸಿದ್ಧವಾಗಬೇಕು. ಕೊನೇ ಪಕ್ಷ 200 ಕೋಟಿ ರೂಪಾಯಿಗಳನ್ನಾದರೂ ರೆಡಿ ಇಟ್ಟುಕೊಂಡು ಇನ್ನು 3 ತಿಂಗಳಲ್ಲಿ ಹೋರಾಟ ಮಾಡದೇ ಹೋದರೆ ನಿಜಕ್ಕೂ ಸರಕಾರಕ್ಕೆ ಕೆಟ್ಟ ಹೆಸರು ಕಟ್ಟಿಟ್ಟ ಬುತ್ತಿ. ಈ ಬರ ಏನು ಬಂದಿದೆ, ಇದನ್ನು ನೇರವಾಗಿ ಎದುರಿಸತಕ್ಕಂತಹ ವ್ಯವಸ್ಥೆ ಮಾಡಬೇಕೆಂದು ಹೇಳುತ್ತಾ, ಇಷ್ಟು ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ್) : ಮಾನ್ಯ ಉಪಾಧ್ಯಕ್ಷರೆ, ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ, ಸಮಯದ ಅಭಾವ ಇದೆ. ಅಲ್ಲದೆ ನನ್ನ ಮಿತ್ರರು ಈ ಸಮಸ್ಯೆಮೇಲೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಇವತ್ತು ಅಭಿವೃದ್ಧಿ ಕೆಲಸವನ್ನು ನಿಲ್ಲಿಸಿ ಹಣವನ್ನು ಡೈವರ್ಟ್ ಮಾಡಿದ್ದೇವೆಂದು ಮಾನ್ಯ ಸಚಿವರು ಹೇಳಿದರು. ಡೆವಲಪ್‌ಮೆಂಟ್ ಅನ್ನು ನಿಲ್ಲಿಸಿ ಸ್ಕೇರ್‌ಸಿಟಿಗೆ ಹಣವನ್ನು ಡೈವರ್ಟ್ ಮಾಡುವುದು ಇದ್ದರೆ ಆ ಭಾಗದಲ್ಲಿ ಡೆವಲಪ್‌ಮೆಂಟ್ ಅನ್ನು ಸ್ಟಾಪ್ ಮಾಡಿದರೆ ಅಲ್ಲಿ ಬಡ ಜನರಿಗೆ ಉದ್ಯೋಗ ಅವಕಾಶ ಕೊಡುವ ಪ್ರಶ್ನೆ ಎಲ್ಲಿ ಬರುತ್ತದೆ. ಇವತ್ತು 36 ಕೋಟಿ ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ. ಆ 36 ಕೋಟಿಯಲ್ಲಿ ರಾಜ್ಯ ಸರ್ಕಾರದ ಹಣ ಕೇವಲ 2 ಕೋಟಿ ರೂಪಾಯಿ ಮಾತ್ರ ಇದೆ ಅಷ್ಟೂ

ಪ್ಲಾನ್ಡ್ ಫಂಡ್‌ನಲ್ಲಿ ಜಿ. ಆರ್. ವೈನಲ್ಲಿ 80 ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೇಂದ್ರ ಸರಕಾರದ್ದು ಇದೆ ಕೇವಲ 20 ಪರ್ಸೆಂಟ್ ರಾಜ್ಯಸರಕಾರದ್ದು ಇದೆ. ಹೀಗೇ ಪ್ರತಿಯೊಂದು ಹೆಡ್ಸ್ ಅನ್ನು ನೋಡಿದಾಗ ಕೇಂದ್ರ ಸರಕಾರದಿಂದ ಏನು ಹಣ ಬಂದಿದೆ ಅದೇ ಹಣವನ್ನು ರಾಜ್ಯ ಸರ್ಕಾರ ಹೆಚ್ಚು ಉಪಯೋಗ ಮಾಡಿದೆಯೋ ವಿನಃ ರಾಜ್ಯ ಸರ್ಕಾರ ಹೆಚ್ಚು ಉಪಯೋಗ ಮಾಡಿದೆಯೇ ವಿನಃ ರಾಜ್ಯ ಸರಕಾರ ಇದಕ್ಕೆ 2-4 ಕೋಟಿ ರೂಪಾಯಿಗಳ ಮೇಲೆ ಹಣವನ್ನು ಬಿಡುಗಡೆ ಮಾಡಿದ ಹಾಗೆ ಕಾಣುವುದಿಲ್ಲ.

36 ಕೋಟಿ ರೂಪಾಯಿಗಳನ್ನು ಏನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ ಅದನ್ನು ಯಾವ ದಿವಸ ರಿಲೀಸ್ ಮಾಡಲಾಗಿದೆ ಎನ್ನುವುದು ಕಾಣುತ್ತಿಲ್ಲ. ಎಷ್ಟು ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾಪರಿಷತ್‌ನವರಿಗೆ ಮುಟ್ಟಿದೆ ಎನ್ನುವುದು ನಮಗೆ ಸ್ಪಷ್ಟವಾಗಿ ಕಾಣುತ್ತಿಲ್ಲ. ಅದನ್ನು ಮಾನ್ಯ ಸಚಿವರು ಹೇಳಬೇಕಾಗುತ್ತದೆ. ಮಾನ್ಯ ಖರ್ಗೆಯವರು ನನ್ನ ಮಿತ್ರರು ಬಹಳ ದಕ್ಷ ಸಚಿವರು, ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನನಗೆ ಗೊತ್ತಿಲ್ಲ, ನಮ್ಮ ಜಿಲ್ಲೆಯ ಮೇಲೆ ಏತಕ್ಕೆ ಕೋಪ ಎಂದು ನಮ್ಮ ಜಿಲ್ಲೆಯನ್ನು ಬರಗಾಲಪೀಡಿತ ಜಿಲ್ಲೆ ಮಾಡಿದಿರಿಯೆಂದು ಹೇಳುವುದಿಲ್ಲ. ಆದರೆ 1985-86,1986-87 ಮತ್ತು 1987-88 ಈ ಮೂರು ವರ್ಷಗಳಲ್ಲಿ ಆ ಭಾಗದಲ್ಲಿ ಸಾಕಷ್ಟು ಬರಗಾಲವಿತ್ತು. ಈ ವರ್ಷ ಸಿರ್ಸಿ ತಾಲ್ಲೂಕಿನ ಕೆಲವು ಭಾಗ, ಯಲ್ಲಾಪುರ, ಸೂಪ ಈ ತಾಲ್ಲೂಕುಗಳ ಕೆಲವು ಭಾಗ, ಹುನಗೋಡ ಮತ್ತು ಹಳಿಯಾಳದ ಕೆಲವು ಭಾಗಗಳಲ್ಲಿ ಕಾರವಾರದ ಕೆಲವು ಭಾಗಗಳಲ್ಲಿ ಅತಿವೃಷ್ಟಿಯಿಂದ ಬೆಳೆ ಹಾಳಾಗಿದೆ. ಹುನಗೋಡ, ಯಲ್ಲಾಪುರ, ಸಿರ್ಸಿ ಈ ಭಾಗಗಳಲ್ಲಿ ಅತಿವೃಷ್ಟಿಯಿಂದ ಬೆಳೆ ಸಂಪೂರ್ಣವಾಗಿ ಹಾಳಾಗಿದೆ. ನನಗೆ ಆಶ್ಚರ್ಯವಾಗುತ್ತಿದೆ, ಕೃಷಿ ಇಲಾಖೆ ಏನು ಮಾಡುತ್ತಿದೆ? ತಮ್ಮ ವರದಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಧಿಕಾರಿಗಳು ಕೊಟ್ಟ ಮಾಹಿತಿಯನ್ನು ತಾವು ಇಲ್ಲಿ ಹೇಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ತಾವೇನು ಮಾಡುತ್ತಿದ್ದೀರಿ?

ಶ್ರೀ ಆರ್. ವಿ. ದೇಶಪಾಂಡೆ: ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

Sri M. MALLIKARJUNA KHARGE: Everybody has to depend on the Government machinery only. If you have got any doubt, I will clarify.

ಶ್ರೀ ಆರ್.ವಿ. ದೇಶಪಾಂಡೆ : ನಾನು ಒಪ್ಪಿಕೊಳ್ಳುತ್ತೇನೆ. ನಾನು ನಿಮ್ಮನ್ನು ಬ್ಲೇಮ್ ಮಾಡುತ್ತಿಲ್ಲ. ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಅಧಿಕಾರಿಗಳು ಕೊಟ್ಟ ವರದಿಯನ್ನು ವೆರಿಫೈ ಮಾಡಿ. ಕೃಷಿ ಇಲಾಖೆಯವರು ಎಷ್ಟು ಬೆಳೆ ಹಾಳಾಗಿದೆ ಎನ್ನುವುದನ್ನು ನೋಡಬೇಕು. ಇವತ್ತು ಇಡೀ ಕಾಟನ್ ಬೆಳೆ ಅತಿವೃಷ್ಟಿಯಿಂದ ಹಾಳಾಗಿದೆ. ಮಳೆ ಹೋಯಿತು ಅದರಿಂದ ಬತ್ತದ ಬೆಳೆಯ ಮೇಲೆ ಪರಿಣಾಮ ಬೀರಿದೆ. ಈ ಬಗ್ಗೆ ವ್ಯವಸಾಯ ಇಲಾಖೆಯ ರಿಪೋರ್ಟ್ ಇಲ್ಲ, ಆದ್ದರಿಂದ ಇವತ್ತು ಉತ್ತರಕನ್ನಡ ಜಿಲ್ಲೆಯಲ್ಲಿ ಯಾವುದೂ ಬರಗಾಲವಿಲ್ಲವೆಂದು ಅವರು ಹೇಳಿದ್ದಾರೆ. ಇವತ್ತು ಕುಡಿಯುವ ನೀರಿನ ಸಮಸ್ಯೆ ಇದೆ. ಪಟ್ಟಣಗಳಲ್ಲಿ ಕುಡಿಯುವ ನೀರಿಲ್ಲ, ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿಲ್ಲ. ಈ ಬಗ್ಗೆ ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ರಿಪೋರ್ಟ್ ಬರಬೇಕಾಗಿತ್ತು. ಅದು ಏತಕ್ಕೆ ಬರಲಿಲ್ಲವೆಂದು ನನಗೆ ಗೊತ್ತು. ಅದರ ಸಲುವಾಗಿ ನಾನು ವಿನಂತಿಮಾಡಿಕೊಳ್ಳುತ್ತೇನೆ. ತಕ್ಷಣ ತಾವು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆಮಾಡಿ, ಅದರ ಬಗ್ಗೆ ವರದಿ ತರಿಸಿ ಸೂಕ್ತ ಕ್ರಮ ತೆಗೆದುಕೊಂಡು ಅದಷ್ಟುಬೇಗ ಈ ಜಿಲ್ಲೆಗೆ ಕುಡಿಯುವು ನೀರಿನ ವ್ಯವಸ್ಥೆ ಮಾಡಬೇಕು. ಎಲ್ಲಿ ರೈತರ ಬೆಳೆ ಹಾಳಾಗಿದೆ ಅಲ್ಲಿ ರೈತರಿಗೆ ಸಹಾಯ

ಮಾಡಲಿಕ್ಕೆ ಹಣವನ್ನು ಬಿಡುಗಡೆ ಮಾಡಬೇಕು. ಮತ್ತು ಎಲ್ಲೆಲ್ಲಿ ಜನರಿಗೆ ಉದ್ಯೋಗ ಕೊಡ ಬೇಕು ಅದನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಇವತ್ತು ಏನಾಗಿದೆ ಅಂದರೆ, ನಮ್ಮ ರಾಜ್ಯದಿಂದ ಜನರು ಉದ್ಯೋಗಕ್ಕಾಗಿ ಗೋವಾ ಮತ್ತು ಮಹಾರಾಷ್ಟ್ರಕ್ಕೆ ಹೋಗುತ್ತಿದ್ದಾರೆ. ಬಿಜಾಪುರ, ಬೆಳಗಾವಿ ಮತ್ತು ಉತ್ತರಕನ್ನಡ ಜಿಲ್ಲೆಯ ಜನರು ಗೋವಾ ಮತ್ತು ಮಹಾರಾಷ್ಟ್ರಕ್ಕೆ ಹೋಗುತ್ತಿದ್ದಾರೆ, ಅದನ್ನು ನಿಲ್ಲಿಸಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿಯೇ ಅವರಿಗೆ ಉದ್ಯೋಗವಕಾಶವನ್ನು ಮಾಡಿಕೊಡುವುದು ನಮ್ಮ ಜವಾಬ್ದಾರಿ. ಆ ದೃಷ್ಟಿಯಲ್ಲಿ ತಾವು ಪ್ರಯತ್ನಿಸಬೇಕು. ತಾವು ಏನೊಂದು ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ, ಅದರಲ್ಲಿ ಎಲ್ಲೆಲ್ಲಿ ಬೆಳೆ ಹಾಳಾಗಿದೆ ಅಂತಹ ಕಡೆಗಳಲ್ಲಿ ರೈತರಿಗೆ ಸಹಾಯ ಮಾಡುವುದಕ್ಕೆ ತಮ್ಮ ಕಂಟಿಜನ್ಸಿ ಪ್ಲಾನ್ ಏನು ಎನ್ನುವುದರ ಬಗ್ಗೆ ತಾವು ಹೇಳಲಿಲ್ಲ. ರೈತರಿಗೆ ಬೀಜ ಕೊಡುತ್ತೀರೋ, ಗೊಬ್ಬರ ಕೊಡುತ್ತೀರೋ ಯಾವ ಪ್ರಕಾರ ಕಾಂಟಿಜೆನ್ಸಿ ಪ್ಲಾನ್ ಮಾಡಿದ್ದೀರಿ ಎನ್ನುವುದು ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಕಾಣಿಸುತ್ತಿಲ್ಲ. ಆದ್ದರಿಂದ ತಾವು ರಾಜ್ಯದ 130 ತಾಲ್ಲೂಕುಗಳಲ್ಲಿ ಮತ್ತು ಉತ್ತರಕನ್ನಡ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಇವತ್ತು ಬೆಳೆ ಹಾಳಾಗಿದೆ, ರೈತರು ಕಂಗಾಲಾಗಿದ್ದಾರೆ, ಆ ರೈತರಿಗೆ ಸಹಾಯ ಮಾಡುವುದಕ್ಕೆ ಯಾವ ಪ್ರಕಾರ ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎನ್ನುವುದನ್ನು ತಮ್ಮ ಉತ್ತರದಲ್ಲಿ ಹೇಳಬೇಕು. ಇವತ್ತು ಬೆಳೆ ವಿಮೆ ಬಗ್ಗೆ ತಾವು ಹೇಳಿದ್ದೀರಿ. ನಾನು ಸಹ ಕೃಷಿ ಮಂತ್ರಿಯಾಗಿದ್ದೆ, ನನಗೂ ಅನುಭವ ಇದೆ. ಬೆಳೆ ವಿಮೆ ಮಾಡುತ್ತಿದ್ದೇವೆ, ಅದರಿಂದ ನಿಜವಾಗಿ ರೈತರಿಗೆ ಲಾಭವಾಗುತ್ತಿಲ್ಲ. ಬೆಳೆ ವಿಮೆಯಲ್ಲಿ ಏನಾಗಿದೆ ಅಂದರೆ, ತಾಲ್ಲೂಕಿನ ಒಂದು ಬಾಗದಲ್ಲಿ ಬೆಳೆ ಚೆನ್ನಾಗಿ ಬಂದರೆ ಮುಗಿಯಿತು, ಆ ತಾಲ್ಲೂಕಿನ ರೈತರಿಗೆ ಅದರ ಲಾಭ ಸಿಗುವುದಿಲ್ಲ. ಬನವಾಸಿಯಲ್ಲಿ, ಹಾಸನಕೊಪ್ಪದಲ್ಲಿ ಬೆಳೆ ಹಾಳಾದರೆ ಮತ್ತೊಂದು ಕಡೆ ಬೆಳೆ ಚೆನ್ನಾಗಿ ಬರದಿದ್ದರೆ ಬೆಳೆ ವಿಮೆ ಸಿಗುವುದಿಲ್ಲ. ಇದೇ ಸಮಸ್ಯೆ ಕಾರವಾರ ಮತ್ತು ಯಲ್ಲಾಪುರಗಳಲ್ಲಿದೆ. ಬೆಳೆ ವಿಮೆ ಮಾಡಿದ್ದೇವೆಂದು ಹೇಳಿದ್ದೀರಿ. ಅದರಲ್ಲಿ ಯಾವ ಬೆಳೆಯನ್ನು ಕವರ್ ಮಾಡಿದ್ದೀರಿ. ಕೇಂದ್ರ ಸರ್ಕಾರದ ಜೊತೆ ಮಾತನಾಡಿ ತಾಲ್ಲೂಕು ಯೂನಿಟ್ ಮಾಡುವುದು ಬೇಡ, ಮಂಡಲವನ್ನು ಯೂನಿಟ್ ಮಾಡಿ. ಆ ರೀತಿ ಮಾಡಿದರೆ ರೈತರಿಗೆ ಅನುಕೂಲ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಕೇಂದ್ರ ಸರ್ಕಾರದ ಜೊತೆ ಮಾತನಾಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನಮಾಡಬೇಕು. ಮಾನ್ಯ ಸಿಂಧ್ಯಾರವರು ಹೇಳಿದಾಗ, ಪ್ರದಾನಿ ಚಂದ್ರಶೇಖರ್ ಅವರನ್ನು ವಿನಂತಿ ಮಾಡಿ ಹೇಳಿದ್ದೇವೆ, ಉಪಪ್ರಧಾನಮಂತ್ರಿಗಳನ್ನು ವಿನಂತಿಮಾಡಿ ಹೇಳಿದ್ದೇವೆಂದು ಹೇಳಿದ್ದಾರೆ. ನನಗೆ ಆಶ್ಚರ್ಯವಾಗುತ್ತದೆ. ನಮ್ಮ ಡೆಪ್ಯುಟಿ ಪ್ರಧಾನಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡಾಗ ಅವರು 100 ಕೋಟಿ ಕೊಡುತ್ತೇವೆಂದು ಹೇಳಬೇಕಾಗಿತ್ತು. ಬಹುಶಃ ನಿಮ್ಮ ಪ್ರಬಾವ ಅವರ ಮೇಲೆ ಬಿದ್ದಿಲ್ಲ. ಅವರು ಹೋದ ಕಡೆಗಳಲೆಲ್ಲ ಹಣ ಕೊಡುತ್ತಾ ಹೋಗುತ್ತಿದ್ದಾರೆ. ಆದರೆ ನೀವು ಕೇಳಿದಾಗ ಹಣ ಏಕೆ ಕೊಟ್ಟಿಲ್ಲವೆಂದು ಗೊತ್ತಾಗುತ್ತಿಲ್ಲ. ಇವತ್ತು ನಿಮ್ಮ ಸರ್ಕಾರದ ಪ್ರಭಾವ ಬಹಳ ಇದೆ. ಏಕೆಂದರೆ, ಕೇಂದ್ರದಲ್ಲೂ ನಿಮ್ಮ ಸರ್ಕಾರ ಇದೆ. ಆದ್ದರಿಂದ ನಿಮ್ಮ ಸರ್ಕಾರದ ಮೇಲೆ ಪ್ರಭಾವ ಬೀರಿ ರಾಜ್ಯದಲ್ಲಿ ಭೀಕರ ಗಂಭೀರ ಪರಿಸ್ಥಿತಿ ಇದೆ. ರೈತರು, ಜನರು ಕಂಗಾಲಾಗಿದ್ದಾರೆ ಎಂದು ಇದರ ಬಗ್ಗೆ ಸಾಕಷ್ಟು ಒತ್ತಾಯ ಮಾಡಬೇಕಾಗುತ್ತದೆ. ಕೇವಲ ಅಧಿಕಾರಿಗಳನ್ನು ಕಳಿಸಿದರೆ ಇದು ಸಾಧ್ಯವಿಲ್ಲ, ಅಥವಾ ಬಂದು ಮನವಿ ಕಳಿಸಿದರೆ ಸಾಧ್ಯವಿಲ್ಲ. ತಾವು ತಮ್ಮ ಅಧಿಕಾರಿಗಳು ಡೆಲ್ಲಿಗೆ ಹೋಗಿ ಸಾಕಷ್ಟು ಪ್ರಭಾವವನ್ನು ಬೀರಿ, ತಾವು ರಾಜ್ಯಕ್ಕೆ ಸಾಕಷ್ಟು ಹಣ ತಂದು ಜನರಿಗೆ ಅನುಕೂಲ ಮಾಡುವ ಕೆಲಸ ಮಾಡಬೇಕು. ಉತ್ತರಕನ್ನಡ ಜಿಲ್ಲೆ ಬಗ್ಗೆ ನಾನು ಸಾಕಷ್ಟು ಪ್ರಸ್ತಾಪ ಮಾಡಿದ್ದೇನೆ. ಅದರ ಬಗ್ಗೆ ಸೂಕ್ತ ವರದಿಯನ್ನು ತರಿಸಿ, ಕುಡಿಯುವ ನೀರಿನ ಬಗ್ಗೆಯಾಗಲೀ, ಬರಗಾಲ ಕಾಮಗಾರಿ ಬಗ್ಗೆಯಾಗಲೀ, ರೈತರಿಗೆ ಸಹಾಯ ಮಾಡುವುದರಲ್ಲಾಗಲಿ ತಾವು

ಅದಷ್ಟು ಬೇಗ ಣ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡು, ನನ್ನ ಎರಡು ಮಾತುಗಳನ್ನು ಮು ಸುತ್ತೇನೆ.

+ ಶ್ರೀ ಹೆಚ್ ಏಕಾಂತಯ್ಯ (ಚಿತ್ರದುರ್ಗ) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಈಗಾಗಲೇ ಮಾನ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ನೀಡಿದ್ದಾರೆ. ಈ ಹೇಳಿಕೆಯನ್ನು ಹೇಳುವಾಗ ಪೂರ್ವ ಸಿದ್ಧತೆ ಇಲ್ಲದೆ ಅರೆಮನಸ್ಸಿನಿಂದ, ಈ ಹೇಳಿಕೆಯನ್ನು ನೀಡಿದ್ದಾರೆ ಎಂದು ನನ್ನ ಅನಿ ವಿತರ್ಕ್ಯೋಸ್ಕರ ಎಂದರೆ, ಅವರು ಏನು ಬರಗಾಲ ಪರಿಸ್ಥಿತಿ ಬಗ್ಗೆ ಹೇಳಿಕೆ ನೀಡಿ ದ್ದಾರೆ, ಅದರಲ್ಲಿ ಉಪ್ಪು ಇಲ್ಲ, ಖಾರ ಇಲ್ಲ, ಹುಣಸೆಹಣ್ಣು ಸಹ ಇಲ್ಲ. ಅವ ಏನು ಹೇಳಿದ್ದಾರೆ ಎಂದರೆ, ಯಾರು ಬೆಳೆಯಲಾಗದ ರೈತರಿದ್ದಾರೆ, ಅವರಿಗೆ ನಾವು ಕೃಷಿ ಕೆಲಸ ಒದಗಿಸಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ಯಾರು ಕೃಷಿಕಾರ್ಮಿಕರು ಇದ್ದಾರೆ, ಅವರಿಗೆ ಕೂಲಿ ಕೆಲಸವನ್ನು ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ಅದರೆ ಕರ್ನಾಟಕ ರಾಜ್ಯದಲ್ಲಿ ಇವತ್ತಿನ ದಿವಸ ಈ ಬರಗಾ ಪರಿಸ್ಥಿತಿಯ ಆಧಾರದಿಂದ ಎಷ್ಟು ಜನ ಕೃಷಿ ಕೂಲಿಗಾರರಿಗೆ ಕೆಲಸ ಕೊಟ್ಟಿದ್ದಾರೆ? ರ್ನಾಟಕ ರಾಜ್ಯದಲ್ಲಿ ಸುಮಾರು 68 ಲಕ್ಷ ಕೃಷಿ ಕುಟುಂಬಗಳಿವೆ, ಅವರು ಕೃಷಿ ಕೂಲಿ ಕೆಲಸಗಾರರು ಇದ್ದಾರೆ, ಇವರ ಅಂಕಿ ಅಂಶಗಳ ಪ್ರಕಾರ ಸುಮಾರು ಅವರಲ್ಲಿ ಲಕ್ಷ ಜನ ಕೂಲಿಗಾರರು ಇದ್ದಾರೆ. ಇಲ್ಲಿಯವರೆಗೆ ಇವರ ಲೆಕ್ಕದ ಪ್ರಕಾರ 23 ಮಾನವ ದಿನಗಳನ್ನು ನಿರ್ಮಾಣಾ ಮಾಡಿದ್ದೇವೆ ಎಂಬ ಮಾತನ್ನು ಹೇಳಿದ್ದಾರೆ. ಹಾಗಾದರೆ ಇವರು ಎಷ್ಟು ಜನರಿಗೆ ಶೇಕಡಾವಾರು ಪ್ರಮಾಣ ಕಳೆದ ಮೂರು ತಿಂಗ ಕೂಲಿ ಕೆಲಸವನ್ನು ಕೊಟ್ಟಿದ್ದಾರೆ? 1990ನೇ ಸೆಪ್ಟೆಂಬರ್‌ನಲ್ಲಿ ಒಂದು ಸಭೆಯನ್ನು ಮಾಡಿದ್ದರು. ಆ ಸಭೆಮಾಡಿದಾಗ ಇವರು ಒಂದು ಮಾತನ್ನು ಹೇಳಿದ್ದರು. ಕರ್ನಾಟಕ ರಾಜ್ಯದ ಜಿಲ್ಲೆಗಳಲ್ಲಿ ಸುಮಾರು 100 ತಾಲ್ಲೂಕುಗಳಲ್ಲಿ ಬರಗಾಲವಿದೆ ಎಂಬ ಮಾತನ್ನು ಹೇಳಿದ್ದರು. ಪುನಃ ಹೋದ ತಿಂಗಳು 16ನೇ ತಾರೀಖು ಮಾಡಿದ ಸ ಯ ಆಧಾರದ ಮೇಲೆ 15 ಜಿಲ್ಲೆಗಳಲ್ಲಿ, ಸುಮಾರು 135 ತಾಲ್ಲೂಕುಗಳಲ್ಲಿ ತೀವ್ರವಾ ಬರಗಾಲ ಪರಿಸ್ಥಿತಿ ಇದೆ ಎಂಬ ಮಾತನ್ನು ಹೇಳುತ್ತಾರೆ. ಹಾಗಿದ್ದಲ್ಲಿ 135 ತಾಲ್ಲೂ ಗಳಲ್ಲಿ ಈ ಪರಿಸ್ಥಿತಿ ಉಂಟಾದಮೇಲೆ ಅವರು ಎಷ್ಟು ಹಣ ಖರ್ಚು ಮಾಡಿದಾ ? ಅತ್ತೂ ನಾವು ಒಂದು ಹೇಳಿಕೆಯನ್ನು ಅವರಿಂದ ಪಡೆದಿದ್ದೇವೆ. ಒಂದು ಅಂಕಿಅಂಶವನ್ನು ಕೊಟ್ಟಿದ್ದಾರೆ. ಸುಮಾರು 36 ಕೋಟಿ ರೂಪಾಯಿಗಳನ್ನು ಬಿಡುಗ ಮಾಡಿದೇವೆ ಎಂಬ ಮಾತನ್ನು ಹೇಳಿದ್ದಾರೆ. ಈ 36 ಕೋಟಿ ರೂಪಾಯಿಗಳನ್ನು ಏನು ಬಿಡುಗಡೆ ಮಾಡಿದ್ದಾರೆ, ಅದನ್ನು ಯಾವ್ಯಾವ ಬಾಬಿನಲ್ಲಿ ಮಾಡಿದ್ದಾರೆ ಎಂದು ಹೇಳಿದ್ದಾರೆ. ಆದರೆ ಆ ಬಾಬತ್ತಿನಲ್ಲಿ ಎಷ್ಟು ಹಣ ಖರ್ಚುಮಾಡಿದ್ದಾರೆ ಎಂಬ ಲೆಕ್ಕವನ್ನು ಕೊಡಲಿಕ್ಕೆ ಅವರು ತಯಾರಿಲ್ಲ, ವಿತರ್ಕ್ಯೋಸ್ಕರ ಇಲ್ಲಿ ಮೂರ್ತಿಕೆ ಬರುತ್ತ ಎಂತಹಾ? ಅಥವಾ ಇಲ್ಲಿ ಟೀಕೆ ಬರುತ್ತದೆ ಎನ್ನುವ ಅಂಜಿಕೆಯಿಂದಾ? ಏನು ಕೋಪಗ ಪರಿಹಾರ ನಿಧಿಯಿಂದ 27 ಕೋಟಿ ರೂಪಾಯಿ ಹಣ ಬಿಡುಗಡೆ ದ್ದಾರೆ, ಈ ಹಣದಲ್ಲಿ ಕೇಂದ್ರ ಸರ್ಕಾರ ಈಗಾಗಲೇ ತನ್ನು ಪಾಲನ್ನು ಅಂದರೆ 75ರಷ್ಟು ಬಿಡುಗಡೆ ಮಾಡಿದೆ. ಅಂದರೆ 20 ಕೋಟಿಗಿಂತಲೂ ಹೆಚ್ಚು ಇವರು ಬಿಡುಗಡೆ ಮಾಡಿದ್ದರೆ, ರಾಜ್ಯ ಸರ್ಕಾರದ ವತಿಯಿಂದ ಈ ಪರಿ ಹಾರ ನಿಧಿಯಿಂದ ಎಷ್ಟು ಎಷ್ಟು ಬಿಡುಗಡೆ ಮಾಡಿದ್ದೀರಿ? ಕೇವಲ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ, ಹೌದಾ?

ಮಲ್ಲಿಕಾರ್ಜುನ ಖರ್ಗೆ ತಮಗೆ ಗೊತ್ತಿರುವ ಹಾಗೆ, ನ್ಯಾಚುರಲ್ ಕೆಲಾಮಿಟಿ ಫಂಡ್ ಬಗ್ಗೆ ನಾನು ಹೇಳುತ್ತಿದ್ದೇನೆ. ನಮಗೆ 27 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದು, ಅವರಲ್ಲಿ ಈಗಾಗಲೇ ನಾವು 21 ಕೋಟಿ 90 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಕೇಂದ್ರಸರ್ಕಾರದಿಂದ ಬಂದದ್ದು

15 ಕೋಟಿ ಮಾತ್ರ. 5 ಕೋಟಿಯನ್ನು ನಾಳೆ, ನಾಡದ್ದು ಕಳಿಸುತ್ತೇವೆ ಎಂದು ಟೆಲೆಕ್ಸ್ ಕಳಿಸಿದ್ದಾರೆ, ಇನ್ನೂ ಅದು ಬಂದಿಲ್ಲ, ಆದರೂ ಕೂಡ ಉಳಿದ ಮೂಲಗಳಿಂದ ತೆಗೆದುಕೊಂಡು ಅಂದರೆ ಮೈನರ್ ಇರಿಗೇಶನ್, ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಿಂದ, ಪಿ.ಎಚ್.ಡಿ. ಯಿಂದ, ಜವಾಹರ್ ರೋಜ್‌ಗಾರ್‌ನಿಂದ ತೆಗೆದುಕೊಂಡು ಹಣ ಖರ್ಚು ಮಾಡುತ್ತಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ: ಜವಹರ್ ರೋಜ್‌ಗಾರ್ ಯೋಜನೆ ಬಗ್ಗೆ ನಿನ್ನೆ ಪ್ರಸ್ತಾಪ ಮಾಡಿದ್ದೆ. ಇವತ್ತು ಈಗಾಗಲೇ ಹೈಕೋರ್ಟಿನವರು ಕೇಸ್ ಅಡ್ಮಿಟ್ ಮಾಡಿದ್ದಾರೆ. ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ : ಇವತ್ತಿನದಿವಸ ಕಂದಾಯ ಮಂತ್ರಿಗಳನ್ನು ನೇರವಾಗಿ ಕೇಳುವುದು, ಏನೆಂದರೆ ತಾವು ನೈಸರ್ಗಿಕ ವಿಕೋಪಗಳ ಪರಿಹಾರದ ನಿಧಿಯಿಂದ,ರಾಜ್ಯ ಸರ್ಕಾರದ ವಂತಿಕೆ ಶೇಕಡ 25ರಷ್ಟು ಹಣವನ್ನು ಬಿಡುಗಡೆ ಮಾಡಬೇಕಾಗಿತ್ತು, ಈ ಹಣವನ್ನು ತಾವು ಬಿಡುಗಡೆ ಮಾಡಿದ್ದೀರಾ? ಇಲ್ಲ, ತಮ್ಮ ಅಂಕಿಅಂಶಗಳ ಪ್ರಕಾರ ಏನು ಖರ್ಚು ಮಾಡಿದ್ದೀರಿ. ಕೇಂದ್ರ ಸರ್ಕಾರದಿಂದ ಬರಬೇಕಾದ 15 ಕೋಟಿ ಬಂದಿಲ್ಲ, ಅದು ಬರುತ್ತದೆ. ಅದರ ಜೊತೆಯಲ್ಲಿ ಶೇಕಡ 25ರಷ್ಟು ಅಂದರೆ, 6 ಕೋಟಿ 25 ಲಕ್ಷ ರೂಪಾಯಿಗಳನ್ನು ನೀವು ಬಿಡುಗಡೆ ಮಾಡಬೇಕಾಗಿತ್ತು. ಆ ಹಣವನ್ನು ಬಿಡುಗಡೆ ಮಾಡಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇವೆ. ಇನ್ನು ಅಭಿವೃದ್ಧಿ ಇಲಾಖೆಗೆ ಏನು ಹಣ ಕೊಟ್ಟಿದ್ದೀರಿ, ಎನ್,ಆರ್,ಡಬ್ಲ್ಯು.ಎಸ್,ಹೆಚ್ ಆಫ್ ಅಕೌಂಟ್ 2215, ಇದು ಯಾವುದು? ಕುಡಿಯುವ ನೀರಿಗೋಸ್ಕರ ರಾಜ್ಯ ಸರ್ಕಾರ ಮಾಡುವಂಥ ಒಂದು ಯೋಜನೆಯ ವೆಚ್ಚ ಏನಿದೆ, ಈ ವೆಚ್ಚದಲ್ಲಿ ಹಣವನ್ನು ಬಿಡುಗಡೆ ಮಾಡಿಲ್ಲ, ಬರಗಾಲ ಪರಿಸ್ಥಿತಿಯಲ್ಲಿ ನೀರಿನ ಪೂರೈಕೆಗೋಸ್ಕರ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತೀರಿ. ಈಗಾಗಲೇ ಸಾಮಾನ್ಯ ಅಥವಾ ವಾಡಿಕೆಯ ವಾರ್ಷಿಕ ಯೋಜನೆಯಲ್ಲಿ ಈ ಹಣ ಸೇರಿತ್ತೋ, ಆ ಹಣ ಖರ್ಚಾಗುತ್ತಿರಲಿಲ್ಲವೇ? ತಾವು ಚಿತ್ರದುರ್ಗ ಸಭೆಗೆ ಬಂದಾಗ ನಾನು ಈ ಮಾತನ್ನು ಹೇಳಿದ್ದೆ. ಪುನಃ ಈ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಎನ್.ಆರ್.ಡಬ್ಲ್ಯು.ಎಸ್.ನಲ್ಲಿ ಸುಮಾರು 3 ಕೋಟಿ 47 ಲಕ್ಷ ರೂಪಾಯಿಗಳನ್ನು ವಾಪಸ್ ತೆಗೆದುಕೊಂಡು, ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ್ದೀರಿ. ಇದು ಯಾವುದು ಸ್ವಾಮಿ? ಇದರಿಂದ ಎನ್.ಆರ್.ಡಬ್ಲ್ಯು.ಎಸ್. ಯೋಜನೆಗಳು ಕುಂಠಿತವಾಗುತ್ತಿವೆ. ಇವತ್ತಿನದಿವಸ ಈ ಯೋಜನೆಗಳನ್ನು ಪೂರ್ಣಮಾಡುವುದಕ್ಕೆ ಸಾಧ್ಯವಿಲ್ಲ, ಅದಕ್ಕೆ ಬದಲಾಗಿ, ಅದೇ ಹಣವನ್ನು ಯಾವ ಉದ್ದೇಶಕ್ಕೋಸ್ಕರ ಜಿಲ್ಲಾಧಿಕಾರಿಗಳು ಕೊಟ್ಟಿದ್ದೀರಿ?

ಜಿಲ್ಲಾಪರಿಷತ್ತಿನವರು ನಿಮ್ಮ ಮಾತು ಕೇಳುವುದಿಲ್ಲವೇ? ಈ ಸಂಶಯ ನಿಮ್ಮಲ್ಲಿದ್ದರೆ ಅಥವಾ ಅವರು ಕಾನೂನಿಗೆ ವಿರುದ್ಧವಾಗಿ ಕೆಲಸ ಮಾಡಿದ್ದರೆ ತಾವು ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಅದಕ್ಕೆ ಬದಲಾಗಿ, ರಾಜಕೀಯ ದುರುದ್ದೇಶದಿಂದ ಅವರಿಗೆ ಕೊಟ್ಟಂಥ ಹಣವನ್ನು ವಾಪಸ್ ತೆಗೆದುಕೊಂಡಿದ್ದೀರಿ. ಜಿಲ್ಲಾಧಿಕಾರಿಗಳಿಗೆ ಹಣವನ್ನು ಕೊಟ್ಟಿದ್ದೀರಿ. ಇದರ ಜೊತೆಯಲ್ಲಿ ಜವಹರ್ ರೋಜ್‌ಗಾರ್ ಯೋಜನೆಯಿಂದ ಸುಮಾರು 9 ಕೋಟಿ ಹಣವನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೀರಿ, ಈ ಹಣವನ್ನು ಯಾವರೀತಿಯಾಗಿ ಖರ್ಚುಮಾಡಬೇಕೆಂದು ಹೇಳಿದ್ದೀರಾ?..

ಉಪಾಧ್ಯಕ್ಷರು: ಮಾನ್ಯ ಸಚಿವರು ನಾಲ್ಕೂವರೆ ಗಂಟೆಗೆ ಉತ್ತರ ಕೊಡುತ್ತಾರೆ, ಇನ್ನೂ ನಾಲ್ಕು ಜನ ಮಾತನಾಡುವವರು ಇದ್ದಾರೆ.....

ಶ್ರೀ ಹೆಚ್. ಏಕಾಂತಯ್ಯ : 9 ಕೋಟಿ ಹಣವನ್ನು ಏನು ಬಿಡುಗಡೆ ಮಾಡಿದ್ದೀರಿ, ಈ ಹಣವನ್ನು ಅವರ ಇಷ್ಟ ಬಂದಹಾಗೆ, ಸ್ವೇಚ್ಛಾನುಸಾರ

ಖರ್ಚುಮಾಡುವುದಕ್ಕೆ ಸಾಧ್ಯವಿಲ್ಲ, ಇವತ್ತು ಯಾವ ಮಂಡಲ್ ಪಂಚಾಯಿತ್ಗಳು ತಮ್ಮ ಕ್ರಿಯಾಯೋಜನೆಯಲ್ಲಿ ಏನು ಕೆಲಸಗಳನ್ನು ಮಾಡ ಬೇಕಾಗಿತ್ತು, ಆ ಕೆಲಸಗಳಿಗೆ ಆ ಹಣವನ್ನು ಪೂರೈಸಬೇಕು. ಒಂದು ಪಕ್ಷ ಆ ಹಣವನ್ನು ಆ ಕೆಲಸಗಳಿಗೆ ಪೂರೈಸದೇ ಹೋದರೆ, they are not entitled for further release from the Central Government. ನೀವು ಅಧಿಕಾರದಲ್ಲಿದ್ದಾಗ ಏನು ಮಾಡಿದ್ದೀರಿ ಎಂದು ತಾವು ಕೇಳಬಹುದು. ಹಿಂದೆ ಬರ ಬಂದಾಗ, ಮಾನ್ಯ ದೇವರಾಜ ಅರಸು ಅವರ ಕಾಲದಿಂದ, ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದವರೆಗೆ ತಾವು ಏನು ಮಾಡಿದ್ದೀರಿ ಎಂದು ಕೇಳಬಹುದು. ಬರ ಬಂದಾಗ, ಯೋಜನೇತರ ವೆಚ್ಚವನ್ನು ಕಡಿಮೆಮಾಡುವುದು ಮಾತ್ರವಲ್ಲ ಅದರ ಜೊತೆಯಲ್ಲಿ ಯೋಜನಾ ಖರ್ಚು ಏನಿತ್ತು, 186ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರ ಇದ್ದಾಗ ಖರ್ಚು ಮಾಡಿದ್ದೇವೆ. ಈ ದಿವಸ ತೀವ್ರವಾಗಿ ಬರ ಇದೆಯೆಂದು ಹೇಳಿದರೆ, ಯೋಜನಾ ವೆಚ್ಚದಲ್ಲಿ ಕೇವಲ 2 ಕೋಟಿ ರೂಪಾಯಿಗಳನ್ನು ಮಾತ್ರ ತಾವು ಬಿಡುಗಡೆ ಮಾಡಿದ್ದೀರಿ. ಆದರೆ 36 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳುತ್ತೀರಿ ಅದರಲ್ಲಿ ಬೇರೆ ಇಲಾಖೆಗಳಿಂದ ಕೊಟ್ಟಂಥ ಹಣ ಕೇವಲ 2 ಕೋಟಿ ರೂಪಾಯಿಗಳು ಇದನ್ನು ನೀವು ಒಪ್ಪುತ್ತೀರಾ. ಇವತ್ತಿನದಿವಸ ಎನ್.ಆರ್.ಡಬ್ಲ್ಯು.ಎಸ್. ಮತ್ತು ಕೆಲಾಮಿಟಿ ರಿಲೀಫ್ ಫಂಡ್ ಏನಿದೆ ಅದರ ಹೆಸರಿನಲ್ಲಿ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಖಂಡಿತವಾಗಿಯೂ ಇದು ಹೆಚ್ಚಿಗೆ ಹಣ ಅಲ್ಲ. ಇವತ್ತಿನದಿವಸ ಅತ್ಯಂತ ಅವಶ್ಯಕವಾಗಿ ಮಾಡುವಂತಾದ್ದು ಎಂದರೆ, ಬೇರೆ ಬೇರೆ ಇಲಾಖೆಗಳು ಇವೆ, ಅಲ್ಲಿ ಅವಶ್ಯಕತೆ ಇಲ್ಲ, ಅಲ್ಲಿಯ ಕೆಲಸಗಳನ್ನು ನಿಲ್ಲಿಸಬೇಕು. ಆ ಹಣವನ್ನು ಇಲಾಖೆಗಳಿಂದ ತೆಗೆದುಕೊಂಡು ಈ ಕೆಲಸಕ್ಕೆ ಉಪಯೋಗಿಸಬೇಕು. ಈ ರೀತಿ ಮಾಡುವುದಕ್ಕೆ ಬದಲಾಗಿ, ಜವಹರ್ ರೋಜ್‌ಗಾರ್ ಯೋಜನೆ ಮತ್ತು ಬೇರೆ ಬೇರೆ ಅಭಿವೃದ್ಧಿ ಕೆಲಸಕಾರ್ಯಗಳಿಗೆ ಮೀಸಲಾದ ಹಣವನ್ನು ತೆಗೆದುಕೊಂಡು ಖರ್ಚುಮಾಡುವುದಕ್ಕೆ ತಾವು ಪ್ರಯತ್ನ ಮಾಡುತ್ತಿದ್ದೀರಿ. ಒಂದೇ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಚಿತ್ರದುರ್ಗ ಜಿಲ್ಲೆಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಕೊಟ್ಟಿರುವುದು ಕೇವಲ ಒಂದು ಲಕ್ಷ ರೂಪಾಯಿ. ಚಿತ್ರ ದುರ್ಗ ನಗರದಲ್ಲಿ ಯಾವ ಪರಿಸ್ಥಿತಿ ಇವೆ. ನಿಜ, ಬೆಂಗಳೂರಿನಲ್ಲಿ ಬಹಳ ಪ್ರಭಾವಶಾಲಿಗಳು ಇರಬಹುದು.

4.10 ಪಿ.ಎಂ

ಶ್ರೀ ಬಿ. ಬಸವಲಿಂಗಪ್ಪ: ಮಾನ್ಯ ಸದಸ್ಯರು ಒಂದು ಜಿಜ್ಞಾಸೆಯನ್ನು ವ್ಯಕ್ತಪಡಿಸಿದ್ದಾರೆ. ಜೆ.ಆರ್.ವೈ. ಫಂಡ್ಸ್ ಏನಿದೆ ಅದನ್ನು ಡೈವರ್ಟ್ ಮಾಡತಕ್ಕಂಥ, ಬೇರೆ ಕಡೆಗೆ ಖರ್ಚು ಮಾಡತಕ್ಕಂಥ ವ್ಯವಸ್ಥೆಯನ್ನು ಈ ಸರಕಾರ ಏನೂ ಮಾಡಿಲ್ಲ. ಬೇರೆ ಉದ್ದೇಶಗಳಿಗೆ ಇದನ್ನು ಖರ್ಚು ಮಾಡುವ ಉದ್ದೇಶವೂ ನಮಗೆ ಇಲ್ಲ. ಯಾವ ಒಂದು ಬಾಬಿಗೋಸ್ಕರ ಖರ್ಚು ಮಾಡಬೇಕೋ ಅದಕ್ಕೋಸ್ಕರವೇ ಖರ್ಚು ಮಾಡತಕ್ಕ ವ್ಯವಸ್ಥೆ ಸರಕಾರದ ಹುಕುಮ್‌ನಲ್ಲಿದೆ. ತಾವು ನೋಡಬಹುದು.

ಶ್ರೀ ಹೆಚ್. ಏಕಾಂತಯ್ಯ: ನಾನು ನೋಡಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ: ಅದನ್ನು ಯಾವ ಬಾಬಿಗೆ ಖರ್ಚು ಮಾಡಬೇಕೊ ಅದಕ್ಕೇ ಖರ್ಚು ಮಾಡಬೇಕು. ಎಂಪ್ಲಾಯ್‌ಮೆಂಟ್ ಜನರೇಷನ್ ಪ್ರೋಗ್ರಾಂ ಏನಿದೆ ಅದಕ್ಕೇ ಕೊಡಬೇಕು. ಅದನ್ನು ಯಾವ ಮಂಡಲದಲ್ಲಿ ಖರ್ಚು ಮಾಡಿಲ್ಲ, ಅದೇ ಮಂಡಲದಲ್ಲಿ ಮಾಡಬೇಕು. ಇಲ್ಲದೇ ಹೋದರೆ ಅದೇ ಡಿಸ್ಟ್ರಿಕ್ಟ್‌ನಲ್ಲಿ, ಡೆಪ್ಯುಟಿ ಕಮೀಷನ್‌ರ್‌ರವರ ವ್ಯಾಪ್ತಿಯಲ್ಲಿ ಬರತಕ್ಕಂಥ ಡಿಸ್ಟ್ರಿಕ್ಟ್‌ನಲ್ಲಿ ಎಲ್ಲಿ ಖರ್ಚು ಮಾಡಿಲ್ಲ, ಅದೇ ಹಣವನ್ನು ಅದೇ ಕೆಲಸಕ್ಕೋಸ್ಕರ ಖರ್ಚು ಮಾಡಬೇಕು, ಎಂ. ಎಲ್. ಎ. ಗಳು, ಎಂ.ಪಿ. ಗಳು, ಎಂ.ಎಲ್.ಸಿ. ಗಳು ಜನರ ಪ್ರತಿನಿಧಿಗಳು ಯಾರಿದ್ದಾರೆ

ಅವರನ್ನು ಕೇಳಿ ಮಾಡಬೇಕೆಂದು ನಾವು ಮಾಡಿದ್ದೇವೆ. ಬೇರೆ ಉದ್ದೇಶಕ್ಕೆ ಏನೂ ಖರ್ಚು ಮಾಡುತ್ತಿಲ್ಲ.

ಶ್ರೀ ಹೆಚ್. ಏಕಾಂತಯ್ಯ: ನೀವು ಬಂದರೆ ನಮಗೆ ಕಷ್ಟ. ಮಾನ್ಯ ಉಪಾಧ್ಯಕ್ಷರು ಟೈವರ್ ಕೊಟ್ಟರೆ ನನ್ನದೇನೂ ತಕರಾರಿಲ್ಲ ಹೇಳುತ್ತೇನೆ. ಆದರೆ ಒಂದು ಮಾತನ್ನು ತಾವು ಹೇಳಲಿಲ್ಲ. ಈ ಜೆ.ಆರ್.ವೈ ಫಂಡ್‌ನ್ನು ಯಾರು ಖರ್ಚು ಮಾಡಬೇಕೆಂದು ಇದೆ. ತಮಗೆ ಅಧಿಕಾರ ಇದೆಯೇ? ಜಿಲ್ಲಾ ಮಟ್ಟದಲ್ಲಿ ಅಥವಾ ರಾಜ್ಯ ಮಟ್ಟದಲ್ಲಿ ಜೆ.ಆರ್.ವೈ ಹಣವನ್ನು ಮಂಡಲ್ ಪಂಚಾಯತಿಗಳಿಗೆ ಬಿಡುಗಡೆ ಮಾಡಬೇಕಲ್ಲ, ಆ ಹಣವನ್ನು ಯಾರು ಖರ್ಚು ಮಾಡಬೇಕು. who is the implementing agency? ನೀವು ಡೆಪ್ಯೂಟಿ ಕಮಿಷನರಿಗೆ ಕೊಟ್ಟಿರತಕ್ಕಂಥ ಸರ್ಕ್ಯುಲರ್ ಇನ್‌ಸ್ಟ್ರಕ್ಷನ್ಸ್ ಇದೆ. ನೀವು ಕೊಟ್ಟಿರತಕ್ಕಂಥ ಜೆ.ಆರ್.ವೈ. ಮ್ಯಾನ್ಯುಯಲ್‌ನಲ್ಲಿ ಏನು ಇದೆ, ಅದೂ ಇದೆ, ಇವತ್ತಿನದಿವಸ ತಮಗೆ ಇಷ್ಟಬಂದಹಾಗೆ ಹಣವನ್ನು ಖರ್ಚು ಮಾಡುವ ಹಾಗೆ ಇಲ್ಲ. Who is the implementing agency? The implementing agency is the mandal Panchayath at the lowest level. ತಾವು ಜಿಲ್ಲಾಧಿಕಾರಿಗಳಿಗೆ ಕೊಟ್ಟು ನಾನು ಹೇಳುತ್ತೇನೆ ನೀವು ಖರ್ಚು ಮಾಡಿ ಎಂದರೆ ಅವರು ಖರ್ಚು ಮಾಡುವುದಕ್ಕೆ ಅವಕಾಶ ಇಲ್ಲ. ಇದನ್ನು ಒಪ್ಪುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ : ನಾನು ಇದನ್ನು ಒಪ್ಪುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ನೀವು ಒಪ್ಪುವುದಿಲ್ಲ ಎಂದು ನನಗೆ ಗೊತ್ತು. ಏತಕ್ಕೆಂದರೆ ನೀವು ಇದನ್ನು ಓದುವುದಿಲ್ಲ. ಒಪ್ಪಲಿಲ್ಲ ಎಂದರೆ ನಾನು ಏನು ಮಾಡುವುದಕ್ಕೆ ಆಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ : ಜೆ.ಆರ್.ವೈ. ಯೋಜನೆ ಬಗ್ಗೆ ಒಂದು ಪುಸ್ತಕ ಇದೆ. ಇದು ಬಹಳ ದೊಡ್ಡದು. ಈ ಪುಸ್ತಕದಲ್ಲಿ ಯಾವ ಮಂಡಲದಲ್ಲಿ ಖರ್ಚು ಮಾಡುವುದಿಲ್ಲ ಅದನ್ನು ಬೇರೆ ಮಂಡಲದಲ್ಲಿ ಖರ್ಚು ಮಾಡುವುದಕ್ಕೆ ಯಾರು ಆಸಕ್ತಿ ವಹಿಸಿದ್ದಾರೆ. ಅಂತಹವರಿಗೆ ಡೈವರ್ಟ್ ಮಾಡುವುದಕ್ಕೆ ಏನೂ ಆತಂಕ ಇಲ್ಲ ಎಂದು ಇದೆ. ಅದು ಯೋಜನೆ ಪ್ರಕಾರವೇ ಇದೆ. ನಾನು ಅದನ್ನು ತರಿಸಿ ಓದುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ: ಇಲ್ಲೇ ಇದೆ ಕೊಡುತ್ತೇನೆ, ಓದಿರಿ. ನಾನು ಓದಿದ್ದೇನೆ. ನನಗೆ ಅರ್ಥವಾಗಿರುವುದು ಇಷ್ಟು. ಮಾನ್ಯ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳಲ್ಲಿ ಇನ್ನೂ ಬೇರೆ ವಿಧವಾಗಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಜಿಲ್ಲಾ ಪರಿಷತ್ತಾಗಲೀ, ಮಂಡಲ ಪಂಚಾಯತಿಯಾಗಲೀ ನಿಗದಿ ಮಾಡಿದ ಕಾರ್ಯಕ್ರಮಗಳಿಗೆ ಕೊಟ್ಟ ಹಣವನ್ನು, ಮಂಡಲ ಪಂಚಾಯತಿಯವರು ಯಾವುದಕ್ಕೆ ನಿಗದಿ ಮಾಡಿದ್ದಾರೋ ಅದಕ್ಕೆ ಆ ಹಣವನ್ನು ಉಪಯೋಗಿಸಬೇಕು, ಆ ಹಣವನ್ನು ಉಪಯೋಗಿಸಿಕೊಳ್ಳುವ, ಇಂಪ್ಲಿಮೆಂಟಿಂಗ್ ಏಜೆನ್ಸಿ ಅಲ್ಲ. ಕೇಂದ್ರ ಸರಕಾರ ಈ ಬಗ್ಗೆ ರೂಪಿಸಿದ ಮಾರ್ಗದರ್ಶಿ ಸೂತ್ರಗಳು ಇವೆ. ಇದುವರೆಗೆ ಇದೇ ರೀತಿ ಇದೆ, ಈ ಮಾರ್ಗದರ್ಶಿ ಸೂತ್ರಗಳು ನಿನ್ನೆಯ ದಿವಸ ಬದಲಾಗಿದ್ದರೆ ಅದು ನನಗೆ ಗೊತ್ತಿಲ್ಲ, ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಈ ಕೈಪಿಡಿಯಲ್ಲಿರುವ ಮಾರ್ಗದರ್ಶಿ ಆಧಾರದ ಮೇಲೆ ಹೇಳುವುದಾದರೆ ಆ ಕೆಲಸವನ್ನು ಮಂಡಲ ಪಂಚಾಯತಿಯೇ ಮಾಡಬೇಕು

ಉಪಾಧ್ಯಕ್ಷರು: ಮಂತ್ರಿಗಳು ನಾಲ್ಕೂವರೇ ಗಂಟೆಗೆ ಉತ್ತರ ಶುರುಮಾಡಬೇಕು.

ಶ್ರೀ ಹೆಚ್. ಏಕಾಂತಯ್ಯ: ಇವತ್ತಿನ ದಿವಸ ಮುಖ್ಯವಾಗಿ ನಾನು ಹೇಳುವುದಾದರೆ, ಬರಗಾಲ ಬಂದಿದೆ ಎಂದರೆ, ಎಲ್ಲರೂ ಬರಗಾಲ ಬಂದಿದೆ ಎಂದು ಹೇಳುತ್ತಾರೆ

ಆದರೆ ನಮ್ಮ ಚಿತ್ರದುರ್ಗ ಜಿಲ್ಲೆ ಹಾಗೂ ಕೋಲಾರ ಜಿಲ್ಲೆಗಳು ಇಂತಹ ಪ್ರದೇಶಗಳಲ್ಲಿ ನಮಗೆ ಅಭ್ಯಾಸ ಆಗಿ ಹೋಗಿದೆ. ಅಲ್ಲಿ ಯಾವತ್ತೂ ಬರವೇ. We may not feel the intensity. ಇವತ್ತಿನ ದಿವಸ ಗುಲ್ಬರ್ಗಾ ಹಾಗೂ ಬೇರೆ ಬೇರೆ ಪ್ರದೇಶಗಳಲ್ಲಿ ಬರ ಇರಬಹುದು ಅಥವಾ ಅಭಾವ ಇರಬಹುದು. ಆದರೆ ತೀವ್ರತೆಯನ್ನು ಗಮನಕ್ಕೆ ತೆಗೆದುಕೊಂಡಾಗ ಆ ಜಿಲ್ಲೆಗಳಲ್ಲಿ ಹೆಚ್ಚು ತೀವ್ರತೆ ಇದೆ ಎಂಬುದನ್ನು ಸರಕಾರ ಅರಿಯಬೇಕು.

ಇವತ್ತಿನ ದಿವಸ ಕುಡಿಯುವ ನೀರಿಗೆ ಬಹಳ ಕಷ್ಟವಾಗಿದೆ. ತಾವು ಬಂದಿದ್ದೀರಿ,ಸಭೆ ಮಾಡಿದ್ದೀರಿ. ಸುಮಾರು ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರೇ ಇಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ತಾವು ಏನು ಮಾಡಿದ್ದೀರಿ? ಮಾನ್ಯ ಖರ್ಗೆಯವರು ಬಂದಾಗ ಪ್ರಸ್ತಾಪ ಮಾಡಿದೆ. ಇವತ್ತಿನ ದಿವಸ 200 ಕೊಳವೆ ಬಾವಿಗಳನ್ನು ತೆಗಯಲು ಆರ್ಡರ್ ಮಾಡುತ್ತೇನೆಂದು ಜಿಲ್ಲಾಧಿಕಾರಿಗಳ ಸಭೆಯಲ್ಲಿ ಹೇಳಿದರು. ಈಗಾಗಲೇ 5ನೇ ತಾರೀಖಾಯಿತು. ಏನಾಗಿದೆಯೋ ಗೊತ್ತಿಲ್ಲ. ಬಿಡುಗಡೆ ಮಾಡಿದ ಹಣ ಇನ್ನೂ ಚಿತ್ರ ದುರ್ಗವನ್ನು ತಲುಪಿಯೇ ಇಲ್ಲ, ಅದು ಸಚಿವಾಲಯದಲ್ಲಿ ಸುತ್ತುವರಿಯುತ್ತಿದೆಯೋ ಏನೋ ಗೊತ್ತಿಲ್ಲ. ಇನ್ನೂ ಹಣ ಬಿಡುಗಡೆ ಆಗಿಲ್ಲ. ಹೆಚ್ಚಾಗಿ ಪಟ್ಟಣ ಪ್ರದೇಶಗಳಲ್ಲೂ ಸಹ ಕುಡಿಯುವ ನೀರಿನ ಅಭಾವ ಉಂಟಾಗಿದ್ದು, ಅದಕ್ಕೆ ಏನು ಹಣವನ್ನು ಕೊಟ್ಟಿದ್ದೀರಿ ಅದು ಕಡಿಮೆ ಇದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಪುರಸಭೆಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪಟ್ಟಣಗಳಲ್ಲೂ ಕುಡಿಯುವ ನೀರಿನ ತೊಂದರೆ ಇದೆ ಚಿತ್ರದುರ್ಗ, ಚಳ್ಳಕೆರೆ ಮತ್ತು ದಾವಣಗೆರೆ ನಗರಗಳಲ್ಲೂ ಸಹ ಕುಡಿಯುವ ನೀರಿನ ಬಗ್ಗೆ ಗಂಭೀರ ಪರಿಸ್ಥಿತಿ ಇದೆ. ಇದಕ್ಕೆ ಬೇಕಾದ ಹಣವನ್ನು ಕೂಡಲೇ ತಾವು ಬಿಡುಗಡೇ ಮಾಡಬೇಕು.

ಕೇವಲ ಬಿಡುಗಡೆ ಮಾಡಿ ಹಣ ಇಲ್ಲೇ ಇದ್ದರೆ ಉಪಯೋಗ ಇಲ್ಲ. ಬಿಡುಗಡೆ ಮಾಡಿದಂತಹ ಹಣ ಅವರು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆನ್ನುವ ಮಾತನ್ನು ನಾನು ಹೇಳುತ್ತೇನೆ. ಇವತ್ತಿನ ದಿವಸ ಜವಹರ್ ರೋಜ್‌ಗಾರ್ ಯೋಜನೆಯಲ್ಲಿ ಹಣ ಬಿಡುಗಡೆ ಮಾಡಿದ್ದಾರೆ. ಎನ್. ಆರ್. ಡಬ್ಲ್ಯು. ಎಸ್. ನಲ್ಲಿ ಹಣ ಬಿಡುಗಡೆ ಮಾಡಿದ್ದಾರೆ. ಬಿಡುಗಡೆ ಮಾಡಿದಂತಹ ಹಣವನ್ನು ಖರ್ಚು ಮಾಡುವವರು ಯಾರು ಸ್ವಾಮಿ? ಇವತ್ತಿನ ದಿವಸ ಜಿಲ್ಲಾಧಿಕಾರಿಗಳ ಕೈ ಕೆಳಗೆ ಇರತಕ್ಕಂಥ ಅಧಿಕಾರಿಗಳು ಯಾರು? Who is the implementing agency? ಜಿಲ್ಲಾಧಿಕಾರಿಗಳು ಇಂಪ್ಲಿಮೆಂಟೇಶನ್ ಏಜನ್ಸಿ ಆಗುವುದಾದರೆ...

ಶ್ರೀ ಬಿ. ಬಸವಲಿಂಗಪ್ಪ: ತಾವು ಮಾತನಾಡುತ್ತಾ ಡೈವರ್‌ಶನ್ ಮಾಡಬೇಡಿ ಎಂದು ಹೇಳಿದಿರಲ್ಲ ಅದಕ್ಕೆ ನಾನು ಒಂದು ಮಾತು ಹೇಳುತ್ತೇನೆ. ಪೇಜ್ 3 ಜವಹರ್ ರೋಜ್‌ಗಾರ್ ಮ್ಯಾನ್ಯುಯಲ್‌ನಲ್ಲಿ ಈ ರೀತಿ ಇದೆ.

" Diversion of resources from one district to another will not be permissible. Similarly, diversion of resources from village panchayat to another village panchayat will also not be permissible. However, additional allocation can be considered for those districts which are performing better within the overall state allocations."

ಯಾರು ಹಣ ಖರ್ಚು ಮಾಡಿಲ್ಲವೋ ಅಲ್ಲಿಂದ ನಾವು ತೆಗೆದು ಬೇರೆಯವರಿಗೆ ಹಣ ಕೊಟ್ಟಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಬಸವಲಿಂಗಪ್ಪನವರು ಈ ರೀತಿ ವ್ಯಾಖ್ಯಾನ ಮಾಡುವುದಾದರೆ ನನ್ನದೇನೂ ತಕರಾರು ಇಲ್ಲ. ನೀವು ಅಲ್ಲಿಯವರೆಗೂ ಹೋಗುತ್ತೀರಿ

ಎಂದು ನಾನು ಅಂದುಕೊಂಡಿರಲಿಲ್ಲ. ನೀವು ಕೊಟ್ಟಂತಹ ಅಡಿಷನಲ್ ಹಣವೇ? ನಿಮ್ಮ ಹತ್ತಿರ ನಾನು ವಾದ ಮಾಡುವುದಕ್ಕೆ ತಯಾರು ಇಲ್ಲ. ಮಾನ್ಯ ಬಸವಲಿಂಗಪ್ಪನವರ ವಿಚಾರ ಬಂದಾಗ ನಾನು ಆಮೇಲೆ ಮಾತನಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ತಾವು ಮ್ಯಾನ್ಯುಯಲ್ ಓದಿ ಎಂದು ಹೇಳಿದ್ದಿರಿ. ಅವರು ಓದಿದರು. ಅದರಲ್ಲಿ ಜಿಲ್ಲಾ ಪರಿಷತ್ತು ಎಂದು ಇದೆ, ಕಲೆಕ್ಟರ್ ಎಂತಲೂ ಇದೆ. ಮತ್ತು ಅದರೆ ಏಜನ್ಸಿಯಿಂದಲೂ ಇಂಪ್ಲಿಮೆಂಟ್ ಮಾಡಬಹುದು. ನಮ್ಮಲ್ಲಿ ಜಿಲ್ಲಾ ಪರಿಷತ್ತು ಇದೆ. What about the other states where the zilla parishad machinery is not there? There the DRDS, collectors, zilla parishad or any other agency.....

ಶ್ರೀ ಹೆಚ್. ಏಕಾಂತಯ್ಯ : ಇವರಿಗೆ ಒಂದು ಕೆಟ್ಟ ಭಾವನೆ ಬಂದು ಬಿಟ್ಟಿದೆ. ಇವರು ಸ್ವತಃ ಓದುವುದೂ ಇಲ್ಲ, ಓದಿ ಅರ್ಥ ಮಾಡಿಕೊಳ್ಳುವ ಶಕ್ತಿಯಿದ್ದರೂ ಅದರ ಬಗ್ಗೆ ಉದಾಸೀನ ಇರುವುದೇ ಇದಕ್ಕೆ ಕಾರಣ. ನಾನು ಅದನ್ನು ಮತ್ತೆ ಹೇಳಬೇಕಾಗುತ್ತದೆ. ಇಂಪ್ಲಿಮೆಂಟ್ ಏಜನ್ಸೀಸ್ ಎನ್ನುವ ಬಗ್ಗೆ ಮ್ಯಾನ್ಯುಯಲ್ ಪುಟ 31.1ನ್ನು ತಾವು ಓದಿ. ತಾವು ಅರ್ಧಂಬರ್ಧ ಓದಿಬಿಡುತ್ತೀರಿ. ಪೂರ್ತಿ ಓದುವುದಕ್ಕೆ ತಯಾರು ಇಲ್ಲ. ನಾನು ಓದಿ ಹೇಳುತ್ತೇನೆ ಕೇಳಿ.

" Implementing agencies-31.1 The DRDS ZPs will have overall responsibility for supervision and monitoring of the implementation of the programmes."

ಕಲೆಕ್ಟರ್ ಎಂದು ಎಲ್ಲಿ ಇದೆ ಕಲೆಕ್ಟರಿಗೆ ಇಂಪ್ಲಿಮೆಂಟೆಷನ್‌ಗೆ ಇಲ್ಲ, ಮಾನಿಟರಿಂಗ್‌ಗೆ, ಸೂಪರ್‌ವಿಷನ್ ಇದೆ. ಆದ್ದರಿಂದ ವ್ಯತ್ಯಾಸ ನಮಗೂ ಸ್ವಲ್ಪ ಅರ್ಥವಾಗುತ್ತದೆ.

Sri. M. MALLIKARJUNA KHARGE : The DRDS controlled by the deputy commissionar or the collector.

ಶ್ರೀ ಹೆಚ್. ಏಕಾಂತಯ್ಯ : ಜಿಲ್ಲಾ ಪರಿಷತ್ತು ಎಂದು ಎಲ್ಲಿದೆ ಬರೀ ವಾದಕ್ಕೆ ವಾದ ಮಾಡುವುದಾದರೆ ನನ್ನದೇನು ತಕರಾರು ಇಲ್ಲ, ನಾನು ಕೊನೆಯದಾಗಿ ಒಂದೇ ಒಂದು ಪದ ಹೇಳಿ, ಮುಗಿಸುತ್ತೇನೆ.

"At the village level, the programme will be implemented through the village panchayat who will be responsible for planning and execution of the Yojana."

ಈ ಇಂಗ್ಲೀಷನ್ನು ಒಪ್ಪುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ : ಅದು ಎಕ್ಸೆಪ್‌ಷನ್.

ಶ್ರೀ ಹೆಚ್. ಏಕಾಂತಯ್ಯ : ನೀವೆ ನಮಗೆ ಎಕ್ಸೆಪ್‌ಷನ್, ಮಾನ್ಯ ಅಧ್ಯಕ್ಷರೇ, ಕೇವಲ ಇದನ್ನು ಒಂದು ಸಾಧಾರಣವಾದ ಪರಿಸ್ಥಿತಿಯಲ್ಲಿ ಇದೆ ಎಂದು ಭಾವನೆ ಮಾಡದೆ ವಿಶೇಷವಾದ ಪರಿಸ್ಥಿತಿ, ತೀವ್ರ ಬರಗಾಲ ಪರಿಸ್ಥಿತಿ ಇದೆ ಎನ್ನುವ ಒಂದು ಮಾತನ್ನು ಸರ್ಕಾರದವರು ಮೊದಲು ಒಪ್ಪಿಕೊಳ್ಳಬೇಕು. ಅದಕ್ಕೆ ಬೇಕಾದಂತಹ ಹಣ ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಹಾಗೆ ಮಾಡದೆ ಕೇವಲ ಕಣ್ಣೊರೆಸುವಂಥ ಕೆಲಸವನ್ನು ಏನು ಮಾಡುತ್ತಿದ್ದಾರೆ ಅದನ್ನು ಮೊದಲು ನಿಲ್ಲಿಸಬೇಕು. ಇದಕ್ಕೆ ಬೇಕಾದಂತಹ ಸಹಾಯ ಸಹಕಾರವನ್ನು ವಿರೋಧಪಕ್ಷದವರು ಕೊಡಲಿಕ್ಕೆ ತಯಾರು ಇದ್ದಾರೆ. ಆದರೆ ನಿಮ್ಮಲ್ಲಿ ಒಂದು ಸದ್ಭಾವನೆಯೇ ಇಲ್ಲ. ನಾವು ಏನಾದರೂ ಲೆಕ್ಕ ಕೇಳಿದರೆ, ಫೋನ್ ಮಾಡಿ ಎಷ್ಟು ಹಣ ಬಿಡುಗಡೆ ಮಾಡಿದಿರಿ ಎಂದು ಕೇಳಿದರೆ, ಲೆಕ್ಕ ಕೊಡುವುದಕ್ಕೆ ತಯಾರು ಇಲ್ಲ. ಎಷ್ಟು ಹಣ ಖರ್ಚು

ಮಾಡುತ್ತೀರಿ ಎಂದು ಕೇಳಿದರೆ ಅದಕ್ಕೆ ಉತ್ತರ ಹೇಳುವುದಕ್ಕೆ ನೀವು ತಯಾರು ಇಲ್ಲ, ಹಾಗದರೆ ಇಂತಹ ಒಂದು ಕತ್ತಲೆ ಕೋಣೆಯಲ್ಲಿ ಚರ್ಚೆ ಮಾಡುವುದಕ್ಕೆ ತಾವು ಏಕೆ ಇಷ್ಟಪಡುತ್ತೀರಿ?

ನಾನು ಹೇಳುವುದಿಷ್ಟೇ, ಇವತ್ತಿನ ದಿವಸ ಏನೊಂದು ಪರಿಸ್ಥಿತಿ ಇದೆ ಆ ಪರಿಸ್ಥಿತಿಯನ್ನು ಸರಿಯಾಗಿ ಅರ್ಥ ಮಾಡಿಕೊಂಡು ಪರಿಹಾರ ಕೆಲಸ ಮಾಡಲಿಕ್ಕೆ ಏನು ಅವಶ್ಯಕತೆ ಇದೆಯೋ ಅದನ್ನು ಮಾಡಲಿಕ್ಕೆ ತಾವು ಪ್ರಯತ್ನ ಮಾಡಬೇಕು. ಅವಶ್ಯಕವಾದರೆ ಒಂದು ಸದನದ ಸಮಿತಿಯನ್ನು ಮಾಡಬೇಕೆಂದು ನಾನು ಕೇಳುತ್ತೇನೆ. 1985-86ರಲ್ಲಿ ತಮ್ಮ ನೇತೃತ್ವದಲ್ಲೇ ನಾವು ಸಮಿತಿ ಮಾಡಿಕೊಂಡು ಹೋಗಿದ್ದೆವು. ಆಗ ಇಡೀ ರಾಜ್ಯದಲ್ಲಿ ತೀವ್ರತರವಾದಂಥ ಬರ ಪರಿಸ್ಥಿತಿ ಇತ್ತು. ಅಲ್ಲಿ ನಾವು ಹೋದಾಗ ಏನು ನಡೆಯುತ್ತಿತ್ತೆಂದು ತಮಗೆ ಗೊತ್ತಿದೆ. ಅನೇಕ ವಿಚಾರಗಳಲ್ಲಿ ಅಧಿಕಾರಿಗಳು ಕೊಡುವಂಥ ಮಾಹಿತಿ ಪೂರ್ಣವಾಗಿ ಸರಿಯಿರುವುದಿಲ್ಲ. ಅದ್ದರಿಂದ ಸರಿಯಾದಂಥ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಅವಶ್ಯಕವಾದಂಥ ಒಂದು ಸದನದ ಸಮಿತಿಯನ್ನು ತಾಪು ಮಾಡಬೇಕು. ಈ ಸಮಿತಿಯನ್ನು ಇಡೀ ರಾಜ್ಯದಲ್ಲಿ ಪ್ರವಾಸ ಮಾಡಿ ಒಂದು ವಾರದೊಳಗೆ ವರದಿ ಕೊಡಬೇಕು. ಆ ವರದಿ ಅಧಾರದ ಮೇಲೆ ತೀವ್ರವಾದ ಕ್ರಮ ಆರಂಭಿಸಬೇಕೆಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್: (ಹುಣಸೂರು) : ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ನಮ್ಮ ರಾಜ್ಯದಲ್ಲಿ ಈ ಬರಗಾಲದ ಬವಣೆ ವರ್ಷೇ ವರ್ಷೇ ಹೆಚ್ಚುತ್ತಿದೆ. ಇದಕ್ಕೆ ವೈಜ್ಞಾನಿಕವಾಗಿ ಮತ್ತು ಸಮಗ್ರವಾಗಿ ಪರ್ಯಾಲೋಚನೆ ಮಾಡಿದರೆ ಅನೇಕ ಅಂಶಗಳನ್ನು ಒಳಗೊಂಡಂಥ ಕಾರಣಗಳು ಇವೆ. ಇದುವರೆಗೆ ನಮ್ಮ ಸರ್ಕಾರ ಬರಗಾಲ ಪರಿಹಾರ ಕಾಮಗಾರಿಗಳಿಗಾಗಿ ಮತ್ತು ಕುಡಿಯುವ ನೀರಿನ ವ್ಯವಸ್ಥೆಗಾಗಿ 36ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಹತ್ತಾರು ಜಿಲ್ಲೆಗಳಲ್ಲಿ ಅನೇಕ ತಾಲ್ಲೂಕು ಮತ್ತು ಗ್ರಾಮಗಳಲ್ಲಿ ಮುಂಗಾರು ಮಳೆ ಸಾಕಷ್ಟು ಬಾರದೆ ಭೂಮಿಯಲ್ಲಿ ಬಿತ್ತಿದ ಬೀಜಗಳು ಮೊಳೆಯದೆ ಸಂಪೂರ್ಣವಾಗಿ ನಾಶವಾಗಿದೆ. ಇದರ ಬಗ್ಗೆ ಸಂಬಂಧಪಟ್ಟ ಕೃಷಿ ಅಧಿಕಾರಿಗಳು ಮತ್ತು ರೆವಿನ್ಯೂ ಅಧಿಕಾರಿಗಳು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ರೈತರಿಗೆ ಮುನ್ನೆಚ್ಚರಿಕೆ ಕ್ರಮಗಳಾಗಿ ಇನ್ನು ಮುಂದಾದರೂ ಹಿಂಗಾರು ಮಳೆ ಬರಬಹುದೆನ್ನುವ ನಿರೀಕ್ಷೆ ಇಟ್ಟು ಕೊಂಡು ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿತ್ತು. ಆಂದರೆ ದುರಾದೃಷ್ಟವಾಷತ್ ಆಗಲೂ ಸಹಾ ಮಳೆ ಬಾರದೆ ಅನೇಕ ಪ್ರದೇಶಗಳಲ್ಲಿ ತೀವ್ರ ಕ್ಷಾಮ ,ತಲೆದೋರಿದೆ. ಮತ್ತು ಸಂಪೂರ್ಣ ಬೆಳೆ ನಷ್ಟವಾಗಿದೆ. ನೂರಕ್ಕೆ ನೂರರಷ್ಟು ಬೆಳೆ ನಾಶವಾಗಿದೆ. ಇದರ ಬಗ್ಗೆ ಸಾಕಷ್ಟು ಮಾಹಿತಿಗಳು ಸಂಬಂಧಪಟ್ಟಂಥ ಇಲಾಖೆಗಳಿಂದ ಈಗಾಗಲೆ ಬಂದಿವೆ. ಇದು ಒಂದು ಕಡೆಯಾದರೆ, ರೈತ ಜನಕ್ಕ ಆಗಿರತಕ್ಕಂಥ ಬೆಳೆಯ ಸಂಪೂರ್ಣ ನಷ್ಟದ ಜೊತೆಗೆ, ಕೃಷಿ ಕಾರ್ಮಿಕರಿಗೆ ಉದ್ಯೋಗವಿಲ್ಲದೆ ಇನ್ನಿತರ ಕಡೆ ವಲಸೆ ಹೋಗುವಂಥ ಕ್ಲಿಷ್ಟ ಪರಿಸ್ಥಿತಿ ಬಂದಿದೆ. ಸುಮಾರು ನವೆಂಬರ್ ಮತ್ತು ಡಿಸಂಬರ್‌ವರೆಗೂ ಕೆಲವು ಕಡೆ ಹನಿ ಹನಿಯಾಗಿ ಮಳೆ ಆಯಿತು. ದೀಪಾವಳಿ ಸಮಯದಲ್ಲಿ ಮತ್ತು ನಂತರದ ತಿಂಗಳಲ್ಲಿ ಅಂದರೆ ಜನವರ, ಫೆಬ್ರವರಿ, ಮಾರ್ಚ್ ತಿಂಗಳಿನಲ್ಲಿ ಮಳೆಯ ಪ್ರಭಾವ ಇನ್ನೂ ಆಗಿಲ್ಲ.ಇನ್ನು ಮುಂದೆ ಮಾನ್ಸೂನ್ ಪ್ರಾರಂಭವಾಗಬೇಕಾದರೆ ಏಪ್ರಿಲ್, ಮೇ, ಜೂನ್, ತಿಂಗಳವರೆಗೆ ಕಾಯಬೇಕಾದ ಪರಿಸ್ಥಿತಿ ಇದೆ. ಅಭಾವ ಪೀಡಿತ ಪ್ರದೇಶಗಳೆಂದು ಘೋಷಿಸಿರುವುದನ್ನು ಕೇಳಿದ್ದೇವೆ. ಇತ್ತೀಚಿನ ಅಂಕಿ ಅಂಶಗಳನ್ನು ನೋಡಿದರೆ ಇನ್ನೂ ಗಾಬರಿಯಾಗುತ್ತದೆ. ಈಗ ತೀವ್ರತರವಾದ ಬರಗಾಲ ಪರಿಸ್ಥಿತಿಯನ್ನು ನಾವು

ಎದುರಿಸುತ್ತಿದ್ದೇವೆ. ಸುಮಾರು 15 ಜಿಲ್ಲೆಗಳಲ್ಲಿ 132 ತಾಲ್ಲೂಕುಗಳಲ್ಲಿರುವ 4,758 ಹಳ್ಳಿಗಳು ಅಭಾವ ಪರಿಸ್ಥಿತಿ ಎದುರಿಸುತ್ತಿವೆಯೆಂದು ನಮ್ಮ ಕಂದಾಯ ಮಂತ್ರಿಗಳು ಕೊಟ್ಟಿರುವ ಅಂಕಿ ಅಂಶದಲ್ಲಿ ನಮೂದಾಗಿದೆ. ಇದರ ಜೊತೆಗೆ ಕುಡಿಯುವ ನೀರಿನ ಸಮಸ್ಯೆ ಇದೆ.

ನೀರಾವರಿ ಪಂಪುಸೆಟ್ಟುಗಳ ಬಾವಿಗಳ ಅಂತರ್ಜಲ ತುಂಬಾ ಕೆಳಮಟ್ಟಕ್ಕೆ ಹೋಗಿದೆ. ಇದರಲ್ಲಿ ಎದುರಿಸಿತಕ್ಕ ಸಮಸ್ಯೆ ಒಂದಾದರೆ ಕುಡಿಯುವ ನೀರಿನ ಸಮಸ್ಯೆ ಇನ್ನೊಂದು. ಹಿಂದೆ ಎಲ್ಲಾ ಹೇಗೆ ಮಾಡುತ್ತಿದ್ದರು? ಹಳ್ಳಿಗಳಲ್ಲಿ ಗೋ-ಕಟ್ಟೆಗಳು, ದೊಡ್ಡ ದೊಡ್ಡ ಕೆರೆಗಳು, ಚಿಕ್ಕ ಕೆರೆಗಳು ಹೀಗೆ ಅನೇಕ ಕೆರೆಕಟ್ಟೆಗಳನ್ನು ನಮ್ಮ ಹಿರಿಯರು ಮಾಡಿದ್ದರು. ನಾನಾದರೂ ತಿಳಿದುಕೊಂಡಿದ್ದೇನೆ.ಈ ಕೆಲವೊಂದು ವರ್ಷಗಳಲ್ಲಿ ಹೆಚ್ಚಿನ ಕೆರೆಟ್ಟೆಗಳನ್ನು ನಾವ್ಯಾರು ಮಾಡಿಲ್ಲ. ಯಾವುದೇ ಸರ್ಕಾರ ಇದಕ್ಕೆ ಯಾವುದೇ ಒಂದು ಯೋಚನೆಯನ್ನು ಹಾಕಿಕೊಂಡಿಲ್ಲ. ಇರತಕ್ಕ ಕೆರೆಕಟ್ಟೆಗಳಲ್ಲಿ ಹೂಳು ತುಂಬಿಕೊಂಡಿವೆ. ಎರಿಗಳೆಲ್ಲಾ ಮುಚ್ಚಿ ಹೋಗಿವೆ. ಇನ್ನು ಕೆಲವು ಕಡೆ ಅವನ್ನು ಉಳುಮೆ ಮಾಡುತ್ತೇವೆಂದು ಕೆಲವು ರೈತರು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆ. ಹೀಗಾಗಿ ಯಾವ ಮಳೆಯ ನೀರು ಬಂದಾಗಲೂ ಸಹ ಅದನ್ನು ಸಂಗ್ರಹಣೆ ಮಾಡಿ ಇಡತಕ್ಕ ಒಂದು ವ್ಯವಸ್ಥೆ ಆಗಿಲ್ಲ. ಮಳೆ ಸದಾ ಬೀಳುವುದಿಲ್ಲ. ಅದರಲ್ಲಿಯೂ ಸಹ ನಮ್ಮ ರಾಜ್ಯದಲ್ಲಿ ಮಲೆನಾಡು ಪ್ರದೇಶದಿಂದ ಬಂದಿರತಕ್ಕವರು ಹಲವರು ಇದ್ದೇವೆ. ನಾವು ಕೂಡ ಅರ್ಧ ಮಲೆನಾಡು ಪ್ರದೇಶಕ್ಕೆ ಸೇರಿದವರಾಗಿದ್ದೇವೆ. • ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ಸಂಪೂರ್ಣವಾಗಿ ಮಲೆನಾಡು ಪ್ರದೇಶದಿಂದ ಬಂದಂಥವರು ನಾವು ಭೂಗೋಳದಲ್ಲಿ ಮತ್ತು ಹಿಂದಿನ ಚರಿತ್ರೆಯಲ್ಲಿ ಓದುತ್ತಿದ್ದೇವು. ರಾಷ್ಟ್ರದಲ್ಲಿ ಚಿರಾಪುಂಜಿ ಬಿಟ್ಟರೆ ಹೆಚ್ಚಿನ ಮಳೆ ಅಂಶವನ್ನು ಹೊಂದಿರತಕ್ಕ, ಅತ್ಯಂತ ಹೆಚ್ಚಿನ ಮಳೆಯನ್ನು ಪಡೆಯತಕ್ಕ ಪ್ರದೇಶ ಆಗುಂಬೆ ಎನ್ನುವುದನ್ನು ನಾವೆಲ್ಲಾ ತಿಳಿದುಕೊಂಡಿದ್ದೇವೆ. ಆದರೆ ಇತ್ತೀಚಿನ ದಿನಗಳಲ್ಲಿ ವರ್ಷಗಳಲ್ಲಿ ಏನು ಆಗುತ್ತಿದೆ ಎನ್ನುವುದನ್ನು ನಾನು ನೋಡುತ್ತಿದ್ದೇನೆ. ಇದಕ್ಕೆ ಅನೇಕ ಕಾರಣಗಳು ಇರಬಹುದು. ಈಗಾಗಲೇ ನಾನು ತಮ್ಮ ಮುಂದೆ ಹೇಳಿದಹಾಗೆ, ಮಲೆನಾಡು ಪ್ರದೇಶವೆಂದು ಕರೆಸಿ ಕೊಳ್ಳುವುದಕ್ಕೆ ಬಹಳ ಮುಖ್ಯವಾದ ಲಕ್ಷಣ ಇತ್ತು. ಅದೆಲ್ಲಾ ತೀರಾ ಕಡಿಮೆ ಆಗಿದೆ. ಒಳ್ಳೆಯ ಹಸಿರು ವರ್ಣದ ದಟ್ಟವಾದ ಕಾಡುಗಳು, ನದಿಗಳು, ಉಪ ನದಿಗಳು, ಜಲಾಶಯಗಳು, ಸರೋವರಗಳು, ಕೆರೆಕಟ್ಟೆಗಳು ಮತ್ತು ನಮ್ಮ ಹಿರಿಯರು ಮಾಡಿದಂತಹ ಓಪನ್ ವೆಲ್ಸ್ ಅಂದರೆ ಅಗಲವಾದ ಬಾವಿಗಳು ಇದ್ದುವು. ಆಗೆಲ್ಲಾ ಇಷ್ಟು ಪಂಪುಸೆಟ್ಟುಗಳು ಮತ್ತು ವಿದ್ಯುದ್ದೀಕರಣ ಇರಲಿಲ್ಲ. ಇವತ್ತು ಏನು ಆಗಿದೆ? ನಾವೆಲ್ಲರೂ ಬರಗಾಲದ ವಿಷಯವಾಗಿ ಮಾತನಾಡುತ್ತಿದ್ದೇವೆ. ಅದರಲ್ಲಿಯೂ ನಮ್ಮ ಹಿರಿಯ ನಾಯಕರು, ಅನೇಕ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಕೂಲಂಕಷವಾಗಿ. ಸವಿವರವಾಗಿ ಹೇಳಿದ್ದಾರೆ. ಆದರೆ ಇದರ ಬಗ್ಗೆ ವೈಜ್ಞಾನಿಕವಾಗಿ, ಬಹಳ ಗಹನವಾಗಿ, ಗಂಭೀರವಾಗಿ ಮತ್ತು ವಿವಚೇನಾಪೂರ್ಣವಾಗಿ ನಾವು ಯಾರಾದರೂ ಇದರ ಬಗ್ಗೆ ಒತ್ತು ಕೊಟ್ಟಿದ್ದೇವೆಯೇ ಎಂದು ನಮ್ಮನ್ನೇ ನಾವು ಪ್ರಶ್ನೆ ಮಾಡಿಕೊಳ್ಳಬೇಕಾಗಿದೆ.ಅದು ಹಿಂದಿನ ಸರ್ಕಾರ ಇರಬಹುದು. ಇವತ್ತಿನ ನಮ್ಮ ಸರ್ಕಾರ ಇರಬಹುದು ಅಥವಾ ಮುಂದೆ ಬರತಕ್ಕ ಯಾವುದೇ ಸರ್ಕಾರ ಇರಬಹುದು.

ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ. ಯಾವಾಗ ಕೆರೆಗಟ್ಟೆಗಳು ಬತ್ತಿ ಹೋಯಿತು. ಅದನ್ನು ಡೀಸಿಲ್ಟಿಂಗ್ ಅಂದರೆ ಹೂಳು ಎತ್ತಿ ಅದಕ್ಕೆ ಪೂರಕವಾದಂತಹ ದುರಸ್ತಿ ಕೆಲಸವನ್ನು ಹಿಂದಿನ ರೈತರು ಮಾಡುತ್ತಿದ್ದರು. ನಾವು ನೋಡಿದ ಹಾಗೆ, ವಾರದಲ್ಲಿ ಒಂದು ದಿವಸ ಉಳುಮೆಗೆ ಅಥವಾ ಹೊಲ ಮನೆ ಕೆಲಸಗಳಿಗೆ ಬಿಡುವು ಕೊಟ್ಟು ತಮ್ಮ ತಮ್ಮ ಗ್ರಾಮಗಳಲ್ಲಿರತಕ್ಕ ಕೆರೆಗಳಲ್ಲಿ ಹಾಗೂ ಸುತ್ತಮುತ್ತಲ ಗ್ರಾಮಸ್ಥರೆಲ್ಲ

ಸೇರಿ ಅದರಲ್ಲಿ ಹೂಳು ತೆಗೆಯತಕ್ಕ, ದುರಸ್ತಿ ಮಾಡತಕ್ಕ ಕೆಲಸವನ್ನು ಮಾಡುತ್ತಿದ್ದರು. ಬೇಸಿಗೆ ದಿನಗಳಲ್ಲಿ ಆ ಹೂಳನ್ನು ಒಳ್ಳೆಯ ಗೊಬ್ಬರ ವಾಗಿ ತಮ್ಮ ಹೊಲಗಳಿಗೆ ತೆಗೆದುಕೊಂಡು ಲೋಗುತ್ತಿದ್ದರು. ಅದನ್ನು ಗೋಡು ಮಣ್ಣು ಎಂದು ಹೇಳುತ್ತಾರೆ. ಗೋಡು ಮಣ್ಣನ್ನು ಎತ್ತಿದಾಗ ಅದು ಆಳ ಆಗುತ್ತಿತ್ತು. ನಂತರ ಮಳೆಗಾಲ ಬಂದಾಗ ನೀರು ತುಂಬಿಕೊಳ್ಳುತ್ತಿತ್ತು. ಈಗ ಸಂಪೂರ್ಣವಾಗಿ ಈ ವ್ಯವಸ್ಥೆಗಳೆಲ್ಲ ಹೋಗಿದೆ. ಯೂರಿಯೂ ಕಾಪರ್ ಸಲ್ಫೈಡ್ ಮುಂತಾದ ಅಧುನಿಕವಾದ, ವೈಜ್ಞಾನಿಕವಾದ ರೀತಿಯಲ್ಲಿ ಕಂಡು ಹಿಡಿದಿರತಕ್ಕ ಈ ಕೆಮಿಕಲ್ ಮೆನ್ಯೂರ್ ಏನು ಇದೆ. ಅದು ಬಂದ ಮೇಲೆ ಇವೆಲ್ಲಾ ಹೊರಟು ಹೋಗಿದೆ. ಕಾಂಪೋಸ್ಟ್ ಗೊಬ್ಬರ ಎಂದು ಹೇಳುತ್ತೇವೆ. ಹಸಿರು ಎಲೆಯ ಸೊಪ್ಪು, ದನಗಳ ಸಗಣಿ ಮುಂತಾದವನ್ನು ಗುಂಡಿಗಳಲ್ಲಿ ಹಾಕಿ ಸಂಗ್ರಹ ಮಾಡಿ ಮಳೆಗಾಲ ಬಂದಾಗ ಅದನ್ನು ಉಪಯೋಗಿಸುತ್ತಾ ಇದ್ದರು. ಆದರೆ ಇವತ್ತು ಏನು ಆಗಿದೆಯೆಂದರೆ ಅದೂ ಕೂಡ ನಡೆಯುತ್ತಿಲ್ಲ. ಕೆರೆಕಟ್ಟೆಗಳೆಲ್ಲಾ ಹೂಳು ತುಂಬಿ ತಟ್ಟೆಗಳಾಗಿವೆ. ಅದನ್ನು ಕೆಲವು ಕಡೆ ಉತ್ತು ಹಾಕಿದ್ದಾರೆ. ಹೀಗಾದರೆ ಮಳೆ ನೀರು ಎಲ್ಲಿ ಸಂಗ್ರಹ ಆಗಬೇಕು. ಮಳೆ ಬರತಕ್ಕ ಒಂದು ಅಂಶವೇ ಕಡಿಮೆ ಆಗುತ್ತಿರುವಾಗ ಮಳೆ ಪ್ರಮಾಣ ನಮ್ಮಲ್ಲಿ ಇಳಿದಿರುವಾಗ, ಸಂಗ್ರಹ ಕೂಡ ಕಡಿಮೆ ಆಗುತ್ತಿದ್ದರೆ. ಎಲ್ಲಿಂದ ನೀರು ಬರಬೇಕು. ಅಂತರ್ಜಲಕ್ಕೆ ಜನ ಎಲ್ಲಿಂದ ಬರಬೇಕು? ಮೇಲಿಂದ ಮಳೆಯಾದರೆ ಭೂಮಿಯ ಮೇಲೆ ಬಿದ್ದಾಗ್ಗ ಆ ನೀರು ಸರ್‌ಕ್ಯುಲೇಟ್ ಆಗಿ ನೀರು ಸಂಗ್ರಹ ಆಗಬೇಕು. ಅಂತರ್ಜಲ ಸಂಗ್ರಹ ಆಗಬೇಕು. ಇವತ್ತು ಅದೂ ಆಗುತ್ತಿಲ್ಲ. ಬೋರ್‌ವೆಲ್‌ಗಳ ಮೂಲಕ ಕುಡಿಯುವ ನೀರನ್ನು ಕೊಡುವ ಪ್ರಯತ್ನ ಮಾಡಲಾಗಿದೆ. ಓಪನ್‌ವೆಲ್ ನಲ್ಲಿ ಕೆರೆಕಟ್ಟೆಗಳಲ್ಲಿ ನೀರು ಇಲ್ಲ ಎಂದು ಬೋರ್‌ವೆಲ್ ಮೂಲಕ ನೀರನ್ನು ಕೊಡಲು ಪ್ರಯತ್ನ ನಡೆಸಿದ್ದರು. ಆದರಲ್ಲೂ ನಮ್ಮ ಹಿಂದಿನ ಸರ್ಕಾರದಲ್ಲಿ ಸಚಿವರಾಗ್ತಿದ್ದಂಥ ಶ್ರೀಮಾನ್ ನಜೀರ್ ಸಾಬ್‌ರವರು ಹೆಸರನ್ನು ಪ್ರಸ್ತಾಪ ಮಾಡಿದರೆ ತಪ್ಪಾಗಲಾರದು. ಅವರನ್ನು ನೀರಿನಿಂದ ಎಂದು ಕರೆಯುತ್ತಿದ್ದರು. ಅವರಿಗೆ ನೀರ್ ಸಾಬ್ ಎಂಬ ಹೆಸರು ಬಂದಿತ್ತು. ಅವರು ಅನೇಕ ಬೋರ್‌ವೆಲ್‌ಗಳನ್ನು ರಾಜ್ಯಾದ್ಯಂತ ತೋಡಿಸಿದರು. ಕೆಲವ ಕಡೆ ನಾವು ವಿವೇಚನಾ ರಹಿತವಾಗಿ ಸುಮ್ಮನೇ ಬೋರ್ ವೆಲ್ಲನ್ನು ಹಾಕಿದ್ದೇವೆ. ಇದರಿಂದ ದೊಡ್ಡ ದೊಡ್ಡ ಕೆರೆಕಟ್ಟೆಗಳಲ್ಲಿ, ಓಪನ್ ವೆಲ್‌ಗಳಲ್ಲಿದ್ದಂಥ ನೀರು ಕೂಡ ಇವತ್ತಿನ ದಿವಸ ಹೋಯಿತು.

ದೊಡ್ಡ ದೊಡ್ಡ ಬಾವಿಗಳಲ್ಲಿ ಇದ್ದಂಥ ನೀರು ಕೂಡ ಇವೊತ್ತು ಬತ್ತಿ ಹೋಗುತ್ತಾ ಇದೆ. ತೋಡಿರತಕ್ಕಂಥ ಭಾವಿಗಳು". ಕೂಡ ಸುಮಾರು 3-6 ತಿಂಗಳಿಂದ ನಾವೆಲ್ಲರೂ ನೋಡುತ್ತಾ ಇದ್ದೇವೆ. ಕೆಲವು ಕಡೆಗಳಲ್ಲಿ ಅವು ಸಂಪೂರ್ಣವಾಗಿ ಕೆಟ್ಟು ನಿಂತು ಹೋಗಿವೆ. ದುರಸ್ತಿ ಕಾರ್ಯ ನಡೆಯ ಬೇಕಾದಂಥ ಕೆಲವು ಬಾವಿಗಳಿಗೆ ದುರಸ್ತಿ ಕಾರ್ಯ ಮಾಡುವುದಕ್ಕೆ ಆಗಿರತಕ್ಕಂಥ ಒಂದು ಪರಿಸ್ಥಿತಿಯಲ್ಲಿ ನಾವಿದ್ದೇವೆ. ಊರುಗಳ ಸುತ್ತಮುತ್ತ ಇದ್ದಂಥ ಕೆರೆಕಟ್ಟೆಗಳಲ್ಲಿ ಕೂಡ ನೀರು ಬತ್ತಿ ಹೋಗಿ ಜನರಿಗಷ್ಟೇ ಅಲ್ಲ, ಜಾನುವಾರುಗಳಿಗೂ ಸಹ ಕುಡಿಯುವ ನೀರು ಇಲ್ಲದೆ ತುಂಬಾ ತೊಂದರೆಗೀಡಾಗಿದ್ದಾರೆ. ಮಾನ್ಯ ಸದಸ್ಯರೊಬ್ಬರು ನಿನ್ನೆ ಹೇಳಿದ ಹಾಗೆ, ಹಕ್ಕಿಗಳಿಗೆ ಕೂಡ ಕುಡಿಯುವುದಕ್ಕೆ ನೀರಿಲ್ಲದೆ ಇರತಕ್ಕಂಥ ಒಂದು ಕಠಿಣ ಪರಿಸ್ಥಿತಿ ಇವೊತ್ತು ಬಂದೊದಗಿದೆ. ಅದು ಸತ್ಯವಾದ ಮಾತಾಗಿದೆ ಎಂದು ಹೇಳಬಯಸುತ್ತೇನೆ. ಇವೊತ್ತು ಬಾವಿಗಳಲ್ಲಿನ ನೀರಿನ ಆಳದ ಮಟ್ಟವು 300-400 ಅಡಿಗಳಷ್ಟಕ್ಕೆ ಇಳಿದು ಹೋಗಿದೆ. ಈ ಬಗ್ಗೆ ಸರಕಾರದವರಲ್ಲಿ ಒಂದು ಸಲಹೆಯನ್ನು ನಾನು ಕೊಡಬಯಸುತ್ತೇನೆ. ಯಾವ ಯಾವ ಹಳ್ಳಿಗಳಲ್ಲಿ ಎಷ್ಟೆಷ್ಟು ಬಾವಿಗಳು ಇವೆ. ಕೆರೆಕಟ್ಟೆಗಳು ಇವೆ. ಬೋರ್ ವೆಲ್‌ಗಳು ಎಷ್ಟಿದ್ದೇವೆ. ಎಂಬ ಅಂಕಿ ಅಂಶಗಳನ್ನನು ಮೊದಲು ಸಂಗ್ರಹಿಸಬೇಕು. ಈ ಕುರಿತು ಅಂಕಿಅಂಶಗಳು ಈಗಾಗಲೇ ಇರಬಹುದು. ಆದರೂ

ಒಂದು ನಿಖರವಾದ ಮಾಹಿತಿಯನ್ನು ಪಡೆದುಕೊಂಡು ಆ ಬಗ್ಗೆ ಸೂಕ್ತ ಮತ್ತು ತೀವ್ರವಾದಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇಂಥ ಎಲ್ಲಾ ಕೆಲಸಗಳನ್ನು ಸರಕಾರದವರೇ ಮಾಡಬೇಕೆಂದು ನಾನು ಹೇಳುವುದಿಲ್ಲ. ಅದು ಸಾಧ್ಯವೂ ಆಗಲಾರದು. ಇತ್ತೀಚೆಗೆ ನಮ್ಮ ರೈತಾಪಿ ವರ್ಗದವರೂ ಕೂಡ ಈ ಕೆಲಸವನ್ನು ಮಾಡುವುದನ್ನು ಬಿಟ್ಟಿದ್ದಾರೆ. ತಮ್ಮ ಪ್ರದೇಶದ ಕೆರೆಗಳಲ್ಲಿನ ಹೂಳೆತ್ತುವ ಕೆಲಸವನ್ನು ಕೂಡ ಕೆಲವು ಕಡೆಗಳಲ್ಲಿ ಮಾಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಕೂಡ ಹಿಂದೆ ಕೃಷಿ ಸಚಿವರಾಗಿದ್ದಾಗ ಬಹಳಷ್ಟು ಉತ್ತಮ ಕೆಲಸಗಳನ್ನು ಈ ಕುರಿತು ಮಾಡುವ ಬಗ್ಗೆ ಯೋಜಿಸಿದ್ದರು. ಇಂಥ ಹೂಳೆತ್ತುವ ಕೆಲಸ ಮುಂತಾದವುಗಳನ್ನು ಬೇಸಿಗೆ ಕಾಲದಲ್ಲಿ ಮಳೆ ಬರುವುದಕ್ಕೆ ಮುನ್ನ ಪ್ರಾರಂಭ ಮಾಡಬೇಕು. ಮಳೆ ಬರುವುದರೊಳಗೆ ಇವನ್ನು ತೆಗೆದುಕೊಂಡು ಮಾಡಿಮುಗಿಸಬೇಕು. ಈಗಾಗಲೇ ತಡವಾಗಿದೆ. ಜನವರಿ, ಫೆಬ್ರವರಿ, ಮಾರ್ಚ್ ತಿಂಗಳಲ್ಲಿಯೂ ಕೂಡ ನಾವು ಈ ಕೆಲಸಕಾರ್ಯಗಳನ್ನು ತೆಗೆದುಕೊಂಡಿಲ್ಲ. ಈ ಎಲ್ಲಾ ವಿಚಾರಗಳ ಬಗ್ಗೆ ಒಂದು ಸಮಗ್ರ ಸಮೀಕ್ಷೆ ಮಾಡಿ, ನಾವು ಈ ಕಾರ್ಯವನ್ನು ಸಮರೋಪಾದಿಯಲ್ಲಿ ಕೈಗೆತ್ತಿಕೊಳ್ಳಬೇಕಾಗಿದೆ. ಹಾಗೆ ಮಾಡಿದರೆ ಮಾತ್ರ ಇದು ಸಾಧ್ಯವಾಗುತ್ತದೆ. ಇನ್ನು ಕೆಲವು ಸಮಸ್ಯಾತ್ಮಕವಾದಂಥ ಹಳ್ಳಿಗಳಲ್ಲಿ ನಾಲ್ಕಾರು ಬೋರ್‌ವೆಲ್‌ಗಳನ್ನು ಹಾಕಿದ್ದರೂ ಕೂಡ ಅಲ್ಲಿ ನೀರು ಸರಬರಾಜು ಸರಿಯಾಗಿ ಆಗುತ್ತಿಲ್ಲ. ಹಳ್ಳ ಕೆರೆ ಕಟ್ಟೆಗಳು ಇರದಂಥ ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ತೋಡಬೇಕು. 2-13 ಸಣ್ಣ ಸಣ್ಣ ಹಳ್ಳಿಗಳನ್ನು ತೆಗೆದುಕೊಂಡು ಮಿನಿವಾಟರ್ ಸಪ್ಲೈ ಸ್ಕೀಮ್‌ನ್ನು ಮಾಡಬೇಕು. ಇದಕ್ಕೆ ಸಾಕಷ್ಟು ಹಣದ ಅವಶ್ಯಕತೆಯೂ ಬರುತ್ತದೆ. ಅದಕ್ಕಾಗಿ ಮಾನ್ಯ ಕಂದಾಯ ಸಚಿವರು ಹಾಗೂ ಗ್ರಾಮೀಣ ಅಭಿವೃದ್ಧಿ ಸಚಿವರು ಇಬ್ಬರೂ ತಮ್ಮ ಇಲಾಖೆಯಿಂದ ಬರತಕ್ಕಂಥ ಯೋಜನೆ ಮತ್ತು ಯೋಜನೇತರ ಹಣವನ್ನು ಒಟ್ಟುಗೂಡಿಸಿ ಸ್ವಲ್ಪಮಟ್ಟಿಗಾದರೂ ಈ ಕೆಲಸವನ್ನು ಮಾಡಿಸಬಹುದು. ಮತ್ತು ಆಗತಕ್ಕಂಥ ಅಪವ್ಯಯವನ್ನು ಕಡಿಮೆ ಮಾಡಿ ಇಂಥ ಯೋಜನೆಗಳಿಗೆ ಆದ್ಯತೆಯನ್ನು ಕೊಡಬೇಕು. ಅಂತೆಯೇ ಒಂದು ಊರಿಗೆ ಒಂದು ಬೋರ್‌ವೆಲ್ ಅನ್ನು ಕೇಳುತ್ತಾರೆ ಎಂದು ಇಟ್ಟುಕೊಳ್ಳಿ. ಇದನ್ನು ಎಲ್ಲಾ ಕಡೆಗಳಿಗೂ ಒದಗಿಸಿಕೊಡುವುದಕ್ಕೆ ಸಾಧ್ಯವಾಗದಿರಬಹುದು. ಅದಕ್ಕಾಗಿ ಮಿನಿವಾಟರ್ ಸಪ್ಲೈಸ್ಕೀಮ್‌ನ್ನು ತೆಗೆದುಕೊಂಡರೆ ಸಮಸ್ಯಾತ್ಮವಾದಂಥ ಕೆಲವಾರು ಹಳ್ಳಿಗಳಿಗೆ ನೀರು ಒದಗಿಸಬಹುದು. ಇದರಿಂದ ಒಂದೊಂದು ಕಡೆ ನಾಲ್ಕಾರು ಬೋರ್‌ವೆಲ್‌ಗಳನ್ನು ಹಾಕುವ ಬದಲು ಒಂದು ಕಡೆ ಒಂದು ಬೋರ್‌ವೆಲ್‌ನ್ನು ಹಾಕಿಸಿ, ಅಲ್ಲಿಂದ ಪಕ್ಕದ ಊರುಗಳಿಗೆ ಪೈಪ್‌ಲೈನ್ ಎಳೆದು ಪಂಪ್‌ಹಾಕಿತಕ್ಕಂಥ ಒಂದು ಕೆಲಸವನ್ನು ಮಾಡಬೇಕೆಂದು ಸರಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಹಾಕಿದಂಥ ಬೋರ್‌ವೆಲ್‌ಗಳ ಉಸ್ತುವಾರಿ ಕೆಲಸವನ್ನು, ಸಮೀಕ್ಷೆಯ ಕೆಲಸವನ್ನು ಇದನ್ನು ತೀರ್ಮಾನ ಮಾಡತಕ್ಕಂಥ ಕೆಲಸವನ್ನು, ಪಟ್ಟಿಮಾಡತಕ್ಕಂಥ ಕೆಲಸವನ್ನು ತಾಲ್ಲೂಕು ಮಟ್ಟದಲ್ಲಿ ವಿಭಾಗಾಧಿಕಾರಿಗಳು, ತಹಶೀಲ್ದಾರರು, ಉಪ ವಿಭಾಗಿಧಿಕಾರಿಗಳು, ಮತ್ತು ಸಂಬಂಧಪಟ್ಟಂಥ ಶಾಸಕರು ಇರುತ್ತಾರೆ, ಆದರೆ ಜಿಲ್ಲಾಧಿಕಾರಿಗಳು ತಮಗೆ ಏನು ಮಾಹಿತಿಗಳನ್ನು ಕೊಟ್ಟಿದ್ದಾರೆ ಅದನ್ನು ತಾವುಗಳು ನೋಡಿಕೊಳ್ಳಬೇಕು. ಮಾನ್ಯ ಕಂದಾಯ ಸಚಿವರು ಸಾಮಾನ್ಯವಾಗಿ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದಾರೆ. ಸಾಕಷ್ಟು ಮಾಹಿತಿಗಳನ್ನು ಸಂಗ್ರಹಣೆ ಮಾಡಿದ್ದಾರೆ. ಅಷ್ಟೇ ಅಲ್ಲದೆ, ಸಂಬಂಧಪಟ್ಟಂಥ ಶಾಸಕರುಗಳ ಗಮನವನ್ನು ಕೂಡ ಈ ಬಗ್ಗೆ ಸೆಳೆದಿದ್ದೀರಿ, ಅವರ ಅಭಿಪ್ರಾಯಗಳನ್ನು, ಸಲಹೆಗಳನ್ನು ಕೂಡ ಪಡೆದುಕೊಂಡಿದ್ದಾರೆ. ಆದರೂ ಕೂಡ ಈ ಉಸ್ತುವಾರಿ ಕೆಲಸ ಮಾತ್ರ ಅಷ್ಟು ಸಮರ್ಪಕವಾಗಿ ನಡೆಯುತ್ತಾ ಇಲ್ಲ. ತಾವುಗಳು ಸಂಬಂಧಪಟ್ಟ ಕೆಲಸಕ್ಕಾಗಿ ಸಾಕಷ್ಟು ಹಣವನ್ನು ಬಿಡುಗಡೆ ಮಾಡುತ್ತೀರಿ. ಅದರ ಉಸ್ತುವಾರಿ ಕೆಲಸ ಕೂಡ ಅಷ್ಟೇ ಚೆನ್ನಾಗಿ ನಡೆಯಬೇಕಾಗುತ್ತದೆ. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ವಾರಕ್ಕೊಮ್ಮೆ 15 ದಿವಸಗಳಿಗೊಮ್ಮೆಯಾದರೂ

ತಮಗೆ ವರದಿ ಸಲ್ಲಿಸುವಂತಾಗಬೇಕು. ಅಂಥ ಒಂದು ವ್ಯವಸ್ಥೆಯನ್ನು ತಾವುಗಳು ಮಾಡಿಕೊಳ್ಳಬೇಕು. ಎಲ್ಲಾ ಕಡೆಗಳಿಗೆ ಪ್ರವಾಸ ಮಾಡಿ ಸೂಪರ್‌ವೈಸ್ ಮಾಡಲು ಸಾಧ್ಯವಾಗದಿರಬಹುದು. ಒಂದೇ ಸಾರಿ ಅಲ್ಲದಿದ್ದರೂ ಆಗಾಗ ಅಂಥ ಕಡೆಗಳಿಗೆ ಹೋಗಿ ಉಸ್ತುವಾಗಿ ಕೆಲಸವನ್ನು ಅಧಿಕಾರಿಗಳು ಮಾಡಬೇಕೆಂದು ಆ ಬಗ್ಗೆ ತಾವುಗಳು ಆದೇಶ ನೀಡಬೇಕು.

ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಬೇಕು. ನನಗೆ ಚೆನ್ನಾಗಿ ನೆನಪಿನ ಹಿಂದಿನ ಸರ್ಕಾರ ಕೇಂದ್ರದಲ್ಲಿ ಶ್ರೀ ರಾಜೀವ್‌ಗಾಂಧಿಯವರದಿದ್ದಾಗ ರಾಜ್ಯದಲ್ಲಿ ಬರಗಾಲ ಇದ್ದಂಥ ಸಂದರ್ಭದಲ್ಲಿ ಗುಲ್ಬರ್ಗಾ, ಬೀದರ್,ಕೋಲಾರ, ಮುಂತಾದ ಅನೇಕ ಕಡೆಗಳಿಗೆ ಬೇಟಿ ಕೊಟ್ಟು, ಖುದ್ದಾಗಿ ಬರಪರಿಹಾರ ಕಾಮಗಾರಿಗಳನ್ನು ವೀಕ್ಷಣೆಮಾಡಿದ್ದಾರೆ. ಆ ಸಂದರ್ಭದಲ್ಲಿ 140 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕೊಟ್ಟಿದ್ದು ಉಪಯೋಗವೂ ಆಗಿದೆ, ದುರುಪಯೋಗವೂ ಆಗಿದೆ. ಬರಗಾಲವೆಂದು ಹೇಳಿ ನಮಗೆ ಬಳುವಳಿಯಾಗಿ ಕೊಟ್ಟಿದ್ದೀರಿ. ಈಗಲೂ ಕೇಂದ್ರದಿಂದ ಅಂತಹ ನೆರವನ್ನು ಪಡೆಯುವತ್ತ ತಾವೂ ಕೂಡ ಗಮನ ಕೊಡಬೇಕೆಂದು ಹೇಳುತ್ತಾ, ಮುಂದೆ ಮಾಡಬೇಕಾದ ಕೆಲಸಗಳ ಪೈಕಿ ಕುಡಿಯುವ ನೀರಿಗೆ ಆದ್ಯತೆ ಕೊಡಬೇಕು. ನಂತರ ಡಿಸಿಲ್ಟಿಂಗ್ ಆಫ್ ಟ್ಯಾಂಕ್‌ಗಳಿಗೆ ಆದ್ಯತೆ ಕೊಡಬೇಕು. ಎಷ್ಟೋ ಜಿಲ್ಲೆಗಳಲ್ಲಿ ಯಾವ ಕೆಲಸವೂ ನಡೆದಿಲ್ಲ. ಅದಕ್ಕಾಗಿ ನಾನು ಹೇಳಿದಂಥಾ ತಜ್ಞರ ಸಮಿತಿಯನ್ನು ನೇಮಿಸಬೇಕು. ಇದರಿಂದ ಏನಾಗುತ್ತದೆಂದರೆ ಹಳ್ಳಿಗಾಡುಗಳಲ್ಲಿ ತತ್ತರಿಸಿಹೋಗುತ್ತಿರುವ ಜನ ಜಾನುವಾರುಗಳ ರಕ್ಷಣೆಗೆ ಸರ್ಕಾರ ಧಾವಿಸಿದಂತಾಗುತ್ತದೆ. ಅಲ್ಲದೆ ಸಣ್ಣಪುಟ್ಟು ಕಾಮಗಾರಿಗಳನ್ನು ರೈತಾಪಿ ಜನರಿಗೆ ಒದಗಿಸುವುದರಿಂದ ಅವರ ಬಡತನವೂ ನಿವಾರಣೆಯಾಗಲು ಸಹಾಯವಾಗುತ್ತದೆ. ಜಾನುವಾರುಗಳಿಗಂತೂ ಹುಲ್ಲಿನ ವ್ಯವಸ್ಥೆ ಮಾಡಬೇಕಾದ್ದು ಅತ್ಯಂತ ಅವಶ್ಯಕ. ಇಷ್ಟು ಹೇಳಿ ಮಾತನಾಡಲು ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ

ಶ್ರೀ ಶಿವಾನಂದ್ ಹೆಚ್ ಕೌಜಲಗಿ (ಬೈಲಹೊಂಗಲ): ಮಾನ್ಯ ಅಧ್ಯಕ್ಷರೆ 1984ನೇ ಇಸವಿಯಲ್ಲಿ ಈ ರಾಜ್ಯದಲ್ಲಿ ಬರಗಾಲವಿದ್ದಾಗ ಆಗ ಶ್ರೀ ಎಸ್.ಆರ್. ಬೊಮ್ಮಾಯಿಯವರು ಕಂದಾಯ ಸಚಿವರಾಗಿದ್ದರು. ಆ ಕಾಲಕ್ಕೆ ಶ್ರೀಮಾನ್ ಖರ್ಗೆಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಸರ್ಕಾರ ರಚಿಸಿತ್ತು. ಶ್ರೀ ಖರ್ಗೆಯವರು ರಾಜ್ಯದ ತುಂಬೆಲ್ಲ ಅಡ್ಡಾಡಿ ಅಭ್ಯಸಿಸಿ ಒಂದು ರಿಪೋರ್ಟ್ ಕೊಟ್ಟಿದ್ದರು. ನಾನು ಅವರನ್ನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಅವರು ಕೊಟ್ಟ ರಿಪೋರ್ಟ್ ಏನಿದೆ ಅದನ್ನು ಈಗವರು ಅನುಷ್ಠಾನಕ್ಕೆ ತರಬೇಕು. ಏಕೆಂದರೆ ಅವರು ನಮ್ಮ ರಾಜ್ಯದಲ್ಲಿ ಸಂಪೂರ್ಣವಾಗಿ ಅಡ್ಡಾಡಿ ಚೆನ್ನಾಗಿ ಅಭ್ಯಾಸ ಮಾಡಿ ವಿವರವಾದಂಥ ರಿಪೋರ್ಟ್ ಕೊಟ್ಟಿದ್ದಾರೆ. ಆದ್ದರಿಂದ ಅದನ್ನು ಜಾರಿಗೆ ತರಬೇಕು. ಎರಡನೆಯದಾಗಿ, ಶ್ರೀಮತಿ ಚಂದ್ರಪ್ರಭಾ ಅರಸುರವರು ಹೇಳಿದಂತೆ, ಇವತ್ತಿನ ದಿವಸ ಯಾವುದೇ ನೌಕರರಿರುವ ಕಡೆ ಸರ್‌ಪ್ರೈಸ್ ವಿಸಿಟ್ ಅನ್ನು ಮಂತ್ರಿಗಳು ಅಥವಾ ಡಿಸಿಗಳು ಮಾಡಬೇಕೆಂದು ಸಲಹೆ. ಮೂರನೆಯದಾಗಿ, ಅಸಿಸ್ಟೆಂಟ್ ಕಮಿಷನರ್ ಯಾವ ಕಮಿಟಿಗಳಿಗೆ ಚೇರ್ಮನ್ ಆಗಿದ್ದಾರೆ ಅವರನ್ನು ತೆಗೆದು ಚುನಾಯಿತ ಪ್ರತಿನಿಧಿಗಳಾದ ಎಂಎಲ್‌ಎಗಳನ್ನು ಚೇರ್ಮನ್ ಮಾಡಬೇಕೆಂದು ನಾನು ಕೋರುತ್ತೇನೆ. ಏಕೆಂದರೆ, ಶಾಸಕರಾದ ನಾವು ಅಸಿಸ್ಟೆಂಟ್ ಕಮಿಷನರ್ ಮುಂದೆ ಹೋಗಿ ಅದನ್ನು ಮಾಡಿ ಇದನ್ನು ಮಾಡಿ ಎನ್ನುವ ಬದಲು ನಾವು ಜನರ ಸ್ಥಿತಿಗತಿಗಳನ್ನು ಅರಿತವರು ಯಾವುದನ್ನು ಮಾಡಬೇಕೆಂದು ನಿರ್ಧರಿಸುವಂತಾಗುಬೇಕು. ಅವರ ಮುಂದೆ ಹೋಗುವಂತಾಗಬಾರದು. ನಾಲ್ಕನೆಯದಾಗಿ ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಇದುವರೆಗೆ 151 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಅಂಕಿಅಂಶ ಹೇಳುತ್ತದೆ. ಅದರಲ್ಲಿ 50 ಲಕ್ಷ ರೂಗಳನ್ನು

ಜವಾಹರ್ ರೋಜಗಾರ್ ಯೋಜನೆಯ ಫಂಡ್‌ನಿಂದಲೂ ಎನ್‌ಆರ್‌ಡಬ್ಲ್ಯೂಎಸ್‌ನಿಂದ 50ಲಕ್ಷ ರೂಪಿಯಿಗಳನ್ನು ನೀರಾವರಿ ಇಲಾಖೆಯಿಂದಲೂ ತೆಗೆದುಕೊಟ್ಟಿದ್ದು, ರಾಜ್ಯಸರ್ಕಾರ ಕೊಟ್ಟಿದ್ದು ಕೇವಲ 49 ಲಕ್ಷ ರೂಪಾಯಿಗಳನ್ನು ಮಾತ್ರ ಇಲ್ಲೀವರೆಗೆ ಕೊಟ್ಟಿದೆ ಎಂದು ಹೇಳುಬಹುದು. ಅದರಲ್ಲಿ 15-2-91 ರವರೆಗೆ ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಎಂಪ್ಲಾಯ್‌ಮೆಂಟ್ ಜನರೇಷನ್ ಸಲುವಾಗಿ ಒಂದು ಪೈಸೆ ಸಹ ಖರ್ಚುಮಾಡಿಲ್ಲ. ತಾವು ಬೇಕಾದರೆ ಅಂಕಿಅಂಶ ತೆಗೆಸಿ ನೋಡಿ.

4-40 ಪಿ. ಎಂ.

ಅಂದರೆ ಯಾವುದೇ ಕೆಲಸ ಇವತ್ತಿನ ದಿವಸ ಅಲ್ಲಿ ನಡೆದಿಲ್ಲ ಎನ್ನುವುದನ್ನು ಇದು ತೋರಿಸುತ್ತದೆ. ನಮ್ಮ ಬೈಲಹೊಂಗಲ ಕ್ಷೇತ್ರಕ್ಕೆ ಕೊಟ್ಟಂಥ ಹಣ ಏಳು ಲಕ್ಷ ರೂಪಾಯಿಗಳು. ಅದೂ ಏಳು ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದು ಹತ್ತು ದಿವಸಗಳ ಹಿಂದೆ. ಹತ್ತು ದಿವಸಗಳ ಹಿಂದೆ ಏಳು ಲಕ್ಷ ರೂಪಾಯಿಗಳನ್ನು ಕೊಟ್ಟು ಅದರಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿನ ಸಲುವಾಗಿ ಮತ್ತು ಮೂರು ಲಕ್ಷ ರೂಪಾಯಿಗನ್ನು ಎಂಪ್ಲಾಯ್‌ಮೆಂಟ್‌ನ ಸಲುವಾಗಿ ಕೊಟ್ಟಿದ್ದಾರೆ. ನಾಲ್ಕು ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿನ ಸಲುವಾಗಿ ಕೊಟ್ಟಿದ್ದರಿಂದ 12 ಬೋರ್‌ವೆಲ್‌ಗಳು ಆದವು. ಮೂರು ಲಕ್ಷ ರೂಪಾಯಿಗಳಲ್ಲಿ ಎಂಪ್ಲಾಯಮೆಂಟ್ ಎಂದರೆ ಒಂದು ತಿಂಗಳ ಕೆಲಸವನ್ನು ಮೂರು ನೂರು ಮಂದಿ ಮಾಡುವಂಥಾದ್ದು ಆಗುತ್ತದೆ. ಅಂದರೆ ಎಷ್ಟೊಂದು ಜನರಿಗೆ ನಾವು ಎಂಪ್ಲಾಯ್‌ಮೆಂಟ್‌ನ್ನು ಕೊಡುತ್ತಿದ್ದೇವೆ. ಎನ್ನುವುದನ್ನು ಇದು ತೋರಿಸುತ್ತದೆ. 12 ಬೋರ್‌ವೆಲ್‌ನಲ್ಲಿ ನನಗೆ ನಾಲ್ಕು ಬೋರ್‌ವೆಲ್‌ಗಳು ಬರುತ್ತವೆ, ಶ್ರೀಮಾನ್ ಬಾಬಾಗೌಡ ಪಾಟೀಲರಿಗೆ ನಾಲ್ಕು ಬೋರ್‌ವೆಲ್‌ಗಳು ಬರುತ್ತದೆ, ನಮ್ಮಿಬ್ಬರ ಮೇಲೆ ಇನ್ನೊಬ್ಬರು ಇದ್ದಾರೆ, ಅವರು ಒದ್ನಾಳ್ ಎಂದು, ಅವರಿಗೆ ನಾಲ್ಕು ಹೋಗಬೇಕು. ಏಕೆಂದರೆ ನಾವಿಬ್ಬರೂ ಅಪೋಜಿಷನ್‌ನಲ್ಲಿರುವವರು. ಅಸಿಸ್ಟೆಂಟ್ ಕಮಿಷನರ್‌ರವರು ಏನು ಹೇಳುತ್ತಾರೆ ಎಂದರೆ ಅವರು ಹೇಳಿದ ಹಾಗೆ ಕೇಳಬೇಕಾಗುತ್ತದೆ ಎಂದು ಹೇಳುತ್ತಾರೆ. ನಾವು ನಾಲ್ಕು ಬೋರ್‌ವೆಲಗಳನ್ನು ಹಂಚಿಕೊಂಡಿದ್ದೇವೆ. ಇವತ್ತಿನ ದಿವಸ ಬೈಲಹೊಂಗಲದಲ್ಲಿ 12 ಬೋರ್‌ವೆಲ್‌ಗಳು ಬಂದರೂ ಸಹಿತ ನಮ್ಮಿಬ್ಬರಿಗೂ ನಾಲ್ಕು-ನಾಲ್ಕು ಬೋರ್‌ವೆಲ್ ಎಂದು ಹೆಸರನ್ನು ಕೊಡುವುದು. ಅನಂತರ ನಮ್ಮ ಮೇಲೆ ಇರುವ ಸಿದ್ನಾಳ್ ಎನ್ನುವವರಿಗೆ ನಾಲ್ಕು ಕೊಡುವುದು. ಅದೇ ಪ್ರಕಾರ ಎಂಪ್ಲಾಯ್‌ಮೆಂಟ್ ವರ್ಕ್ಸ್ ಕೊಡುವ ಸಲುವಾಗಿ ಮೂರು ಲಕ್ಷ ರೂಪಾಯಿಗಳು ಬಂದರೂ ಸಹಾ ಅದರಲ್ಲಿ ಒಂದು ಲಕ್ಷ ರೂಪಾಯಿ ಕೆಲಸವನ್ನು ನಾನು ಸಜೆಸ್ಟ್ ಮಾಡುವುದು, ಒಂದು ಲಕ್ಷ ರೂಪಾಯಿ ಕೆಲವನ್ನು ಶ್ರೀಮಾನ್ ಬಾಬಾಗೌಡ ಪಾಟೀಲರು ಮಾಡುವುದು, ಇನ್ನೊಂದು ಲಕ್ಷ ರೂಪಾಯಿಗಳ ಕೆಲಸವನ್ನು ಸಿದ್ನಾಳ್‌ರವರು ಮಾಡುವುದು. ತಾವು ಡೆಪ್ಯುಟಿ ಕಮಿಷನರ್ ಇವತ್ತಿನ ತನಕವೂ ಹಣವನ್ನು ಯಾರು ಖರ್ಚು ಮಾಡುವುದಿಲ್ಲ, ಈ ಬರಗಾಲದ ಹಣವನ್ನು ಯಾರು ಖರ್ಚು ಮಾಡುವುದಿಲ್ಲ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಪ್ರೆಸ್‌ಸ್ಟೇಟ್‌ಮೆಂಟನ್ನು ಕೊಟ್ಟಿರಿ. ಅಗ ನನಗೆ ಬಹಳ ಸಂತೋಷವೆನಿಸಿತು. ಏಕೆಂದರೆ ಒಬ್ಬ ಅಧಿಕಾರಿಯ ಮೇಲೆ ಅಂಜಿಕೆ ಇರಬೇಕು. ಆದರೆ ಇವತ್ತಿನ ತನಕ ಯಾವುದೇ ಒಬ್ಬ ಡೆಪ್ಯುಟಿ ಕಮೀಷನರ್ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಯಾವ ಜಿಲ್ಲೆಯಲ್ಲಿ ಯಾವ ತಾರೀಖಿನ ಒಳಗೆ ಎಷ್ಟೆಷ್ಟು ಹಣ ಖರ್ಚಾಗಿದೆ ಎನ್ನುವುದನ್ನು ತಾವು ತೋರಿಸಿಕೊಡಿ. ಈಗಾಗಲೇ ತಾವು ಹೇಳಿದ ಹಾಗೆ 35 ಲಕ್ಷ ರೂಪಾಯಿಗಳನ್ನು ರಾಜ್ಯದಲ್ಲಿ ಬಿಡುಗಡೆ ಮಾಡಿದ್ದೀರಿ. ಯಾರ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಯಾವ ಅಂಶಗಳನ್ನು ಕೊಟ್ಟಿದ್ದಾರೆ. ನಿಜವಾದ ಅಂಕಿಅಂಶಗಳನ್ನು ಕೊಟ್ಟ ಹಾಗೆ ಆಗುತ್ತಿತ್ತು.

ಆದಕಾರಣ ಇವತ್ತಿನ ದಿವಸ ಯಾವುದೇ ಸರ್ಕಾರ ಇದ್ದರೂ ಸಹಾ ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯ ಇಲ್ಲ. ಇದ್ದ ಹಣದಲ್ಲಿ ಯೋಗ್ಯ ರೀತಿಯಲ್ಲಿ ಖರ್ಚು ಮಾಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕು. ಇನ್ನು ಮೇಲೆ ಕುಡಿಯುವ ನೀರಿನ ಬಗ್ಗೆ ಆದ್ಯತೆಯನ್ನು ಕೊಡುವುದಕ್ಕೆ ಎನ್.ಆರ್.ಡಬ್ಲ್ಯೂ. ವರ್ಕ್‌ನ್ನು ಬಂದ್ ಮಾಡಿ ಈ ಕೆಲಸಕ್ಕೆ ಆದ್ಯತೆ ಕೊಟ್ಟಿದ್ದೇವೆ ಎಂದು ಹೇಳಿದಿರಿ. ಇವತ್ತಿನ ದಿವಸ ಅಲ್ಲಿ ಅವರು ಬೋರ್‌ವೆಲ್‌ಗಳನ್ನು ಹೊಡೆಯಬೇಡಿ ಎಂದು ಹೇಳುತ್ತಾರೆ. ಅಲ್ಲಿ ನಿಜವಾದ ತ್ರಾಸ ಇದ್ದರೂ ಸಹಾ ಕೊಡುವುದಿಲ್ಲ. ಸೆಂಟ್ರಲ್ ಗೌರ್ನಮೆಂಟ್‌ನಿಂದ ಬಂದಂಥ ಹಣದಲ್ಲಿ ಸಹಿತ ಎನ್.ಆರ್‌ಡಬ್ಲ್ಯೂ. ಕೆಲಸವನ್ನು ತೆಗೆದುಕೊಳ್ಳದೇ ಇರುವುದರಿಂದ ಇವತ್ತಿನ ದಿವಸ ಅಲ್ಲಿ ಕೆಲಸ ಕುಂಠಿತವಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಆದಕಾರಣ ನಿಜವಾಗಿ ಎಲ್ಲಿ ನೀರಿನ ಬರ ಇದೆ, ಅಲ್ಲಿ . ನೀರಿನ ಬರವನ್ನು ಹೋಗಲಾಡಿಸುವುದಕ್ಕೆ ಪ್ರಯತ್ನಿಸಲಾಗುತ್ತಿದೆ ಎಂದು ಹೇಳಬಹುದು. ಎನ್.ಆರ್.ಡಬ್ಲ್ಯೂ.ನಲ್ಲಿ ಕುಡಿಯುವ ನೀರಿನ ಸಲುವಾಗಿ ಹಣವನ್ನು ಕೊಟ್ಟಿದ್ದೀರಿ. ಕುಡಿಯುವ ನೀರಿನ ಸಲುವಾಗಿ ಕೊಟ್ಟಂಥ ಹಣವನ್ನು ಮೊದಲು ಬೋರ್‌ವೆಲ್‌ಗೆ ಖರ್ಚು ಮಾಡಿ, ಅವುಗಳನ್ನು ರಿಪೇರಿ ಕೂಡಾ ಮಾಡಬೇಕು. ಅಲ್ಲಲ್ಲಿ ಕೆಲವು ಪೈಪುಗಳು ತೂತು ಬಿದ್ದಿವೆ. ಅಲ್ಲಿ ಈ ರೀತಿಯಾಗಿ ತೂತು ಬಿದ್ದಿರುವುದರಿಂದ ಹೊಸ ಪೈಪುಗಳನ್ನು ಹಾಕುವುದಕ್ಕೆ ಮೂರು-ನಾಲ್ಕು ಸಾವಿರ ರೂಪಾಯಿಗಳಾದರೂ ಬೇಕಾಗುತ್ತದೆ. ಅಂಥದ್ದನ್ನು ಮಾಡಿ ಎಂದು ಹೇಳಿದರೆ ಅವರು ಇಲ್ಲ, ಆ ರೀತಿ ಮಾಡುವುದಕ್ಕೆ ಬರುವುದಿಲ್ಲ, ಹೊಸ ಬೋರ್‌ವೆಲ್‌ಗಳನ್ನು ಹಾಕುವ ಸಲುವಾಗಿ ಇದೆಯೇ ಹೊರತಾಗಿ ರಿಪೇರಿ ಸಲುವಾಗಿ ಹಣ ಖರ್ಚುಮಾಡಲು ನಮ್ಮಗಳಿಗೆ ಅಧಿಕಾರ ಇಲ್ಲ, ರಿಪೇರಿ ವಗೈರೆಯನ್ನು ಜಿಲ್ಲಾಪರಿಷತ್ತಿನವರೇ ಮಾಡಬೇಕೆಂದು ಹೇಳುತ್ತಾರೆ. ನಾನು ಮೊನ್ನೆ ಅಸಿಸ್ಟೆಂಟ್ ಕಮಿಷನರ್‌ರವರನ್ನು ಕೇಳಿದೆ. ಇವತ್ತಿನ ದಿವಸ ನಾಲ್ಕು ಲಕ್ಷ ರೂಪಾಯಿಗಳು ಬಂದಿದ್ದರೆ ಅದನ್ನು ಬೋರ್‌ವೆಲ್‌ಗಳ ರಿಪೇರಿ ಸಲುವಾಗಿ ಉಪಯೋಗ ಮಾಡಿದರೆ ಅನುಕೂಲವಾಗುತ್ತದೆ ಎಂದು ಹೇಳಿದ್ದಕ್ಕೆ ಅವರು ಏನು ಹೇಳಿದರು ಎಂದರೆ, ಇಲ್ಲಿ ಬಂದಿರುವ ರೊಕ್ಕ ಬೋರ್‌ವೆಲ್‌ಗಳನ್ನು ತೆಗೆಸುವ ಸಲುವಾಗಿ ನಮಗೆ ಡೈರೆಕ್ಷನ್ಸ್ ಇದೆಯೇ ಹೊರತು ಬೇರೆ ಅಲ್ಲ, ಆದಕಾರಣ ಇದನ್ನು ರಿಪೇರಿ ಮಾಡಲಿಕ್ಕೆ ಆಗುವುದಿಲ್ಲ ರಿಪೇರಿ ಏನಾದರೂ ಮಾಡಬೇಕಾಗಿದ್ದರೆ ಅದನ್ನು ಜಿಲ್ಲಾ ಪರಿಷತ್ತಿನವರೇ ಮಾಡಬೇಕು ಎಂದು ಹೇಳಿದರು. ಹೀಗೆ ಅಲ್ಲಿ ಒಬ್ಬರ ಮೇಲೆ ಒಬ್ಬರು ಹಾಕುವಂಥ ಕೆಲಸ ಅಲ್ಲಿ ನಡೆದಿದೆ. ಹೀಗಾಗಿ ಯಾವುದೇ ಒಂದು ಕುಡಿಯುವ ನೀರಿನ ಬರವನ್ನು ಹೋಗಲಾಡಿಸಲಿಕ್ಕೆ ಆಗಲಿಲ್ಲ ಎಂದು ಹೇಳಬಹುದು. ಆದಕಾರಣ ಪ್ರತಿಯೊಂದು ಮಂಡಲದಲ್ಲಿಯೂ ಕನಿಷ್ಟು ಐದು ಬೋರ್‌ವೆಲ್‌ಗಳನ್ನಾದರೂ ಹಾಕುವಂಥ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಅಲ್ಲಿ ಎಷ್ಟು ರಿಪೇರಿ ಇದೆ. ಅಷ್ಟು ರಿಪೇರಿ ಮಾಡುವಂಥ ಕೆಲಸವನ್ನು ಮಾಡಬೇಕು. ಇವತ್ತಿನ ದಿವಸ ಎಂ.ಎಲ್.ಎ. ಗ್ರಾಂಟ್ ಎಂದು ಹೇಳಿ ಪ್ರತಿಯೊಬ್ಬ ಎಂ.ಎಲ್.ಎ.ಗಳಿಗೂ 12 ಲಕ್ಷ ರೂಪಾಯಿಗಳ ಕೆಲಸವನ್ನು ಪ್ರಾರಂಭ ಮಾಡಿಸಿ ಎಂದು ಹೇಳಿದ್ದಿರಿ. ನಮಗೂ ಕೂಡಾ ಬಹಳ ಸಂತೋಷವಾಯಿತು. ಎಂ.ಎಲ್.ಎ.ಗ್ರಾಂಟ್‌ನಿಂದ ಕೆಲಸಗಳನ್ನು ಪ್ರಾರಂಭಸಬಹುದು ಎಂದು ಬಹಳ ಸಂತೋಷವಾಯಿತು. ಆದರೆ ದುರ್ದೈವವಶದಿಂದ ಇವತ್ತಿನ ದಿವಸ ಅಲ್ಲಿ ಏನಾಗಿದೆ ಎಂದು ಹೇಳಿದರೆ, ಎಂ.ಎಲ್.ಎ. ಗ್ರಾಂಟ್‌ನಿಂದ ಅಲ್ಲಿ ಒಂದು ಕೆಲಸ ಕೂಡಾ ನಡೆದಿಲ್ಲ. ಏಕೆಂದು ಹೇಳಿದರೆ ಯಾವುದೇ ಕೆಲಸಕ್ಕಾದರೂ ಟೆಂಡರನ್ನು ಕರೆಯಬೇಕಾಗುತ್ತದೆ. ಟೆಂಡರನ್ನು ಕರೆದಮೇಲೆ ಆಗ ಸತ್ಯನಾರಾಯಣಶೆಟ್ಟಿಯವರು ಇದ್ದಾಗ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್‌ಗೆ ಟೆಕ್ನಿಕಲ್ ಸ್ಯಾಂಕ್ಷನ್ ಕೊಟ್ಟಿದ್ದಾರೆ. ಆದರೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಹೇಳುತ್ತಾರೆ, ಇವುಗಳನ್ನು ಯಾರನ್ನು ಕೇಳಿಕೊಂಡು ತೆಗೆದುಕೊಂಡಿದ್ದಾರೆ ಎಂದು ಕೇಳುತ್ತಾರೆ. ಹಣವನ್ನು ಬಿಡುಗಡೆ

ಮಾಡಲಿಕ್ಕೂ ಕೂಡಾ ತಯಾರಿಲ್ಲ ಎಂದು ಕೂಡಾ ಅವರು ಹೇಳುತ್ತಾರೆ. ಈ ರೀತಿಯಾಗಿ ಅಲ್ಲಿ ಕೆಲಸ ಸಹಿತ ಆಗಿಲ್ಲ. ನಿಜವಾಗಿ ಇಂಥ ಕೆಲಸಗಳನ್ನು ಸಹಾ ತೆಗೆದುಕೊಂಡಿದರೆ ಇವತ್ತಿನ ದಿವಸ ಈ ಬರಗಾಲ ಕಾಮಗಾರಿಯಲ್ಲಿ ಅನುಕೂಲವಾಗುತ್ತಿತ್ತು ಎಂದು ಹೇಳಬಹುದು. ಇವತ್ತಿನ ದಿವಸ ನಿಮ್ಮ ಗಮನಕ್ಕೆ ಒಂದು ವಿಷಯವನ್ನು ತರಬೇಕೆಂದರೆ, ನಮ್ಮ ಬೆಳಗಾಂ ಜಿಲ್ಲೆಗೆ ಹಿಪ್ಪರಗಿ ಬ್ಯಾರೇಜು ಸಲುವಾಗಿ 26 ಲಕ್ಷ ರೂಪಾಯಿಗಳನ್ನು ಆಯವ್ಯಯ ಪಟ್ಟಿಯಲ್ಲಿ ತೋರಿಸಿದ್ದಾರೆ. 26 ಲಕ್ಷ ರೂಪಾಯಿಗಳನ್ನು ಅಯವ್ಯಯ ಪಟ್ಟಿಯಲ್ಲಿ ತೋರಿಸಿದ್ದರೂ ಸಹಾ ಇವತ್ತಿನ ದಿವಸ ಅಲ್ಲಿ ಒಂದು ಪೈಸೆ ಕೂಡಾ ಖರ್ಚಾಗಿಲ್ಲ.

ಇವತ್ತಿನ ದಿವಸ ಹಿಪ್ಪರಿಗೆ ಬ್ಯಾರೇಜ್‌ಗೆ 26 ಲಕ್ಷ ರೂಪಾಯಿ ಅಯವ್ಯಯ ಪಟ್ಟಿಯಲ್ಲಿ ಇದ್ದರೂ ಸಹಿತ ಆ ಅಮೌಂಟ್‌ನ್ನು ಬೇರೆ ಕಡೆಗೆ ಡೈವರ್ಟ್ ಮಾಡುವಂಥ ಪ್ರಯತ್ನವಿದೆಯೇ ಹೊರತು ಅಲ್ಲೇ ಅದಕ್ಕಾಗಿಯೇ ಖರ್ಚು ಮಾಡಬೇಕೆಂದು ಉದ್ದೇಶ ಇಲ್ಲ. ಅದೇ ಪ್ರಕಾರ ಚಿಕ್ಕಮುದ್ದೂರು ಟ್ಯಾಂಕ್ ಸಲುವಾಗಿ 15 ಲಕ್ಷ ರೂಪಾಯಿ ಈ ವರ್ಷ ಅಯವ್ಯಯ ಪಟ್ಟಿಯಲ್ಲಿ ಇದೆ. ಅದಕ್ಕಾಗಿ ಇದುವರೆಗೂ ಒಂದು ಪೈಸೆ ಖರ್ಚು ಮಾಡಿಲ್ಲ. ಅಯವ್ಯಯ ಪಟ್ಟಿಯಲ್ಲಿರುವಂಥ ಹಣವನ್ನು ಮೊದಲು ಖರ್ಚುಮಾಡಿದರೆ ಎಷ್ಟೋ ಜನರಿಗೆ ಅನುಕೂಲವಾಗುತ್ತಿತ್ತು. ಇನ್ನೊಂದು ವಾಟರ್ ಸಪ್ಲೈ ಸಲುವಾಗಿ ಕೇಂದ್ರ ಸರ್ಕಾರದಿಂದ ಸಹಾಯ ಪಡೆಯುವ ಸಲುವಾಗಿ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಸಂಶಯಾತ್ಮಕ ಊರುಗಳು ಇವೆ, ಅವುಗಳ ಬಗ್ಗೆ ಒಂದು ರಿಪೋರ್ಟ್ ಕಳುಹಿಸಿಕೊಟ್ಟರೆ ಸಹಾಯ ಪಡೆಯಬಹುದು. ಧಾರವಾಡ ಡಿಸ್ಟ್ರಿಕ್ಟ್‌ನಲ್ಲಿ ಈ ಪ್ರಕಾರ ಒಂದು ರಿಪೋರ್ಟ್ ಕಳುಹಿಸಿರುವುದರಿಂದ 7 ಕೋಟಿ ರೂಪಾಯಿ ನಮಗೆ ಬಂತು. ಅದೇ ಪ್ರಕಾರ ನಮ್ಮ ರಾಜ್ಯದವರೇ ಆದಂಥ ಶ್ರೀಮಾನ್ ಅಭಯಪ್ರಕಾಶ್ ಅವರು ಇವೊತ್ತಿನ ದಿವಸ ಅದಕ್ಕೆ ಕೇಂದ್ರದಲ್ಲಿ ಛೇರ್ಮನ್‌ರಾಗಿದ್ದಾರೆ. ಅವರು ನನಗೆ ಮೊನ್ನೆ ದಿವಸ ಸಿಕ್ಕಿ, ನಿಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಸಂಶಯಾತ್ಮಕ ಊರುಗಳು ಇವೆ, ಅವುಗಳ ಬಗ್ಗೆ ಒಂದು ರಿಪೋರ್ಟ್ ಕಳುಹಿಸಿದರೆ ಕೇಂದ್ರ ಸರ್ಕಾರದಿಂದ ಹಣ ಪಡೆಯಲಿಕ್ಕೆ ಸಾಧ್ಯವಿದೆ ಎಂದು ಹೇಳಿದರು. ಆದ್ದರಿಂದ, ಆದಷ್ಟು ಗ್ರಾಮೀಣ ಅಭಿವೃದ್ಧಿ ಇಲಾಖೆಯವರು ಎಲ್ಲೆಲ್ಲಿ ಈ ತರಹ ಸಂಶಯಾತ್ಮಕ ಊರುಗಳು ಇವೆ, ಅವುಗಳ ಬಗ್ಗೆ ಒಂದು ರಿಪೋರ್ಟ್ ತಯಾರುಮಾಡಿ ಕಳುಹಿಸಿಕೊಟ್ಟು ಹಣ ಪಡೆಯುವಂಥ ವ್ಯವಸ್ಥೆ ಮಾಡಬೇಕು. ಇನ್ನು ನಗರ ಪ್ರದೇಶದಲ್ಲಿ ಕುಡಿಯುವ ನೀರಿನ ಸಲುವಾಗಿ ಇಷ್ಟೊಂದು ತ್ರಾಸ್ ಇರುವಾಗ ಯಾರೂ ಕೇಳುವವರು ಇಲ್ಲ ಎಂದು ಹೇಳಬಹುದು. ನಾವು ಎಷ್ಟೋ ಸಾರಿ ಮಾನ್ಯ ಮಂತ್ರಿಗಳಾದ ಜಾರ್ಜ್ ಅವರಿಗೆ ಲೆಟರ್ ಕೊಟ್ಟರೂ ಸಹಿತ ಹತ್ತು ಬೋರ್ ವೆಲ್ ತೆಗೆಸುವ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿಲ್ಲ. ಈ ವಿಚಾರದಲ್ಲಿ ಜಿಲ್ಲಾ ಪರಿಷತ್‌ಗೆ ಎಷ್ಟು ಹಣ ಬಂದಿದೆ, ಡಿ.ಸಿ.ಯವರ ಕಡೆ ಎಷ್ಟು ಹಣ ಬಂದಿದೆ ಎಂದು ಗೊತ್ತಾಗುವುದಿಲ್ಲ. ಒಂದು ಮೀಟಿಂಗ್ ಸಹಿತ ಕರೆದಿಲ್ಲ. ಈ ರೀತಿಯಾದರೆ ಸರ್ಕಾರದಿಂದ ಜಿಲ್ಲಾಪರಿಷತ್‌ಗೆ ಎಷ್ಟು ಹಣ ಬಂದಿದೆ ಎಂದು ಶಾಸಕರಿಗೆ ಹೇಗೆ ಗೊತ್ತಾಗಬೇಕು. ಒಮ್ಮೆ ನಮ್ಮ ಶ್ರೀಮಾನ್ ಭಾರ್ಗವಯವರು ಬೆಳಗಾಂ ಜಿಲ್ಲೆಗೆ ಬರುತ್ತಾರೆಂದು ತಿಳಿದುಬಂತು. ಆ ಕಾಲಕ್ಕೆ ಡೆಪ್ಯುಟಿ ಕಮೀಷನ್ ಕಛೇರಿಗೆ ಸುಣ್ಣ, ಬಣ್ಣ ನಡೆಯಿತು. ರೆವಿನ್ಯೂ ಮಂತ್ರಿಗಳು ಬರುತ್ತಿರುವುದರಿಂದ ಈ ವ್ಯವಸ್ಥೆ ನಡೆಯುತ್ತಿದೆ ಎಂದು ತಿಳಿದುಬಂತು. ನಮಗೂ ಸಹಿತ ಸಂತೋಷ ಅನಿಸಿತು. ಏಕೆಂದರೆ, 1906ನೇ ಇಸವಿಯಲ್ಲಿ ಆದಂಥ ನಮ್ಮ ತಹಶೀಲ್ದಾರ್ ಕಟ್ಟಡಕ್ಕೆ ಇವೊತ್ತಿನವರೆಗೂ ರಿನೋವೇಷನ್ ಇರಲಿಲ್ಲ. ತಹಶೀಲ್ದಾರ್ ಛೇಂಬರ್ಗೆ ಯೂರಿನಲ್ಸ್ ಇರಲಿಲ್ಲ. ಇದೆಲ್ಲಾ ಆಗುವುದು ಕಂಡು ಸಂತೋಷವಾಯಿತು.

ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು (ಬಸವ ಕಲ್ಯಾಣ) : ಸನ್ಮಾನ್ಯ ಅಧ್ಯಕ್ಷಿಣಿಯವರೆ ಬರಗಾಲ ಕಾಮಗಾರಿ ಪರಿಸ್ಥಿತಿ ವಿಷಯದ ಬಗ್ಗೆ ವಿಧಾನ ಸಭೆಯಲ್ಲಿ ಇಂದು ಸುದೀರ್ಘವಾದಂಥ ಚರ್ಚೆಯನ್ನು ಮಾಡಿ ಈ ಒಂದು ಸಂಬಂಧದಲ್ಲಿ ಕೆಲವೊಂದು ವಿಚಾರಗಳನ್ನು, ಕೆಲವೊಂದು ಸಲಹೆ ಸೂಚನೆಗಳನ್ನು ಸರ್ಕಾರಕ್ಕೆ ಕೊಡಲಿಕ್ಕೆ ನಾನು ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಇರತಕ್ಕಂಥ ಪರಿಸ್ಥಿತಿಯ ಬಗ್ಗೆ ತಮಗೆ ಗುರುತು ಇದ್ದಹಾಗೆ ಹಳೆಯ ಮೈಸೂರಿನ ಭಾಗದಲ್ಲಿ, ಸಾಕಷ್ಟು ಮಳೆ ಇಲ್ಲದೆ ಕಂಗಾಲಾಗಿದ್ದಂಥ ಪರಿಸ್ಥಿತಿಯನ್ನು ನಾವು ಇಲ್ಲಿ ಕಣ್ಣಾರೆ ಕಾಣುತ್ತಿದ್ದೇವೆ. ಉತ್ತರ ಕರ್ನಾಟಕ, ಬೀದರ್, ಗುಲ್ಬರ್ಗ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಸಾಕಷ್ಟು ಮಳೆಯಿಂದಾಗಿ, ಕೆಲವು ಭಾಗದಲ್ಲಿ ಸಾಕಷ್ಟು ಮಳೆ ಬಿದ್ದು ಬಹಳ ಗಂಭೀರ ಪರಿಸ್ಥಿತಿಯನ್ನು ನಮ್ಮ ಭಾಗದ ಜನರು, ರೈತರು ಎದುರಿಸುತ್ತಿರುವ ಪರಿಸ್ಥಿತಿಯನ್ನು ನಮ್ಮ ಕಂದಾಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅವರಲ್ಲೂ ವಿಶೇಷವಾದಂಥ ಪರಿಸ್ಥಿತಿಯಲ್ಲಿ ನಮ್ಮ ಭಾಗದ ಜನರು ಏನು ಹೇಳುತ್ತಿದ್ದಾರೆಂದರೆ, ಹಸಿರು ಬರಗಾಲ ಎನ್ನುವಂಥ ಭಾವನೆ ನಮ್ಮಲ್ಲಿ ಬಂದಿದೆ. ಹೈದರಾಬಾದ್-ಕರ್ನಾಟಕ ಭಾಗದಲ್ಲಿ ವಿಶೇಷವಾಗಿ ಸಾಕಷ್ಟು ಮಳೆ ಆಗಿದೆ. ಸುಮಾರು 20-30 ವರ್ಷಗಳಿಂದಲೂ ಬರಲಾರದಂಥ ಮಳೆ ಒಂದೇ ವರ್ಷದಲ್ಲಿ ಬಿದ್ದು, ಅಂದರೆ ಸಾಧಾರಣವಾಗಿ ಯಾವರೀತಿ ಚಿರಾಪುಂಜಿಯಲ್ಲಿ ಮಳೆ ಬೀಳುತ್ತಿತ್ತು ಅದೇ ರೀತಿ ನಮ್ಮ ಭಾಗದಲ್ಲಿ ಬಿದ್ದು, ನಮ್ಮ ಭಾಗದಲ್ಲಿರತಕ್ಕ ರೈತರ ಭೂಮಿಗೆ, ದಸಕರುಗಳಿಗೆ ಹೆಚ್ಚಿನ ಹಾನಿಯನ್ನು ಉಂಟುಮಾಡಿದಂಥ ಒಂದು ಪರಿಸ್ಥಿತಿಯನ್ನು ನಾವು ಕಣ್ಣಾರೆ ಕಂಡಿದ್ದೇವೆ. ಹಲವಾರು ಮಂತ್ರಿಗಳು, ಆ ಒಂದು ಭಾಗಕ್ಕೆ ಭೇಟಿ ಕೊಟ್ಟು ಹಲವಾರು ಹೇಳಿಕೆಗಳನ್ನು ನೀಡಿದ್ದಾರೆ. ಆದರೆ ಈವರೆಗೆ ಸರಿಯಾದ ರೀತಿಯಲ್ಲಿ ಕಾರ್ಯಕ್ರಮ ನಡೆಸದೇ ಇರುವುದು ಬಹಳ ವಿಷಾದದ ಸಂಗತಿ ಎಂದು ವಿಶೇಷವಾದ ಭಾವನೆಯಿಂದ ಹೇಳಲಿಕ್ಕೆ ಬಯಸುತ್ತಿದ್ದೇನೆ. ಈ ಒಂದು ಬರಗಾರ ಪರಿಸ್ಥಿತಿಯ ಬಗ್ಗೆ, ನಾವು ಇಲ್ಲಿ ಸುದೀರ್ಘವಾಗಿ ಚರ್ಚೆಯನ್ನು ಮಾಡುತ್ತಿದ್ದೇವೆ.

ನಮ್ಮ ಇಡೀ ರಾಜ್ಯದಲ್ಲಿರತಕ್ಕ ಪರಿಸ್ಥಿತಿಯನ್ನು ನೋಡಿ ಎಲ್ಲ ಮಾನ್ಯ ಶಾಸನಸಭಾ ಸದಸ್ಯರೂ ತಮ್ಮ ತಮ್ಮ ಮತ ಕ್ಷೇತ್ರದ ಬಗ್ಗೆ ಹಲವಾರು ಅಭಿಪ್ರಾಯಗಳನ್ನು ಸರ್ಕಾರಕ್ಕೆ ಕೊಡತಕ್ಕದ್ದು ಪ್ರಜಾಪ್ರಭುತ್ವ ಪದ್ಧತಿ. ಇಂಥ ಒಂದು ಪರಿಸ್ಥಿತಿಯಲ್ಲಿ ನಾವು ಇಲ್ಲಿ ಕುಳಿತು ಚರ್ಚೆ ಮಾಡಿ ಯಾವರೀತಿಯ ಕಾರ್ಯಕ್ರಮಗಳನ್ನು ನಿರೂಪಣೆ ಮಾಡಿ ಜನರಿಗೆ, ರೈತರಿಗೆ ಆಗುತ್ತಿರುವ ತೊಂದರೆಗಳೇನು ಎಂಬುವನ್ನು ಗಮನಿಸಿ ಅವುಗಳಿಗೆ ಸೂಕ್ತ ಪರಿಹಾರವನ್ನು, ಸೂಕ್ತ ಕಾರ್ಯಕ್ರಮಗಳನ್ನು ನಾವು ಕೈಗೊಳ್ಳಬೇಕೆಂಬ ಬಗ್ಗೆ ಸರ್ಕಾರಕ್ಕೆ ಕಾಳಜಿ ಇನ್ನೂ ಸಾಲದು ಎನ್ನತಕ್ಕ ಮಾತನ್ನು ನಾವು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ನಮ್ಮ ರಾಜ್ಯದ ಎಲ್ಲಾ ಜಿಲ್ಲೆಗಳ ಬಗೆಗೂ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಔರಾದ್ ತಾಲೂಕಿನ ಶಾಸಕರಾದ ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಬೀದರ್ ಜಿಲ್ಲೆಯ ಕೊನೆಯ ತಾಲ್ಲೂಕಿಗೆ ಮಾನ್ಯ ಮಂತ್ರಿಗಳು ಬಂದಿದ್ದರು. ಅಲ್ಲಿಯ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಹೆಸರು, ಉದ್ದು, ಎಳ್ಳು, ಮುಂತಾದ ಹಣಕಾಸಿನ ಬೆಳೆಗಳನ್ನು ಬೆಳೆಯತಕ್ಕ ನಮ್ಮ ಭಾಗದಲ್ಲಿ ಇವತ್ತು ನೈಸರ್ಗಿಕ ವಿಕೋಪದಿಂದಾಗಿ ಮಳೆ ಬಾರದೆ ಬೆಳೆಯೆಲ್ಲಾ ಹಾಳಾಗಿದೆ. ಬೆಳೆಗಳ ಹಾನಿಗೊಳಗಾದ ರೈತರಿಗೆ ಇದುವರೆಗೂ ಸರ್ಕಾರದವರು ಪರಿಹಾರವನ್ನು ಕೊಟ್ಟಿಲ್ಲ. ಆದ್ದರಿಂದ ನಾನು ಮಾನ್ಯ ಕಂದಾಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನೈಸರ್ಗಿಕ ಪ್ರಕೋಪಕ್ಕೆ

ಒಳಗಾಗತಕ್ಕ ಜನರಿಗೆ ಯಾವರೀತಿಯ ಕಾರ್ಯಕ್ರಮಗಳನ್ನು ಸರ್ಕಾರದವರು ತೆಗೆದುಕೊಳ್ಳುತ್ತಿದ್ದೀರೋ ಅದೇ ರೀತಿಯ ಕಾರ್ಯಕ್ರಮಗಳನ್ನು ನಮ್ಮ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೂ ಹಾಕಿಕೊಂಡು ಬೆಳೆ ಹಾಳಾದ ರೈತರಿಗೆ ಸಮರ್ಪಕವಾದ ರೀತಿಯಲ್ಲಿ ಪರಿಹಾರವನ್ನು ಕೊಡುವಂಥ ಕೆಲಸವನ್ನು ಸರ್ಕಾರದವರು ಪ್ರಥಮವಾಗಿ ಮಾಡಬೇಕು.

ಎರಡನೆಯದಾಗಿ, ರೈತರು ಇವತ್ತು ಎಂಥ ಕಷ್ಟ ಪರಿಸ್ಥಿತಿಯಲ್ಲಿದ್ದಾರೆಂದರೆ, ಅವರಿಗೆ ಬಿತ್ತನೆ ಮಾಡಲಿಕ್ಕೆ ಬೀಜ ಸಿಕ್ಕುತ್ತಿಲ್ಲ, ಇಟ್ಟಂಥ ಬೆಳೆ ಹಾಳಾಗಿ ಹೋದಾಗ ಬೆಳೆ ವಿಮೆಯ ಮುಖಾಂತರ ರೈತರಿಗೆ ಹೆಚ್ಚಿನ ಅನುಕೂಲವನ್ನು ಮಾಡಿಕೊಡಬೇಕಾದುದು ಸರ್ಕಾರದ ಪ್ರಥಮ ಕರ್ತವ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೂ ಹಲವಾರು ಮಾನ್ಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ಬರಗಾಲ ಕಾಮಗಾರಿಗಳನ್ನು ಯಾವರೀತಿ ನಿರೂಪಣೆ ಮಾಡಬೇಕೆಂದು ಹೇಳಿದ್ದಾರೆ. ನಾನೂ ಕೂಡ ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರದವರು ಯಾವಾಗಲೂ ಕೂಡ ಕರ್ನಾಟಕ ರಾಜ್ಯದ ಜನರನ್ನು ಸರಿಯಾಗಿ ನೋಡುತ್ತಿಲ್ಲ. ಹಿಂದಿನ ಕೇಂದ್ರ ಸರ್ಕಾರದವರೂ ಕೂಡ ಬರಗಾಲ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಹಣವನ್ನು ಕೊಡುವಾಗ ಮಹಾರಾಷ್ಟ್ರ ಸರ್ಕಾರಕ್ಕೆ ಹೆಚ್ಚಿನ ಹಣವನ್ನು ಕೊಟ್ಟಿರತಕ್ಕದ್ದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಇದೇ ರೀತಿ ದಕ್ಷಿಣ ಭಾರತದಲ್ಲಿ ತಮಿಳ್ನಾಡಿಗೆ ಹೆಚ್ಚಿನ ಹಣವನ್ನು ಕೊಟ್ಟಿರತಕ್ಕದ್ದನ್ನು ನೋಡಿದರೆ ಕೇಂದ್ರ ಸರ್ಕಾರದವರು ನಮ್ಮ ಸರ್ನಾಟಕ ಸರ್ಕಾರವನ್ನು ಕಣ್ಣೆತ್ತಿಯೂ ನೋಡುತ್ತಿಲ್ಲವೆಂದು ನಾನು ಹೇಳಬಯಸುತ್ತೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಕಾರ್ಯಕ್ರಮಗಳನ್ನು ನಿರೂಪಿಸಿ, ನಮ್ಮ ರಾಜ್ಯಕ್ಕೆ ಹೆಚ್ಚಿನ ಬರಗಾಲ ಕಾಮಗಾರಿಗಳನ್ನು ಮಂಜೂರು ಮಾಡಿಕೊಡುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬೇಕೆಂದು ಹೇಳಬಯಸುತ್ತೇನೆ. ಮಾನ್ಯ ಕೌಜಲಗಿಯವರು ಹೇಳುವಂಥ ರೀತಿಯಲ್ಲಿ ಅಸಿಸ್ಟೆಂಟ್ ಕಮೀಷನರ್‌ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿ ಆ ಸಮಿತಿಗೆ ನೀವು ಹಣವನ್ನು ರಿಲೀಸ್ ಮಾಡುತ್ತಿದ್ದೀರಿ. ಆದರೆ ಆ ಹಣ ಸರಿಯಾದ ರೀತಿಯಲ್ಲಿ ಸದುಪಯೋಗವಾಗುತ್ತಿಲ್ಲ. ಸರಿಯಾದ ರೀತಿಯಲ್ಲಿ ರಿಲೀಫ್ ವರ್ಕ್ಸ್ ನಡೆಯುತ್ತಿಲ್ಲ. ಈ ವಿಚಾರದಲ್ಲಿ ಹೇಳುವುದಾದರೆ, ಆಯಾ ಪ್ರದೇಶದ ಶಾಸನ ಸಭಾ ಸದಸ್ಯರನ್ನು ಆ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿ, ಅಸಿಸ್ಟೆಂಟ್ ಕಮೀಷನರ್‌ರವರನ್ನು ಅದರ ಕಾರ್ಯದರ್ಶಿಯನ್ನಾಗಿ ಮಾಡಿದರೆ ನೀವು ಎಷ್ಟು ಹಣವನ್ನು ಕೊಡುತ್ತೀರೋ ಅಷ್ಟು ಹಣವೂ ಖರ್ಚಾಗುವಂತೆ ಫಿಸಿಕಲ್ ವರ್ಕ್ಸ್‌ನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಬಹುದು. ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಇದರ ಬಗ್ಗೆ ಕೂಡಲೇ ಸರ್ಕಾರದವರು ಕಾರ್ಯಕ್ರಮಗಳನ್ನು ನಿರೂಪಣೆ ಮಾಡಬೇಕೆಂದು ಹೇಳಬಯಸುತ್ತೇನೆ.ಇನ್ನು ನಮ್ಮಲ್ಲಿ ಭೀಕರವಾದ ಮಳೆಯಿಂದಾಗಿ ದನಕರುಗಳು ಹಾಳಾಗಿ ಹೋಗಿವೆ, ನೀರಿನಲ್ಲಿ ಕೊಚ್ಚಿಕೊಂಡು ಹೋಗಿವೆ. ಇವತ್ತು ರೈತ ಮತ್ತೆ ದನಕರುಗಳನ್ನು ತೆಗೆದುಕೊಳ್ಳಬೇಕಾದರೆ ಕನಿಷ್ಟ ಸುಮಾರು 10 ಸಾವಿರ ರೂಪಾಯಿಗಳಾದರೂ ಬೇಕಾಗುತ್ತದೆ. ಒಕ್ಕಲುತನ ಮಾಡಬೇಕಾದ ರೈತ ಇವತ್ತು ದನಕರುಕಳಿಲ್ಲದೆ ಬಹಳ ಕಷ್ಟಪರಿಸ್ಥಿತಿಯಲ್ಲಿದ್ದಾರೆ.

ಆದ್ದರಿಂದ ನಾನು ಸರ್ಕಾರದವರಲ್ಲಿ ರೈತರ ಪರವಾಗಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ವಿಶೇಷ ಆದ್ಯತೆಯನ್ನು ನೀಡಿ ಬ್ಯಾಂಕುಗಳ ಮೂಲಕ ರೈತರಿಗೆ ಹೆಚ್ಚಿನ ಸಹಾಯವನ್ನು ಕೊಟ್ಟು, ಎತ್ತುಗಳನ್ನು ಕೊಂಡುಕೊಳ್ಳಲಿಕ್ಕೆ, ಚಕ್ಕಡಿಗಳನ್ನು ಕೊಂಡುಕೊಳ್ಳಲಿಕ್ಕೆ, ಬಿತ್ತನೆ ಸಾಮಾನುಗಳನ್ನು ಖರೀದಿ ಮಾಡಿಕೊಳ್ಳಲಿಕ್ಕೆ ಹಣವನ್ನು ನೀಡುವಂತೆ ಬ್ಯಾಂಕಿನ ಅಧಿಕಾರಿಗಳಿಗೆ ವಿಶೇಷ ಸೂಚನೆಯನ್ನು ಕೊಡಬೇಕು.

ನಾನು ಗ್ರಾಮೀಣ ಪ್ರದೇಶದಿಂದ ಬಂದಿರುವುದರಿಂದ ನನಗೆ ಗ್ರಾಮೀಣ ಜನರ ಕಷ್ಟಗಳೇನು, ಅವರ ಸಮಸ್ಯೆಗಳೇನು ಎಂಬುದು ಚೆನ್ನಾಗಿ ಗೊತ್ತಿದೆ. ಆದ್ದರಿಂದ ಬ್ಯಾಂಕಿನ ಮುಖಾಂತರರ ರೈತರಿಗೆ ಹೆಚ್ಚಿನ ಅನುಕೂಲಗಳನ್ನು ಒದಗಿಸಿಕೊಡುವಂತೆ ಸೂಚನೆ ನೀಡಬೇಕೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಇದೇ ರೀತಿ ಬೋರ್‌ವೆಲ್‌ಗಳ ಬಗ್ಗೆ ಸಾಕಷ್ಟು ಮಾನ್ಯ ಸದಸ್ಯರು ಹೇಳಿದ್ದಾರೆ. ಅನೇಕ ಕಡೆ ಬೋರ್‌ವೆಲ್‌ಗಳು ಸರಿಯಾಗಿ ಕೆಲಸಮಾಡುತ್ತಿಲ್ಲ. ನಮಗೆ ಸ್ಪೇಸಿಫಿಕ್ ಹಣ ಸಾಕಷ್ಟು ಬಂದಿಲ್ಲ. ಆದ್ದರಿಂದ ನಮ್ಮ ತಾಲ್ಲೂಕಿನಲ್ಲಿ ಒಂದೇ ಒಂದು ಬೋರ್‌ವೆಲ್ಲನ್ನೂ ಕೂಡ ಕೊರೆದಿಲ್ಲ. ನಮ್ಮ ಬೀದರ್ ಜಿಲ್ಲೆಗೆ 99 ಲಕ್ಷ ರೂಪಾಯಿಗಳ ಹಣವನ್ನು ತಾವು ಕೊಟ್ಟಿದ್ದೀರಿ. ಆದರೆ ನಾವು ಬೀದರ್ ಜಿಲ್ಲೆಯಲ್ಲಿ ಎಲ್ಲಿ ಹೋದರೂ ಅಲ್ಲಿ ವಿಶೇಷವಾಗಿ ಬೋರ್‌ವೆಲ್‌ಗಳನ್ನು ಕೇಳುವಂಥ ಜನರು ಇದ್ದರೂ ಕೂಡ ಅವರಿಗೆ ಇದುವರೆಗೂ ಬೋರ್‌ವೆಲ್‌ಗಳನ್ನು ತೋಡಿಸಿ , ಕೊಳವೆ ಬಾವಿಗಳನ್ನು ಕೊಟ್ಟಿಲ್ಲ. ಇದರ ಬಗ್ಗೆಯೂ ಸರ್ಕಾರದವರು ತುರ್ತು ಕ್ರಮ ತೆಗೆದುಕೊಳ್ಳಬೇಕು. ಹೈದರಾಬಾದ್ ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಬೀದರ್, ಗುಲ್ಬರ್ಗಾ ಜಿಲ್ಲೆಗಳಲ್ಲಿ ಸಣ್ಣ ನೀರಾವರಿ ಕರೆಗಳೂ ಇದ್ದರೂ ಆ ಸಣ್ಣ ಕೆರೆಗಳಲ್ಲಿ ಹೂಳು ತುಂಬಿಕೊಂಡಿರುತ್ತದೆ. ಹೂಳನ್ನು ತೆಗೆಯುವಂಥ ಕೆಲಸವನ್ನು ತೀವ್ರಗತಿಯಿಂದ ತೆಗೆದುಕೊಂಡರೆ ಆ ಭಾಗದ ಜನರಿಗೆ ಉತ್ತಮವಾಗುತ್ತದೆ. ಇದರಿಂದ ರೈತರಿಗೆ ಹೆಚ್ಚಿನ ಕೆಲಸವನ್ನು ಕೊಡಲು ಸಾಧ್ಯವಾಗುತ್ತದೆ. ಇದರಿಂದ ನೀರಿನ ಸಂಗ್ರಹಣೆಯನ್ನು ಮಾಡಿ ಊರಿನ, ಗ್ರಾಮೀಣ ಜನರಿಗೆ ನೀರಿನ ಅನುಕೂಲತೆಯನ್ನು ಮಾಡಿಕೊಟ್ಟಂತಾಗುತ್ತದೆ. ದನಕರುಗಳಿಗೆ ಮೇವು ಹೆಚ್ಚಿಸುವ ಒಂದು ಕಾರ್ಯಕ್ರಮವನ್ನು ಮಾಡಿದಂತಾಗುತ್ತದೆ. ಇದಕ್ಕೆ ವಿಶೇಷವಾದಂಥ ಆದ್ಯತೆಯನ್ನು ಕೊಟ್ಟು ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಸಣ್ಣ ಕೆರೆಗಳಲ್ಲಿ ಹೂಳನ್ನು ತೆಗೆಯುವಂಥ ಮತ್ತು ಪರ್‌ಕ್ಯುಲೇಷನ್ ಮಾಡುವಂಥ ಕೆಲಸಗಳನ್ನು ತಾವು ತೆಗೆದುಕೊಳ್ಳಬೇಕು. ಹಿಂದೆ ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಪರ್‌ಕ್ಯುಲೇಷನ್ ಟ್ಯಾಂಕ್ಗಳನ್ನು ತೆಗೆಯುವಂಥ ಕೆಲಸವನ್ನು ಪ್ರತಿಯೊಂದು ಗ್ರಾಮದಲ್ಲೂ ನಾವು ತೆಗೆದುಕೊಂಡದ್ದೆವು. ಅದೇ ರೀತಿಯಲ್ಲಿ ತಾವು ತಮ್ಮ ಪ್ರೋಗ್ರಾಮ್‌ನಲ್ಲಿ ಸೇರಿಸಿಕೊಂಡು ಎಲ್ಲೆಲ್ಲಿ ಬರಗಾಲ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೀರಿ. ಅಲ್ಲಿ ಈ ಕಾರ್ಯಕ್ರಮಗಳಿಗೆ ಒಂದು ವಿಶೇಷವಾದಂಥ ಆದ್ಯತೆಯನ್ನು ಕೊಟ್ಟು ಸಣ್ಣ ನೀರಾವರಿಗಳಿಗೆ, ಪರ್‌ಕ್ಯುಲೇಷನ್ ಟ್ಯಾಂಕ್ಗಳನ್ನು ಕಟ್ಟುವುದರಿಂದ ದನಕರುಗಳಿಗೆ ಹೆಚ್ಚಿನ ಅನುಕೂಲವಾಗುವುದರ ಜೊತೆಗೆ ಕುಡಿಯುವ ನೀರಿನ ಸಮಸ್ಯೆಯನ್ನೂ ಬಗೆಹರಿಸಲು ಸಾಧ್ಯವಾಗುತ್ತದೆ. ಇಂಥ ಪ್ರಮುಖವಾದ ವಿಚಾರಗಳನ್ನು ತಾವು ಬರಗಾಲ ಕಾಮಗಾರಿ ಯೋಜನೆಗಳಲ್ಲಿ ತೆಗೆದುಕೊಳ್ಳಬೇಕೆಂದು ಒಂದು ಸಲಹೆಯನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಎರಡನೆಯದಾಗಿ, ನಮ್ಮ ಭಾಗದಲ್ಲಿ ಸಾಕಷ್ಟು ಮಳೆಯಾಗಿ ರಸ್ತೆಗಳು ಎಲ್ಲ ಹಾಳಾಗಿ ಹೋಗಿ ವಿಶೇಷವಾಗಿ ಬಸ್ಸಿನ ಸೌಕರ್ಯ ಜನರಿಗೆ ಸಿಗುತ್ತಿಲ್ಲ. ರಸ್ತೆಗಳು ಸಿಕ್ಕಾಪಟ್ಟೆ ಹಾಳಾಗಿ ಹೋಗಿವೆ. ತಾವೂ ಕೂಡ ಮೊನ್ನೆ ಇಲ್ಲಿಗೆ ಬಂದಂಥ ಸಂದರ್ಭದಲ್ಲಿ ಕಣ್ಣಾರೆ ಕಂಡಿದ್ದೀರಿ. ಅದಕ್ಕಾಗಿ ರಸ್ತೆಗಳಿಗಾಗಿ ಹೆಚ್ಚಿನ ಹಣಕಾಸನ್ನು ಬಿಡುಗಡೆ ಮಾಡಬೇಕೆನ್ನುವ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಕೊನೆಯದಾಗಿ ವಿದ್ಯುಚ್ಛಕ್ತಿ ಬಗ್ಗೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಮಿನಿ ವಾಟರ್ ಸಪ್ಲೆ ಸ್ಕೀಮ್‌ಗಳಿಗೆ ವಿಶೇಷವಾದಂಥ ಆದ್ಯತೆಯನ್ನು ಕೊಡತಕ್ಕಂಥದ್ದು ರಾಜ್ಯಸರ್ಕಾರದಿಂದ ಆದ್ಯ ಕರ್ತವ್ಯವಾಗಿದೆ. ವಿದ್ಯುಚ್ಛಕ್ತಿ ನಮ್ಮ ಬೀದರ್ ಜಿಲ್ಲೆಯಲ್ಲಿ ಬಹಳ ವಿಚಿತ್ರವಾದದ್ದಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಹೋಗಿ ಕೇಳಿಕೊಂಡಾಗ ಏನು ಹೇಳುತ್ತಾರೆಂದರೆ, ಈ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ವಿದ್ಯುಚ್ಛಕ್ತಿಯ ವೋಲ್ಟೇಜ್ ಹೋಗಿಬಿಟ್ಟಿದೆ ಎಂದು

ಹೇಳುವಂಥ ಭಾವನೆ ಬರಬೇಕಾದರೆ ಏನು ಇದರಲ್ಲಿ ತೊಂದರೆ ಇದೆ, ಏನು ನ್ಯೂನತೆ ಇದೆ ಎನ್ನುವುದನ್ನು ತಪಾಸಣೆ ಮಾಡಬೇಕಾಗಿದೆ. ನಮ್ಮ ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಐ.ಪಿ. ಸೆಟ್‌ಗಳಮೇಲೆ ರೈತರ ಜೀವನ ಅವಲಂಬಿಸಿದೆ ಇಂಥ ಐ.ಪಿ.ಸೆಟ್‌ಗಳ ವ್ಯವಸ್ಥೆ ಸಲುವಾಗಿ ಆದ್ಯತೆಯನ್ನು ಕೊಟ್ಟು ನಮ್ಮ ರೈತರಿಗೆ ಅನುಕೂಲತೆಯನ್ನು ಮಾಡಿ ಕೊಡಬೇಕೆನ್ನುವ ಮಾತನ್ನು ಹೇಳುತ್ತೇನೆ. ಇಲ್ಲಿ ಎಲ್ಲ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ಈ ಸಂದರ್ಭದಲ್ಲಿ ಹೇಳಿರುತ್ತಾರೆ. ನಾನು ಹೆಚ್ಚಿಗೆ ಹೇಳಬೇಕಾದ್ದು ಏನೂ ಇಲ್ಲ, ನಾನು ನನ್ನ ಅಭಿಪ್ರಾಯಗಳನ್ನೂ ಕೊಟ್ಟಿದ್ದೇನೆ. ಮಾನ್ಯ ಸಿಂಧ್ಯರವರು ಒಂದು ಮಾತನ್ನು ಹೇಳಿದ್ದಾರೆ. ಸದನ ಸಮಿತಿಯನ್ನು ರಚನೆ ಮಾಡಿಕೊಂಡು ರಾಜ್ಯಮಟ್ಟದಲ್ಲಿ ಒಂದು ಸಮೀಕ್ಷೆಯನ್ನು ಮಾಡಿಕೊಂಡು ಯಾವರೀತಿ ಕಾರ್ಯಕ್ರಮಗಳನ್ನು ಬರಗಾಲ ಕಾಮಗಾರಿ ತೆಗೆದುಕೊಳ್ಳಬೇಕು, ಅಂಥ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ಲಾನಿಂಗ್ ತಯಾರು ಮಾಡಿಕೊಂಡು ಆ ಪ್ಲಾನಿಂಗ್ ಮುಖಾಂತರವಾಗಿ ತಾವು ಹಣವನ್ನು ಖರ್ಚು ಮಾಡಿದರೆ ಹಣ ಕೂಡ ದುರುಪಯೋಗವಾಗುವುದಕ್ಕೆ ಸಾಧ್ಯವಾಗುವುದಿಲ್ಲ, ಬರಗಾಲ ಬಂದ ತಕ್ಷಣ ಅದಕ್ಕೆ ಒದಗಿಸತಕ್ಕಂಥ ಹಣ ದುರುಪಯೋಗವಾಗಿ ಅದು ನೇರವಾಗಿ ಜನರಿಗೆ ಹೋಗದೆ ತೊಂದರೆಯಾಗುವಂಥ ಪರಿಸ್ಥಿತಿಯನ್ನು ನಾವು ಕಣ್ಣಾರೆ ಕಂಡಿದ್ದೇವೆ. ಹಣ ಪೋಲಾಗದ ರೀತಿಯಲ್ಲಿ ಯಾವ ಕಾರ್ಯಕ್ರಮಗಳಿಗೆ ಹಣವನ್ನು ಕೊಡುತ್ತಿದ್ದೀರಿ, ಅದು ಸರಿಯಾದ ರೀತಿಯಲ್ಲಿ ಉಪಯೋಗವಾಗಲು ಆದ್ಯತೆಯನ್ನು ಕೊಡಬೇಕು. ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಜಿಲ್ಲಾದಿಕಾರಿಗಳು ಮೇಲಿಂದ ಮೇಲೆ ಆ ಸ್ಥಳಕ್ಕೆ ಭೇಟಿಕೊಟ್ಟು ಪರಿಶೀಲನೆ ಮಾಡಿ ಆದ್ಯತೆಯ ಮೇರೆಗೆ ಕೆಲಸಗಳನ್ನು ಮಾಡಿದರೆ ದುರುಪಯೋಗವಾಗಲಾರದಂಥ ರೀತಿಯಲ್ಲಿ ಹಣವನ್ನು ಖರ್ಚು ಮಾಡಬಹುದೆಂಬ ವಿಚಾರವನ್ನು ಈ ಸಂದರ್ಭದಲ್ಲಿ, ಮಾನ್ಯ ಅಧ್ಯಕ್ಷರು ಈ ಒಂದು ಸಂದರ್ಭದಲ್ಲಿ ಬರಗಾಲ ಕಾಮಗಾರಿಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳಲಿಕ್ಕೆ ನನಗೆ ಅವಕಾಶವನ್ನು ಮಾಡಿಕೊಟ್ಟದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಜಿಲ್ಲೆಯದು ಅವರೇ ಮಾತನಾಡಿದ್ದಾರೆ.

ಅಧ್ಯಕ್ಷರು : ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಹೇಳಿದ್ದನ್ನೆಲ್ಲ ಒಪ್ಪಿಕೊಳ್ಳೋಣ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನು ಏನು ಹೇಳಲೇ ಇಲ್ಲವಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಗುರುಪಾದಪ್ಪನವರೇ, ನೀವು ಹೇಳಿದ್ದನ್ನೆಲ್ಲ ಮೊದನಿಂದಲೂ ಒಪ್ಪಿಕೊಳ್ಳುತ್ತಲೇ ಬಂದಿರುತ್ತಾರೆ.

ಅಧ್ಯಕ್ಷರು : ಮಾನ್ಯ ಗುರಿಪಾದಪ್ಪ ನಾಗರಮಾರಪಲ್ಲಿಯವರೇ ಈಗ ಅವರು ಏನು ಹೇಳುತ್ತಾರೆ ಕೇಳಿ. ಅವರು ಹೇಳಿದಮೇಲೆ ನಿಮಗೆ ಕ್ಲಾರಿಫಿಕೇಶನ್ ಕೇಳಲು ಅವಕಾಶವಿರುತ್ತದೆ. ಆಗ ನಿಮ್ಮ ಪಾಯಿಂಟ್ಸ್‌ನ್ನು ಹೇಳಬಹುದು.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಸುಮಾರು 15 ಜನ ಶಾಸಕ ಮಿತ್ರರು, ವಿರೋಧ ಪಕ್ಷದ ನಾಯಕರು, ಉಪನಾಯಕರು ಹಾಗೂ ಅನೇಕ ಪಕ್ಷಗಳ ಮುಖಂಡರು ಈ ಬರಗಾಲ ಪರಿಸ್ಥಿತಿಯ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಎಲ್ಲಿ ಲೋಪದೋಷಣೆ ಮತ್ತು ಎಲ್ಲಿ ಕೆಲಸ ಕಾರ್ಯಗಳು ಆಗಿಲ್ಲ ಅದರ ಬಗ್ಗೆ ಕೂಡ ಟೀಕೆಗಳನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು

ಮಾನ್ಯ ಸದಸ್ಯರುಗಳಿಗೆ ಅಭಿನಂದಿಸುತ್ತೇನೆ. ಏಕೆಂದರೆ, ಕೆಲವೊಂದು ವಿಷಯವನ್ನು ಅವರು ಪ್ರಸ್ತಾಪ ಮಾಡುವಾಗ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಎಲ್ಲೆಲ್ಲಿ ಸರ್ಕಾರ ಹಣ ಬಿಡುಗಡೆ ಮಾಡಿದೆ ಮತ್ತು ನಡೆದಂತಹ ಕೆಲಸದ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಇವತ್ತು ಈ ಬರಗಾಲ ಪರಿಸ್ಥಿತಿಯ ಬಗ್ಗೆ ನಾನು ಮಾತನಾಡಬೇಕಾದರೆ, ಇದು ಸಮಗ್ರವಾಗಿ ನಾವು ತೆಗೆದುಕೊಳ್ಳತಕ್ಕ ಒಂದು ಕಾರ್ಯಕ್ರಮ. ಕೇವಲ ಬರಗಾಲ ಕಾಮಗಾರಿಯನ್ನು ಮಾತ್ರ ಒಂದು ಕಡೆ ಇಟ್ಟು ಉಳಿದಂತಹ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಆಗತಕ್ಕ ಕೆಲಸಗಳನ್ನು ಗಣನೆಗೆ ತೊಗೆದುಕೊಳ್ಳದೆ, ಕೇವಲ ಈ ರಿಲೀಫ್ ವರ್ಕ್ಸ್‌ನಲ್ಲಿ ಏನು ಕೆಲಸವಾಗಿದೆ ಅಷ್ಟು ಮಾತ್ರ ಗಣನೆಗೆ ತೆಗೆದುಕೊಂಡು ಇವತ್ತು ಟೀಕೆ ಟಿಪ್ಪಣಿಗಳನ್ನು ನಮ್ಮ ಮಾನ್ಯ ಮಿತ್ರರು ಮಾಡಿದ್ದಾರೆ. ನಾವು ಬಡ್ಜೆಟ್ಟನ್ನು ರೂಪಿಸುವುವಾಗ ಎಲ್ಲಾ ಇಲಾಖೆಗಳನ್ನು ಗಣನೆಗೆ ತೆಗೆದುಕೊಂಡು ಅವುಗಳ ಅವಶ್ಯಕತೆಗನುಸಾರವಾಗಿ ಈ ಕೆಲಸ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಅದು ಮಾಡುವಾಗ ಯಾವ ಯಾವ ಅಭಿವೃದ್ಧಿ ಇಲಾಖೆಗಳಿವೆ ಅವುಗಳ ಕೆಲಸವನ್ನು ಕೂಡ ಮಾಡಬೇಕು, ಜೊತೆಯಲ್ಲಿ ಅದಕ್ಕೆ ಮಾರಕವಾಗಿ ಎಲ್ಲಿ ಅಭಾವ ಪರಿಸ್ಥಿತಿ ಇರುತ್ತದೋ, ಎಲ್ಲಿ ಅಭಿವೃದ್ಧಿ ಕೆಲಸ ನಡೆಯುತ್ತಿಲ್ಲವೋ ಒಂದು ಅಂತಹ ಕಡೆ ಈ ರಿಲೀಫ್ ವರ್ಕ್ಸ್‌ನ್ನು ತೆಗೆದುಕೊಳ್ಳತಕ್ಕದ್ದು ಅಥವಾ ಅದಕ್ಕೆ ಮಾರಕವಾಗಿ ಮಾಡತಕ್ಕದ್ದು ಸರಿ ಮತ್ತು ಇದೇ ರೀತಿ ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಕೂಡ ಇವೆ. ಅದು ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿದೆ. ಇದನ್ನು ಹೇಳುವಾಗ ವಿರೋಧ ಪಕ್ಷದ ನಾಯಕರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು 130 ತಾಲ್ಲೂಕುಗಳಲ್ಲಿ ಭೀಕರ ಬರಗಾಲ ಪರಿಸ್ಥತಿ ಇದೆ, ಅದರ ಲಿಸ್ಟ್ ಇಲ್ಲ, ಅವು ಯಾವ ತಾಲ್ಲೂಕುಗಳು ಎಂದು ಕೇಳಿದರು. ತಮಗೆ ಗೊತ್ತಿದ್ದ ಹಾಗೆ, ಈ ಚರ್ಚೆಯನ್ನು ಈ ಸದನದಲ್ಲಿ ಮೂರನೇ ಸಾರಿ ಮಾಡುತ್ತಿದ್ದೇವೆ. ಹಿಂದೆ ಚರ್ಚೆಯಾಗುವಾಗ ನಾವು ಇದರ ಬಗ್ಗೆ ಸ್ಪಷ್ಟಪಡಿಸಿದ್ದೇವೆ. ಪ್ರಥಮವಾಗಿ ಹಿಂದೆ ಕೆ.ಹೆಚ್.ಪಾಟೀಲರು ಕಂದಾಯ ಸಚಿವರಾಗಿದ್ದಾಗ ನೂರು ತಾಲ್ಲೂಕುಗಳಲ್ಲಿ ಪಾರ್ಟ್‌ಲಿ 'ಅಫೆಕ್ಟೆಡ್ ಎಂದು ಸ್ಪಷ್ಟಪಡಿಸಿದ್ದರು. ತದನಂತರ ನಾನು ಕೊಡುವಾಗ 114 ತಾಲ್ಲೂಕುಗಳಲ್ಲಿ ಇದೇ ರೀತಿ ಸ್ವಲ್ಪ ಮುಂದುವರಿದಿದೆ ಎಂದು ಪ್ರಸ್ತಾಪ ಮಾಡಿದೆ ಮತ್ತು ಇವತ್ತು 132 ತಾಲ್ಲೂಕುಗಳಲ್ಲಿ ಕೆಲವು ಪಾರ್ಟ್‌ಲಿ ಅಫೆಕ್ಟೆಡ್ ಇದೆ, ಮತ್ತು ವಿಶೇಷವಾಗಿ ಸ್ಕೇರ್ಸಿಟಿ ಅಫೆಕ್ಟೆಡ್ ತಾಲ್ಲೂಕುಗಳು, ಹೋಬಳಿಗಳು, ವಿಲೇಜ್‌ಗಳು ಇವೆ. ಇದು ಯಾವುದಾದರೂ ಒಂದು ಆಧಾರದ ಮೇಲೆ ನಾವು ಇಂಥ ಹಳ್ಳಿ, ಇಂಥ ತಾಲ್ಲೂಕು, ಇಂಥ ಹೋಬಳಿ ಇಂಥ ಜಿಲ್ಲೆ ಡ್ರಾಟ್ ಅಫೆಕ್ಟೆಡ್ ಅಥವಾ ಸ್ಕರ್ಸಿಟಿ ಅಫೆಕ್ಟೆಡ್ ಎಂದು ಹೇಳತಕ್ಕ ಇನ್‌ಗ್ರಿಡಿಯಂಟ್ಸ್ ಇವೆ. ವ್ಯವಸಾಯ ಇಲಾಖೆಯನ್ನು ನಾವು ನೀವು ಆಧಾರ ಇಟ್ಟುಕೊಂಡು ಇವತ್ತು ಮಾತನಾಡತಕ್ಕದ್ದು ಮತ್ತು ಪ್ರತಿಯೊಂದು ಜಿಲ್ಲೆಯಲ್ಲಿ ಮತ್ತು ಪ್ರತಿಯೊಂದು ತಾಲ್ಲೂಕಿನಲ್ಲಿ ಅವರೇಜ್ ರೈನ್‌ಫಾಲ್ ಏನಿದೆ ಮತ್ತು ಆ ತಿಂಗಳಲ್ಲಿ ಮೊದಲು ಎಷ್ಟು ಮಳೆ ಬರುತ್ತಿತ್ತು, ಈ ಸಾರಿ ಎಷ್ಟು ಬಂದಿದೆ ಎಂಬ ಅಂಕಿಅಂಶಗಳನ್ನು ತೆಗೆದುಕೊಂಡು ನಾವು ವಿಚಾರ ಮಾಡುತ್ತೇವೆ. ಇದರ ವಿವರ ಹೇಳುತ್ತಾ ಹೋದರೆ, ಸಾಕಷ್ಟು ಸಮಯ ಆಗಬಹುದು. ಅದಕ್ಕೆ ಒಂದೇ ಒಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಅನೇಕ ಮಾನ್ಯ ಸದಸ್ಯರು ಈ ವಿಷಯದ ಗಂಭೀರತೆಯನ್ನು ಅರ್ಥ ಮಾಡಿಕೊಂಡು ಮಾತನಾಡಿದ್ದಾರೆ. ಕೆಲವು ಕಡೆ ಎಕ್ಸಾಜರೇಷನ್ ಆಗಿರಬಹುದು, ಇಲ್ಲವೆಂದು ನಾನು ಹೇಳುತ್ತಿಲ್ಲ.

ಆದರೆ ನಮ್ಮ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಪ್ರಕಾರ ಕೂಡ ಖರೀಫ್ ಸೀಸನ್‌ನಲ್ಲಿ ಸುಮಾರು 72 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಆಗಿದ್ದು 25 ಹೆಕ್ಟೇರ್‌ನಲ್ಲಿ ಕೆಟ್ಟುಹೋಗಿದೆ. ಉಳಿದದ್ದು ಸಾಧಾರಣವಾಗಿದೆ ಎಂಬ ವರದಿಯನ್ನು ತಾವೂ ನೋಡಿದ್ದೀರಿ. ತದನಂತರ ರಬಿಯಲ್ಲಿ 29 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಆಗಿದ್ದರೆ ಧಾರವಾಡ ಮತ್ತು

ಬಿಜಾಪುರದ ಕೆಲವು ಭಾಗ ಬಿಟ್ಟು ಬಹುಶಃ ಎಲ್ಲಾ ಕಡೆ ಸಮಾಧಾನಕರವಾಗಿದೆ ಎಂಬ ಮಾತನ್ನು ಆಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನವರು ವರದಿಯಲ್ಲಿ ಹೇಳಿದ್ದಾರೆ. ಬಹುಶಃ ಅವರ ವರದಿ ಅನುಸರಿಸಿ ನಾವು ಹೋದರೂ ಕೂಡ ಮತ್ತು ಯಾವ ಒಂದು ಏಜೆನ್ಸಿಗಳಿಗೆ ಇವತ್ತಿನದಿವಸ ನಾವು ನೀವು ಎಲ್ಲರೂ ನಂಬತಕ್ಕದ್ದು ಎಂದರೆ ಅವರಲ್ಲಿ ಕೆಲವು ಸಾರಿ ವ್ಯಾತ್ಯಾಸವೂ ಆಗಿರಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ: ಆ ಇಲಾಖೆಯ ವರದಿ ಇರತಕ್ಕ ಪರಿಸ್ಥಿತಿಗೆ ಅನುಗುಣವಾಗಿದೆಯೋ ಇಲ್ಲವೋ ಎಂಬುದನ್ನು ವಿವರವಾಗಿ ತಿಳಿದುಕೊಳ್ಳುವುದು ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ: ನನಗೆ ಇನ್ನೂ ಅರ್ಥವಾಗಲಿಲ್ಲ ಎಂದರೆ ಯಾರ ಹತ್ತಿರವಾದರೂ ಕುಳಿತು ತಿಳಿದುಕೊಳ್ಳುವುದಕ್ಕೆ ಸಿದ್ದನಿದ್ದೇನೆ. ನೀವು ನಾವು ಎಲ್ಲರೂ ಒಂದು.

ಶ್ರೀ ಕೆ. ಹೆಚ್. ರಂಗನಾಥ್: ಈಗ ರಬಿಯಲ್ಲಿ ಧಾರವಾಡ ಜಿಲ್ಲೆ ಮತ್ತು ಬಿಜಾಪುರ ಜಿಲ್ಲೆಯ ಕೆಲವು ಭಾಗ ಬಿಟ್ಟು ಬಾಕಿ ಕಡೆಗಳಲ್ಲೆಲ್ಲಾ ಚೆನ್ನಾಗಿದೆ ಎಂದು ಹೇಳಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ: ಬಹುಶಃ ಎಂದು ಹೇಳಿದ್ದೇನೆ.

[illegible] ಕೆ.ಹೆಚ್. ರಂಗನಾಥ್: ಬಹುಶಃ ಎಂದು ಹೇಳಿದ್ದೀರಿ. [illegible] ಭಾಗ ಮುಂಗಾರು ಬೆಳೆಯಿಂದ ಮಾತ್ರ [illegible] ಬೆಳೆ ಕೆರೆಯಲ್ಲಿ ನೀರಿದ್ದರೆ ಆಗುತ್ತದೆ, ಇಲ್ಲದೇ [illegible] ಎಲ್ಲಿ ಜೋಳ ಬೆಳೆಯುತ್ತಾರೆ ಅಲ್ಲಿ ಮಾತ್ರ ರಬಿ [illegible] ವ್ಯವಸಾಯ ಇಲಾಖೆಯವರು ವರದಿ ಏನು ಕೊಟ್ಟಿದ್ದಾರೆ [illegible] ಅದರಿಂದ ಸಹಾಯಕವಾಗುವುದಿಲ್ಲ. ಆದ್ದರಿಂದ ಅದನ್ನು ಪುನರ್‌ಪರಿ[illegible] ಮಾಡಬೇಕು. ನಾವು ಈಗ ಮಾರ್ಚ್ ಮೊದಲೇ ವಾರದಲ್ಲಿದ್ದೇವೆ. ಮುಂದೆ ಏಪ್ರಿಲ್ ಮೇ ತಿಂಗಳಲ್ಲಿ ತೊಂದರೆಯಿರುವುದರಿಂದ ಪುನರ್‌ಪರಿಶೀಲನೆ ಮಾಡಿ ಏನು ಕೆಲಸ ಮಾಡುವುದಕ್ಕೆ ಆಗುತ್ತದೆ ಎಂಬುವನ್ನು ನೋಡಬೇಕಾಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ: ಇಲ್ಲಿ ತಾವು ಏನು ಸಮಾಧಾನಕರವಾಗಿದೆ ಎಂದು ಹೇಳಿದಿರಿ ಆ ಮಾತು ತಮ್ಮ ವರದಿಯಲ್ಲಿ ಇಲ್ಲ. ಕೇವಲ ಬಿತ್ತನೆಯಾಗಿದೆ ಎಂಬ ಮಾತನ್ನು ಹೇಳಿದ್ದೀರಿ. ಚಿತ್ರದುರ್ಗಕ್ಕೆ ಬಂದಾಗ ತಾವು ನೋಡಿದ್ದೀರಿ ಬಿತ್ತನೆಯಾದಂಥ ಪ್ರದೇಶದಲ್ಲಿ ಶೇಕಡಾವಾರು 10 ರಷ್ಟೂ ಬೆಳೆ ಇಲ್ಲ ಎಂಬ ರೀತಿಯಲ್ಲಿ ಪರಿಸ್ಥಿತಿ ಇದೆ. ಬಿತ್ತನೆ ಆದ ತಕ್ಷಣ ಬೆಳೆ ಬರುತ್ತದೆ ಎಂಬ ಭಾವನೆಯೇ? ದಯವಿಟ್ಟು ಇದರ ಬಗ್ಗೆ ಆಲೋಚನೆ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ : ಇದೇ ಆಧಾರದ ಮೇಲೆ ಸ್ಟೇಟ್ಮೆಂಟ್ ಇಲ್ಲ ಎಂದು ನಾನು ಹೇಳುತ್ತಿಲ್ಲ. ತಾವು ಹೇಳಿದ್ದನ್ನು ಹಿರಿಯ ಸದಸ್ಯರಾದ ರಂಗನಾಥ್ ಅವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಕೆಲವು ಭಾಗದಲ್ಲಿ ಆಗಿರಬಹುದು, ಇಲ್ಲ ಎಂದು ಹೇಳುವುದಿಲ್ಲ, ಆದರೆ ಅನೇಕ ಸಾರಿ ವರದಿಯ ಆಧಾರದ ಮೇಲೆ ನಾವು ನೀವು ಎಲ್ಲರೂ ಸದನದಲ್ಲಿ ಮಾತನಾಡತಕ್ಕದ್ದು. ಯಾರೂ ಕೂಡ ಇದನ್ನು ಅಲ್ಲಗಳೆಯುವುದಕ್ಕಾಗುವುದಿಲ್ಲ, ನಾನು ಈ ವರದಿಯನ್ನು ಸ್ಪೆಸಿಫಿಕ್ಕಾಗಿ ತರಿಸಿಕೊಂಡಿಲ್ಲ. ನಾನು ಓದಿಬಿಡುತ್ತೇನೆ.

" The total area sown upto the end of Khariff season is 70.15 lakh hectares accounting for 99% of normal khariff area of 70.80 lakh hectares.

Out of the total sown area, an area of 25.66 lakh hectares is affected due to dry-spells and 1.39 lakh hectares due to heavy down pour."

ಅದೇರೀತಿಯಾಗಿ ರಜೆ ಬಗ್ಗೆ ಅವರು ಕೊಟ್ಟಿದ್ದು ಈಗಾಗಲೇ ಹೇಳಿದ್ದೇನೆ. ಕೆಲವು ಭಾಗದಲ್ಲಿ ಮಾತ್ರ ಸಮಾಧಾನಕರವಾಗಿದೆ ಎಂದು ಅವರು ಹೇಳಿದ್ದಾರೆ. ಆದರೆ ಕುಡಿಯುವ ನೀರಿನ ಅಭಾವ ಮಾತ್ರ ಎಲ್ಲಾ ಕಡೆ ಇದೆ ಎಂಬುದನ್ನು ನಾನು ಕೇಳಿದ್ದೇನೆ, ನೋಡಿದ್ದೇನೆ ಮತ್ತು ಅನೇಕ ಜಿಲ್ಲೆಗಳಲ್ಲಿ ಹೋದಾಗ ಎಲ್ಲ ಶಾಸಕ ಮಿತ್ರರು ಮತ್ತು ಸಾರ್ವಜನಿಕರು ರೆಪ್ರೆಸೆಂಟ್ ಮಾಡಿದ್ದಾರೆ. ಅದನ್ನು ನಾನು ಅಲ್ಲ ಗಳೆಯುತ್ತಿಲ್ಲ. ಆದರೆ ಈ ವರದಿಯ ಪ್ರಕಾರ ಹೋದರೂ ಕೂಡ ಭಾಗಶಃ ಅಂದರೆ ಕೆಲವು ಭಾಗದಲ್ಲಿ ಒಂದು ತಾಲ್ಲೂಕಿನಲ್ಲಿ ಒಂದು ಹೋಬಳಿಯಲ್ಲಿ ಹತ್ತು ಹಳ್ಳಿಗಳಲ್ಲಿ ಒಂದು ಹೋಬಳಿಯಲ್ಲಿ ಬಹಳ ವರ್ಸ್ಟ್ ಇರಬಹುದು. ಒಂದು ಹೋಬಳಿಯಲ್ಲಿ ಹತ್ತು ಹಳ್ಳಿಗಳಲ್ಲಿ ಬಹಳ ಕೆಟ್ಟ ಪರಿಸ್ಥಿತಿ ಇರಬಹುದು. ಹೀಗೆ ನಾವು 132 ತಾಲ್ಲೂಕುಗಳ ಲಿಸ್ಟನ್ನು ಮಾಡಿದ್ದೇವೆ.

ಆವರೇಜ್ ಲೆಕ್ಕ್ ಹಾಕಿದರೆ 132 ತಾಲ್ಲೂಕುಗಳಿಗೆ ಲೆಕ್ಕ ಹಾಕಿಕೊಂಡಾಗ 1 ತಾಲ್ಲೂಕಿಗೆ 3 ಲಕ್ಷ ಬರುತ್ತದೆಂದು ಮಾನ್ಯ ಸಿಂಧ್ಯಾ ಅವರು ಹೇಳಿದರು. ಒಂದು ತಾಲ್ಲೂಕಿಗೆ 50 ಸಾವಿರ ಬರುತ್ತದೆ ಎಂದು ಜಾಲಪ್ಪನವರು ಹೇಳಿದರು ಈಗ ಹಣವನ್ನು ಬಿಡುಗಡೆ ಮಾಡಿರುವುದನ್ನು ಲೆಕ್ಕ ಹಾಕಿದರೆ ಒಂದು ತಾಲ್ಲೂಕಿಗೆ ಅವರೇಜ್ 27 ಲಕ್ಷ ರೂಪಾಯಿ ಬರುತ್ತದೆ including employment generation drinking water.

ಶ್ರೀ ಎಂ.ವೈ ಘೋರ್ಪಡೆ: ಕುಡಿಯುವ ನೀರಿನ ಪ್ರಶ್ನೆ ಬಹಳ ಗಂಭೀರವಾಗಿದೆ ಎಂದು ನೀವಾದರೂ ಒಪ್ಪಿಕೊಂಡಿದ್ದೀರಿ. ಇದು ಎಲ್ಲರಿಗೂ ಗೊತ್ತಿದೆ. ಆದರೆ ಇದರ ಬಗ್ಗೆ ಎಷ್ಟು ಖರ್ಚು ಆಗಿದೆ ಎಂದು ಹೇಳಬೇಕು. ಏಕೆಂದರೆ ಜೂಲೈ 16ನೇ ತಾರಿಖು ಸರ್ಕಾರದ ವತಿಯಿಂದ ನಾನು ಕುಡಿಯುವ ನೀರಿನ ಬಗ್ಗೆ ಹೇಳಿಕೆ ಕೊಡುವಾಗ ಸ್ಪಷ್ಟವಾಗಿ ಹೇಳಿದ್ದೇನೆ. ನಮ್ಮ ಬಡ್ಜೆಟ್ಟಿನಲ್ಲಿ 34 ಕೋಟಿ ಅಲ್ಲದೇ ಆಗಿನ ಹಣಕಾಸಿನ ಮಂತ್ರಿಗಳು ಹೇಳಿದ ಪ್ರಕಾರ ಇನ್ನೂ 25 ಕೋಟಿ ಜಾಸ್ತಿ ಮಾಡಿದ್ದೇವೆ ಎಂದರೆ ಒಟ್ಟು ಸುಮಾರು 60 ಕೋಟಿ ರೂಪಾಯಿ ಆ ವರ್ಷದಲ್ಲಿ ಕುಡಿಯುವ ನೀರಿಗೋಸ್ಕರ ಖರ್ಚು ಮಾಡುವುದಕ್ಕೆ ಕಾರ್ಯಕ್ರಮ ಇದ್ದುದು ಅಷ್ಟೇ ಅಲ್ಲ ಅದಕ್ಕೆ ಬೇಕಾದ ಹಣವನ್ನು ಕೂಡಾ ಸ್ಪಷ್ಟವಾಗಿ ಕೊಟ್ಟಿತ್ತು 35 ಕೋಟಿ ಕಾರ್ಯಕ್ರಮದಿಂದ 2,800 ಬೋರ್‌ವೆಲ್‌ಗಳು 608 ಮಿನಿ ವಾಟರ್ ಸಪ್ಲೈ ಸ್ಕೀಮ್‌ಗಳು 638 ಪೈಪ್‌ವಾಟರ್ ಸ್ಕಿಮ್‌ಗಳು ಇಷ್ಟು ಮೊದಲು ಇತ್ತು ಆ ನಂತರ 25 ಕೋಟಿ ಸೇರಿದಾಗ ಈ ಕಾರ್ಯಕ್ರಮಗಳು ಹೆಚ್ಚುಕಡಿಮೆ ಡಬಲ್ ಆಗುವುದಕ್ಕೆ ಸಾಧ್ಯವಾಯಿತು. ಆದಕಾರಣ ಈ ಕಾರ್ಯಕ್ರಮಗಳಿಗೋಸ್ಕರ ನೇರವಾಗಿ 60 ಕೋಟಿ ರೂಪಾಯಿಗಳನ್ನು ಏನು ಕೊಟ್ಟಿದ್ದೆವು ಅದರಲ್ಲಿ ಎಷ್ಟು ಖರ್ಚು ಆಗಿದೆ ಎಷ್ಟು ಬೋರ್‌ವೆಲ್‌ಗಳು ಮಿನಿವಾಟರ್ ಸಪ್ಲೈ ಸ್ಕಿಮ್‌ಗಳು ಪೈಪ್‌ವಾಟರ್ ಸಪ್ಲೈ ಸ್ಕಿಮ್‌ಗಳು ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗಿದೆ ಎನ್ನುವ ಸ್ಪಷ್ಟವಾಗಿ ಹೇಳಬೇಕು. ನಿನ್ನೆ ಪತ್ರಿಕೆಯಲ್ಲಿ ನಾನು ಓದಿದೆ ಇದರ ಬಗ್ಗೆ ಸಾಕಷ್ಟು ತಿಳಿವಳಿಕೆ ಇಲ್ಲ ಎನಿಸುತ್ತದೆ. ಒಬ್ಬ ಮಂತ್ರಿಗಳು ಇದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳಿದರು ಇದು ನನ್ನ ವೈಯಕ್ತಿಕ ಕಾರ್ಯಕ್ರಮ ಅಲ್ಲ ನಾನಾಗಲಿ ಸರ್ಕಾರದ ವತಿಯಿಂದ ಜವಾಬ್ದಾರಿಯಿಂದ ಹೇಳಿದಾಗ ಅದು ವೈಯಕ್ತಿಕವಾದ ಕಾರ್ಯಕ್ರಮ ಆಗುವುದಿಲ್ಲ. ಇದು ಸರ್ಕಾರದ ಕಾರ್ಯಕ್ರಮ ಇಡೀ ಕರ್ನಾಟಕದ ಕಾರ್ಯಕ್ರಮ ಆಗಿತ್ತು ಇದರಲ್ಲಿ ನೀವು ಏನಾದರೂ ಬದಲಾವಣೆ ಮಾಡಿದ್ದರೆ ಅದನ್ನು ಹೇಳಿ. ಆದರೆ ಸಂಪುಟ ಯಾವ ಮಂತ್ರಿಗಳಿಗೂ ಕೂಡಾ

ಇದರ ಬಗ್ಗೆ ಮಾಹಿತಿ ಇಲ್ಲ ಇದು ನಮ್ಮ ಕಾರ್ಯಕ್ರಮ ಅಲ್ಲ ಈ ರೀತಿ ಅರ್ಥ ಬರುವ ಹಾಗೆ ಮಾತಮಾಡುವುದಕ್ಕೆ ಹಕ್ಕಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಈಗ ಬಹಳ ಕಠಿಣ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ನಾನು ಈ ಖಾತೆಯನ್ನು ನಿರ್ವಹಿಸುತ್ತಿದ್ದಾಗ ಎಮರ್ಜೆನ್ಸಿ ಪ್ರೋಗ್ರಾಮನ್ನು ಮಾಡಿ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೆ ಪ್ರತಿಯೊಂದು ತಾಲ್ಲೂಕಿನಲ್ಲಿ 5-10 ಕಡೆ ಎಲ್ಲಿ ಬಹಳಷ್ಟು ತೊಂದರೆ ಇದೆ ಆ ತೊಂದರೆಯನ್ನು ಬೋರ್ವೆಲ್ ಹಾಕಿ ಅಥವಾ ಮಿನಿವಾಟರ್ ಸಪ್ಲೈ ಮಾಡಿ ಯಾವ ರೀತಿಯಲ್ಲಾದರೂ ನಿವಾರಣೆ ಮಾಡಿ ಎಂದು ಹೇಳಿದ್ದೆ ಮತ್ತೆ ಲಾಂಗ್ ಟರ್ಮ್ ಪ್ರೋಗ್ರಾಮ್ ಮಾಡಬೇಕೆಂದೂ ಈ ಬಗ್ಗೆ ಸರ್ವೆ ಪ್ರಾರಂಭ ಮಾಡಬೇಕೆಂದು ಹೇಳಿದ್ದು ಮುಂಬರುವ 5 ವರ್ಷದಲ್ಲಿ ಯಾವ ರೀತಿಯಿಂದ ತೊಂದರೆಯನ್ನು ಸಂಪೂರ್ಣವಾಗಿ ನೀವಾರಣೆ ಮಾಡುವುದಕ್ಕೆ ಸಾಧ್ಯ ಎಂಬ ಬಗ್ಗೆ ಪ್ರೋಗ್ರಾಮ್ ಮಾಡಬೇಕೆಂದು ಹೇಳಿದ್ದೆ ಈ ಎಮರ್ಜೆನ್ಸಿ ಪ್ರೋಗ್ರಾಂ ಏನು ಮಾಡಿತ್ತು ಮತ್ತು ಅದಕ್ಕೋಸ್ಕರ ಏನು ಹಣಕೊಟ್ಟಿತ್ತು ಅದು ಏನಾಯಿತು ಎಂಬುದನ್ನು ಮಾನ್ಯ ಖರ್ಗೆಯವರು ಹೇಳಬೇಕು. ಏಕೆಂದರೆ ಅವರೇ ಬರಗಾಲದ ಬಗ್ಗೆ ಸಾಕಷ್ಟು ಮಾಹಿತಿ ಇದೆ ಅವರಿಗೆ ಈ ಬಗ್ಗೆ ಕಳಕಳಿ ಇದೆ ಆದಕಾರಣ ಈ ಮಾಹಿತಿಯನ್ನು ತರಿಸಿ ಸಭೆಯ ಮುಂದೆ ತಮ್ಮ ಭಾಷಣದಲ್ಲಿ ಹೇಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಆದ್ಯಕ್ಷರೇ ಈಗ ನನ್ನ ಹತ್ತಿರ ಮಾಹಿತಿ ಇರುವ ಪ್ರಕಾರ......

ಶ್ರೀ ಎಂ.ವೈ. ಘೋರ್ಪಡೆ: ಆಮೇಲೆ ೫೦ ಕೋಟಿ ಏನು ಖರ್ಚು ಮಡಬೇಕಾಗಿತ್ತು ಎಷ್ಟು ಖರ್ಚು ಮಾಡಿದ್ದೀರಿ ಮತ್ತು ಹೌಸಿಂಗ್ ಬಗ್ಗೆ 14 ಕೋಟಿ ಇದ್ದದ್ದು ಮತ್ತೆ 15 ಕೋಟಿ ಜಾಸ್ತಿ ಮಾಡಿದ್ದೇವೆ. ಈ 29 ಕೋಟಿ ರೂಪಾಯಿ ಆಗಿದೆ. ಅದರ ಬಗ್ಗೆ ಕೂಡ ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ: ಮಾನ್ಯ ಅಧ್ಯಕ್ಷರೇ ನಾನು ಅವರಲ್ಲಿ ಕ್ಷಮೆ ಕೇಳುತ್ತೇನೆ. ಇಲ್ಲಿ ಮಾನ್ಯ ಸದಸ್ಯರು ಹೌಸಿಂಗ್ ಸ್ಕೀಮ್ ಬಗ್ಗೆ ಹಾಗೂ ಇನ್ನಿತರ ಸವಿಸ್ತಾರವಾದ ಮಾಹಿತಿ ಬಗ್ಗೆ ಕೇಳುತ್ತಿದ್ದಾರೆ. ಬಹುಳಃ 11ನೇ ತಾರೀಖು ಬಡ್ಜೆಟ್ ಮೇಲೆ ಪ್ರಸ್ತಾಪ ಮಾಡುವಾಗ ಸವಿಸ್ತಾರವಾದ ಮಾಹಿತಿ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಅಥವಾ ಹಣಕಾಸಿನ ಮಂತ್ರಿಗಳ ಹತ್ತಿರ ಇರುತ್ತದೆ. ನಾನು ಈ ನಮ್ಮ ಬರಗಾಲ ಕಾಮಗಾರಿಗಳಲ್ಲಿ ಅದರಲ್ಲಿಯೂ ಕುಡಿಯುವ ನೀರನ ವ್ಯವಸ್ಥೆ ಬಗ್ಗೆ ಎಷ್ಟು ಹಣ ಖರ್ಚು ಮಾಡಿದ್ದೇವೆ ಎಷ್ಟು ಹಣ ಬಿಡುಗಡೆ ಮಾಡಿದ್ದೇವೆ ಮತ್ತು ಎಷ್ಟು ಕಾಮಗಾರಿಗಳಿಗೆ ಬಿಡುಗಡೆ ಮಾಡಿದ್ದೇವೆ ಎಂಬ ಮಾಹಿತಿಯನ್ನು ನಾನು ಒದಗಿಸಿಕೊಡಬಹುದು. ಅದಕ್ಕೆ ಸಂಬಂಧ ಪಟ್ಟಂತೆ ನಾನು ಈಗ ಹೇಳುತ್ತೇನೆ. ಉಳಿದಂತಹ ಮಾಹಿತಿಯನ್ನು ಅವರಿಂದ ಅವರು ಪಡೆದುಕೊಳ್ಳಬಹುದು. ನನ್ನ ಹತ್ತಿರವಿರತಕ್ಕಂತಹ ಮಾಹಿತಿಯನ್ನು ನಾನು ಅವರಿಗೆ ಒದಗಿಸಿಕೊಡುತ್ತೇನೆ.

SRI M.Y GHORPADE, I would like to seek your protection. In his earlier remarks the Minister himself has said about it Now about they intergrated programme is the departmental funds and the funds given especially for drought relief all have to be combined together to fight the drought on a war footing and in an integrated manner. He has admitted that the drinking water problems is a crucial matter which he cannot do it. Therefore, as a responsible Minister he should be able to say as it what happend to Rs.60

crores. the physical programmes and financial programmes were specifically chalked out by and specifically anounced by me on the floor of the house on behalf of the Government. This is not a light matter. In every village women have to walk 10-15 miles to get drinking water. Even if they walk they may not get drinking water. It is not the question of lack of fund, but lack of capacity to get it done on a war footing. I don't think Mr. Kharge can escape from the responsibility in replying at least to the drinking water programme that was chalked out. Evern if he does nto choose to give unparticulars on the Hyderabad Karnataka programme i.e. Rs 50 crores with which he is intimately connected he has to give answer to my question.

MR.SPEAKER: The very fact that this August House deliberating on drought conditions prevailing in the state since yesterday indicates the seriousness with which both the opposition and the Ruling party have been apparoaching this subject. Now there are two aspects of the point which we have raise. One is, particular reference to the Hon'ble Minister, i.e. the steps the Government or Karnataka has taken under drought relief operation. The larger question which you referred to is about the accommodation made by the previous Government or the Government order which was issued by the previous Government or the pronouncement made on the floor of the House with reference to additional Rs. 28 crores towards the drinking water supply to villages.

Sri M.Y.GHORPADE: We are entitled to know what happened to that emergency programme.

MR.SPEEKER: Yesterday we came to know as to what happened to the emergency programme.

SRI K.H. RANGANATH: The particular emergency programme that was referred to by the hon'ble member, has it been given up by the Government. Are we to understand like that.

MR.SPEAKER. I thak after he completes his speech and if he does not dialate on this I will give a chance.

SRI R.DAYANANDA RAO:. Sri, Mr. Ghorpade is particular about Rs 60.crores project. What happenced to that Rs.60 crores?

MR. SPEAKER. We are trying to find out. ನಿಮ್ಮದ್ದೇ ಆದ ಧಾಟಿಯಲ್ಲಿ ನೀವು ಹೋಗಿ Then, at the end of your speech if you do not cover the point which he has raised I will call him to call your attention.

MR. SPEAKER. We are trying to find out. ನಿಮ್ಮದೇ ಆದ ಧಾಟಿಯಲ್ಲಿ ನೀವು ಹೋಗಿ Then, at the end of your speech if you do not cover the point which he has raised I will call him to call your attention.

ಶ್ರೀ ಡಿ.ಬಿ. ಚಂದ್ರೇಗೌಡ: ನಮ್ಮ ಕಳಕಳಿ ಏನೆಂದರೆ 60 ಕೋಟಿಯಲ್ಲಿ 6 ಅನ್ನು ಕೈ ಬಿಟ್ಟು ಬಿಟ್ಟಿದ್ದಾರೆ ಬರೀ ಸೈಫನ್ ಉಳಿದಿದೆಯೋ ಎಂದು.

ಎಂ. ಮಲ್ಲಿಕಾರ್ಜುನ ಖರ್ಗೆ: ಕೃಷಿ ಇಲಾಖೆಯ ವರದಿ ಪ್ರಕಾರ ಪರಿಸ್ಥಿತಿ ಒಂದು ತರಹ ಇದೆ. ತದನಂತರ The Department of space, Government of India, National Remote Sensing Agency Hyderabad, ಅವರ ಒಂದು ವರದಿಯನ್ನು ನೋಡಿದರೆ ಅಂದರೆ ಅವರು ಕೊಟ್ಟಿರುವ ಡಿಸ್ಟ್ರಿಕ್ಟ್‌ವೈಸ್ ಡ್ರಾಟ್ ಅಸೆಸ್‌ಮೆಂಟ್ ಏನು ಇದೆ ಅದನ್ನು ಓದಿದರೆ ಎಲ್ಲರೂ ನನ್ನ ಮೈಮೇಲೆ ಬೀಳುತ್ತೀರಿ ಎನ್ನುವ ಭಯ ನನಗಿದೆ.

ಅಧ್ಯಕ್ಷರು ಅದು ಬಹಳ remote sensing ಆಗುತ್ತದೆ ಈಗ Direct sensing operators 224 ಜನರಿದ್ದು why do you want remote sensing?

ಶ್ರೀ ಸಿ. ಬೈರೇಗೌಡ: ಅದನ್ನು ಓದುವುದು ಬೇಡ. ಅದರ ವಿಚಾರ ಸ್ವಲ್ಪ ಮಟ್ಟಿಗೆ ನನಗೂ ಗೊತ್ತಿದೆ. ನಾನು ಕೆಲವು ಅಧಿಕಾರಿಗಳನ್ನು ಭೇಟಿಯಾಗಿ ಇದರ ಸಮಾಚಾರವೇನೆಂದು ಕೇಳಿದೆ ಅದರ ಪ್ರಕಾರ ಈ ವರ್ಷ ಭರ್ಜರಿ ಮಳೆ ಬರುತ್ತದೆಂದು ನನಗೆ ಹೇಳಿದ್ದರು ಮೊನ್ನೆ ಆ ಅಧಿಕಾರಿಗಳು ಸಿಕ್ಕಿದ್ದರು ಅವರನ್ನು ಕೇಳಿದ್ದಕ್ಕೆ ಏನು ಮಾಡುವುದು ಇದು ಆಕಾಶ ಪುರಾಣ ನಮ್ಮದಲ್ಲವೆಂದು ಹೇಳಿದರು ಆದುದರಿಂದ ಈ ಆಕಾಶದ ಪುರಾಣವನ್ನು ನಂಬುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ : ಅದಕ್ಕೆ ಇದು ಬೇಡ

ಅಧ್ಯಕ್ಷರು ಬೇಡ ಬೇಡ ಅದನ್ನು ಫೈಲಿನಲ್ಲಿ ಕಟ್ಟಿಬಿಡಿ. ಅದನ್ನು ಆರ್ಕೈಯಿಸ್‌ಗೆ ಕಳುಹಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ: ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ವರದಿಯನ್ನು ಕೊಟ್ಟಿದ್ದೇನೆ ಡಿಪಾರ್ಟ್‌ಮೆಂಟ್ ಆಫ್ ಸ್ಪೇಸ್‌ನವರು ಸ್ಪೆಸಿಫಿಕ್ ಆಗಿ ಇಂತಹ ಒಂದು ಪ್ರೋಗ್ರಾಮ್‌ನ್ನು ಮಂತ್ಲಿ ರಿಪೋರ್ಟನ್ನ ಕಳುಹಿಸುತ್ತಾರೆ. ಇದು ಒಂದು ರೀತಿ ಇದೆ ಆದರೂ ಕೂಡ ಕುಡಿಯುವ ನೀರಿನ ಪರಿಸ್ಥಿತಿ ಮಾತ್ರ ಬಹಳ ಭೀಕರ ಇದ್ದ ಕಾರಣ ಇವತ್ತು ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅದರಲ್ಲೂ ವಿಶೇಷವಾಗಿ ನಾನು ಈವೊಂದು ಕುಡಿಯುವ ನೀರಿಗಾಗಿ ಸ್ವಲ್ಪ ಆದ್ಯತೆ ಕೊಟ್ಟಿದ್ದೇನೆಂದರೆ ತಪ್ಪಾಗಲಿಕ್ಕಿಲ್ಲ. ತಮ್ಮ ಅಪೇಕ್ಷೆ ಪ್ರಾಕರ ಬಾರದೆ ಇರಬಹುದು ಅಥವಾ ಹೆಚ್ಚಿನ ರೀತಿಯಲ್ಲಿ ಸಹಾಯವಾಗದೆ ಇರಬಹುದು. ಆದರೆ ನಮ್ಮಲ್ಲಿರತಕ್ಕ ಹಣದಲ್ಲಿ ನಾವು ಏನು ಹಣವನ್ನು ಬಿಡುಗಡೆ ಮಾಡಿದ್ದೇವೆ. ಮತ್ತು ಪ್ರತಿಯೊಂದು ಜಿಲ್ಲೆಗೆ ಹೋಗಿ ಅಲ್ಲಿ ಸುಮಾರು ತಾಸು ಎರಡು ತಾಸು ಕೆಲವು ಕಡೆಗಳಲ್ಲಿ ಐದು ತಾಸು ಕುಳಿತು ಸಂಪೂರ್ಣವಾಗಿ ರಿವ್ಯೂ ಮಾಡಿದ್ದೇನೆ. ಡಿಪಾರ್ಟ್‌ಮೆಂಟ್‌ವೈಸ್ ಹಣ ಪ್ರತಿತಿಂಗಳು ಬಿಡುಗಡೆ ಯಾಗಿದೆ. ಇವತ್ತು 60 ಕೋಟಿ ಇರಬಹುದು 70 ಕೋಟಿ ಇರಬಹುದು ಅದರ ಸಂಪ್ಪೂರ್ಣ ವರದಿ ಬಂದಮೇಲೆ ನೋಡೋಣ ಈಗಾಗಲೇ ಹೇಳಿದ್ದೇನೆ. 25 ಕೋಟಿ which was assured to be provided under Rural Water Supply Scheme has not sofar been provided ಎಂದು ಇಲ್ಲಿ ಕೊಟ್ಟಿದ್ದಾರೆ ಆದ್ದುದರಿಂದ ನಾನು ಅದರ ಬಗ್ಗೆ ಹೆಚ್ಚು ಚರ್ಚೆಗೆ ಹೋಗುವುದಿಲ್ಲ. ಸುಮ್ಮನೆ ಕಾಂಟ್ರವರ್ಸಿ ಬೇಡ. ನಾನು ಇದ್ದದನ್ನು ಮಾತನಾಡುತ್ತೇನೆ. ಇವತ್ತು ನನ್ನ ಹತ್ತಿರ ಏನಿದೆ ಅದನ್ನು ಹೇಳುತ್ತೇನೆ.

(ಗೊಂದಲ)

(ವಿರೋಧಪಕ್ಷದ ಮಾನ್ಯ ಸದಸ್ಯರು ನಾಲ್ಕಾರು ಜನ ಒಟ್ಟಿಗೆ ಎದ್ದುನಿಂತು ಮಾತನಾಡುತ್ತಿದ್ದರು ಆದ್ದರಿಂದ ರೆಕಾರ್ಡ್ ಮಾಡಲಾಗಲಿಲ್ಲ.)

ಅಧ್ಯಕ್ಷರು: ಯಾರಾದರೂ ಒಬ್ಬರು ಮಾತನಾಡಿ.

SRI R.V. DESHPANDE: Why the money was not spent?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾನು ಏತಕ್ಕೆ ಹೇಳಿದ್ದೇನೆಂದರೆ ಈಗಾಗಲೇ ಮಾನ್ಯ ಬೈರೇಗೌಡರು ಮತ್ತು ಆರ್.ಡಿ.ಪಿ.ಆರ್. ಮಂತ್ರಿಗಳು ಇಬ್ಬರು ಚರ್ಚೆ ಮಾಡಿಕೊಂಡು ಅದರ ಬಗ್ಗೆ ಸಮಾಧಾನಕರ ಉತ್ತರವನ್ನು ಅವರು ಪಡೆದಿದ್ದಾರೆ. ಅದಕ್ಕೆ ನಾನು ಅದರ ಬಗ್ಗೆ ಪುನಃ ಹೇಳುವುದಿಲ್ಲವೆನ್ನುವ ಮಾತನ್ನು ಹೇಳಿದ್ದೇನೆ. ಈಗ ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೆ 25ಕೋಟಿ ರೂಪಾಯಿ ಕೊಡಲಿಲ್ಲವೆನ್ನುವ ಮಾತನ್ನು ಅವರು ಹೇಳಲಿಲ್ಲ ನಾನು ಹೇಳಿದ್ದೇನೆ. ಒಂದು ಕಿಲುಬು ಕಾಸು ಕೊಟ್ಟಿಲ್ಲ ಎಂಬ ಮಾತನ್ನು ನಾನು ನಿನ್ನೆ ಹೇಳಿದ್ದೇನೆ ಆದರೆ ಮಂತ್ರಿಗಳು ಮಾತ್ರ ಹೇಳಲಿಲ್ಲ ನೋಡುತ್ತೇನೆ ಮಾಡುತ್ತೇನೆಂದು ಹೇಳಿದರು ಈಗ ಮಾನ್ಯ ಮಂತ್ರಿಗಳು ಸ್ಪೆಸಿಫಿಕ್ ಆಗಿ 25 ಕೋಟಿ ರೂಪಾಯಿಯಲ್ಲಿ ಏನೂ ಕೊಡಲಿಲ್ಲವೆಂದು ಹೇಳುತ್ತಿದ್ದಾರೆ.

SRI M.Y.GHORPADE: It is in addition to Rs. 60 Crores & that is an announcement made by both the Finance Minister & myself on behalf of the Govenment and it is a commitment.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮತ್ತೆ 25 ಕೋಟಿ ರೂಪಾಯಿ ಹಣ ಎಲ್ಲಿ ಹೋಯಿತು? ಅದರ ಬಗ್ಗೆ ಹೇಳಬೇಕು. ಹಿಂದಿನ ಮಂತ್ರಿಗಳು ಅಧಿಕಾರದಿಂದ ಹೋದ ತಕ್ಷಣ ಅದು ಎಲ್ಲಿ ಹೋಯಿತು?

ಒಬ್ಬ ಮಾನ್ಯ ಸದಸ್ಯರು: ಅದು ಬರೀ ಕಮಿಟ್‌ಮೆಂಟ್ ಆಗಿತ್ತು ಅಷ್ಟೇ ಹಣ ರಿಲೀಸ್ . ಆಗಿರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅದನ್ನು ನೋಡೋಣ 25ಕೋಟಿ ರೂಪಾಯಿ ಪ್ರಶ್ನೆ ಸಧ್ಯಕ್ಕೆ ಇಲ್ಲ. ಇನ್ನೊಂದು ಪ್ರಶ್ನೆಯನ್ನು ಮಾನ್ಯ ವಿರೋಧಪಕ್ಷದ ನಾಯಕರು ಕೇಳಿದರು ಡೈವರ್ಶನ್ ಆಫ್ ಜವಹರ - ರೋಜ್ಗಾರ್ ಯೋಜನೆ ಸಂವಿಧಾನದ ಆರ್ಟಿಕಲ್ 282 ಪ್ರಕಾರ ಅದು ಕಾಂಟ್ರವರ್ಸನ್ ಆಗುತ್ತದೆ ಆ ಹಣವನ್ನು ಜಿಲ್ಲಾ ಪರಿಷತ್‌ನಿಂದ ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದಾರೆನ್ನುವ ಮಾತನ್ನು ಹೇಳಿದ್ದಾರೆ.ಇದರಲ್ಲಿ ಸ್ಪಷ್ಟವಾಗಿ ನಾವು ಡೈರೆಕ್ಷನ್ ಕೊಟ್ಟಿದ್ದೇವೆ. ಯಾವ್ಯಾವ ಮಂಡಲಗಳಲ್ಲಿ ನಾವು ಹಣವನ್ನು ತೆಗೆದುಕೊಳ್ಳುತ್ತೇವೆ ಆ ಮಂಡಲಗಳಲ್ಲಿಯೇ ಖರ್ಚು ಮಾಡಬೇಕೆಂದು ಜಿಲ್ಲಾಧಿಕಾರಿಗಳವರಿಗೆ ಹೇಳಿದ್ದೇವೆ. ಅಲ್ಲಿನ ಮಂಡಲಪಂಚಾಯಿತಿ ಸದಸ್ಯರು ಲೋಕಲ್ ರೆಪ್ರಸೆಂಟಿಟೀವ್ ಇರುತ್ತಾರೆ. ನಾವೊಂದು ಸರ್ಕ್ಯುಲರ್ ಸಹ ಇಷ್ಯು ಮಾಡಿದ್ದೇವೆ. ಅದು ಈ ರೀತಿ ಇದೆ.

"The Deputy Commissioners should ensure the fulfilment of primery objectives of JRV viz., to provide employment to the local unemployed and under employed persons in rural areas who are below the poverty line: preferance shall be given to SCs and STs for employment in the work taken up out of JRV funds; 30% of the employment opportunities will be reserved for women as per the guidelines only; a minimum of 60% of the funds given

should be spent on wage component; The minimum wages fixed under JRV should be paid and foodgrains not exceeding 1.5kg per man day which is available at subsidised rates i.e., 12.3, JRY manual as modified from time to time may be paid to the workers by intending and procuring the same from the food Corporation of Indaa as per the procedure laid down under:

The fund should be spent from the respective Mandal Panchayats who should be involved in the planning of works and got executed departmentally through ZP or the Govt. Machinery: Mandal-wise allocation of funds based on JRV norms should be obtained from the DCs from the respective ZPs Chief Secretaries who have already been suitably directed in this behalf.

ಮೊನ್ನೆ ತಾನೇ 28ನೇ ತಾರಿಖು ಇದರ ಬಗ್ಗೆ ಕ್ಲಾರಿಫಿಕೆಶನ್ ಅನ್ನು ನಾವು ಎಲ್ಲ ಜಿಲ್ಲಾಪರಿಷತ್ತುಗಳ ಸೆಕ್ರೆಟರಿಗಳಿಗೆ ಕಳಿಸಿದ್ದೇವೆ. ಅದಕ್ಕೆ ಡೈವರ್ಷನ್ ಆಫ್ ಫಂಡ್ಸ್ ಆಗಲಿ ಅಥವಾ ಮಿಸ್‌ಯೂಸ್ ಆಗತಕ್ಕಂಥಾದ್ದು ಆಗಲೀ ಅಥವಾ..........

SRI D.B CHANDRE GOWDA: My point was not that. Basically in principle the money,s given under Article 282 under the direction of Article 256, this Government has no authority to withdraw that money. That was my point. ಆಮೇಲೆ ಅವರು ಏನು ಮಾಡಿದ್ದಾರೆ ಎನ್ನತಕ್ಕದ್ದು ನನ್ನ ಪ್ರಶ್ನೆಯಲ್ಲ.

On the same issue, the matter has been taken up in the Hon'ble High Court of Karnataka and I am told the High Court of Karnataka in its wisdom has thought it fit to admit the writ petition. It is the question of authority; It is the question of authority in principle. ನೀವು ಈ ರೀತಿ ವೆಚ್ಚ ಮಾಡಿದ್ದೇವೆ, ಡೆಪ್ಯುಟಿ ಕಮಿಷನರಿಗೆ ಕೋಟ್ಟಿದ್ದೇವೆ ಅಂದರೆ ನಿಮಗೆ ಅಧಿಕಾರವಿಲ್ಲ. The money is earmarked under the directive given under Article 256 and the Govt. has no authority to withdraw that money. That is my fundamental question. If they have withdrawn, it is wrong. It is a gross mis-utilisation of the finances. ಇದರ ಬಗ್ಗೆ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: 31, 3ರಲ್ಲಿ At the district level......

ಶ್ರೀ ಡಿ.ಬಿ. ಚಂದ್ರೇಗೌಡ: ನಿಮಗೆ ಜೆ.ಆರ್.ವೈ ಫಂಡ್ಸ್‌ನ್ನು ಯಾವ ಕಾರಣಕ್ಕಾಗಿ ರಾಜ್ಯಾಂಗದ ವಿಧಿವಿಧಾನಗಳಿಗೆ ಅನುಸಾರವಾಗಿ ಕೊಟ್ಟಿದ್ದಾರೆ, ಆ ಹಣವನ್ನು ವಿತ್‌ಡ್ರಾ ಮಾಡತಕ್ಕಂಥ ಅಧಿಕಾರ ನಿಮಗೆ ಇಲ್ಲ ಎನ್ನುವುದು ನನ್ನ ಮೂಲಭೂತವಾದ ಪ್ರಶ್ನೆ.

ಶ್ರಿ ಎಂ. ಮಲ್ಲಿಕಾರ್ಜುನ ಖಾರ್ಗೆ: ಉಲ್ಲಂಘನೆಯನ್ನು ನಾವು ಮಾಡಿಲ್ಲ. ಜಿ. ಆರ್.ವೈ ಮ್ಯಾನ್ಯುಯಲ್ ಪ್ರಕಾರ

"At the district level, the entire work relating to co-ordination, review and supervision and monitoring of the programmes will be the responsibility of the District Collectors or the Dt.Rural Development Agencies or the ZPs as decided by the State Govt."

So, the State Govt. has decided now to implement this JRV programme through DCs in the same mandal and the same amount will be spent in the same Mandal. ಆದುದರಿಂದ ಇದು ಉಲ್ಲಂಘನೆ ಆಗುವುದಿಲ್ಲ. ಆದ್ದರಿಂದ ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

SRI H.EKANTHAIAH: I am on a point of order. ಮಾನ್ಯ ಮಂತ್ರಿಗಳು ಇರುವಂಥ ವಿಚಾರಗಳನ್ನು ಹೇಳದೆ ಇಲ್ಲದೇ ಇರುವ ವಿಚಾರಗಳನ್ನು ತಾವು ಆರೋಪಿಸಿಕೊಂಡು ಹೇಳುತ್ತಿದ್ದಾರೆ. ಇಂಪ್ಲಿಮೆಂಟಿಂಗ್ ಎಜೆನ್ಸಿಯನ್ನು ಜಿಲ್ಲಾಪರಿಷತ್‌ನವರಿಗೆ ಆಗಲೀ ಅಥವಾ ಜಿಲ್ಲಾ ಕಲೆಕ್ಟರುಗಳಿಗೆ ಆಗಲಿ ಡಿ.ಆರ್.ಡಿ.ಎಸ್.ಗೆ ಕೊಟ್ಟಿಲ್ಲ.

Monitoring is quite different from implementation. I would like to read the very sentence which is in the guidelines

"The DRDS funds will be distributed by the DRDS, ZPs...........

I will read 31, which reads thus:

"At the district level, the programme will be implemented through Village panchayats.

So, the implementation is through the Village Panchayats. ಲೋಯೆಸ್ಟ್ ಲೆವೆಲ್‌ನಲ್ಲಿ ಯಾವುದು ಎಲೆಕ್ಟೆಡ್ ಬಾಡಿ ಇರುತ್ತದೆ.

That is called Village panchayat. Here it is the Mandal. At the district level, what they way is, the entire work relating to the co-ordination, reviews, supervision and monitoring, they never say with respect to the implementation. It comes in the next sentence.

"The DRDSs, Zilla Parishads will nave over-all responsibility for supervision and monitoring the implementation of the programmes. So, DRDs and zilla parishad, not the collection. At the village level it it the village panchayat. Therefore,what they say is not correct.

ಅಧ್ಯಕ್ಷರು: ನಿಮ್ಮ ಗೈಡ್‌ಲೈನ್ಸ್ ಪ್ರಕಾರ ಕಲೆಕ್ಟರನ್ನು ಬೈಪಾಸ್ ಮಾಡಿದ್ದಾರೆ.

SRI H. EKANTAIAH: He has no role to play with respect to the implementation of the programme at the village level.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾನು ಮುಂಚೆಯೇ ಹೇಳಿದ್ದೆ. ನಮ್ಮ ಎಲ್ಲಾ ರಿಲೀಫ್ ಕಾಮಗಾರಿಗಳು, in support of regular programmes. ಎಲ್ಲಿ ಅವಶ್ಯಕತೆ ಇದೆ. ಅದನ್ನು ಕಂಡು ಈ ಒಂದು ಡೀವಿಯೇಷನ್ ಕೆಲವುಕಡೆ ಮಾಡಿದ್ದೇವೆ, ಮಾಡಿಲ್ಲ ಎನ್ನತಕ್ಕಂಥ ಮಾತು ಇದರಲ್ಲಿ ಇಲ್ಲ. ಏಕೆಂದರೆ, ಸರ್ಕಾರಿ ಆದೇಶವನ್ನು ಇಷ್ಯೂ ಮಾಡಿದ್ದೇವೆ, ಎಲ್ಲರಿಗೂ ಕಾಪಿ ಕೊಟ್ಟಿದ್ದೇವೆ ಟೆಲೆಕ್ಸ್ ಮೆಸೇಜ್ ಕೊಟ್ಟಿದ್ದೇವೆ. ಇದರಲ್ಲಿ ರಹಸ್ಯ ಇಲ್ಲ. ಉದಾಹರಣೆಗೆ ಒಂದು ಪಂಚಾಯ್ತಿಯಲ್ಲಿ ಕೆಲಸಮಾಡಬೇಕು ಎಂದಾಗ ಯಾವುದಾದರೊಂದು ಫಂಡ್ ತೆಗೆದುಕೊಂಡು ಕೆಲಸ ಮಾಡತಕ್ಕ ಅವಶ್ಯಕತೆ ಇದೆ. ಈಗಾಗಲೇ ನಾನು ಮೊದಲೇ ಹೇಳಿದ ಹಾಗೆ ಮೈನರ್ ಇರಿಗೇಷನ್‌ನಿಂದ ಅನ್‌ಸ್ಪೆಂಟ್ ಮನಿ ತೆಗೆದುಕೊಂಡು ಕುಡಿಯುವ ನೀರಿಗೆ ಸಹಾಯ ಮಾಡಿದ್ದೇವೆ. ಕೈಗಾರಿಕೆಗಳಿಂದ ಒಂದು ಕೋಟಿ ರೂಪಾಯಿ ತೆಗೆದುಕೊಂಡು ಕುಡಿಯುವ ನೀರಿಗೆ ಸಹಾಯ ಮಾಡಿದ್ದೇವೆ. ಜವಹರ್ ರೋಜಗಾರ್ ಯೋಜನೆಯ

ಮೂಲ ಉದ್ದೇಶ, ಮುಖ್ಯವಾದ ಗುರಿ ಹಳ್ಳಿಗಳಲ್ಲಿ ಕೆಲಸ ಕೊಡುವುದು ಇದನ್ನು ಸಾಧಿಸಬೇಕೆಂಬ ಉದ್ದೇಶದಿಂದ ಬರಗಾಲ ಯಾವ ಮಂಡಲದಲ್ಲಿ ಇದೆ ಅಲ್ಲಿ ಖರ್ಚು ಮಾಡಿ ಎಂದು ಹೇಳಿದ್ದೇವೆ. ಎಂಪ್ಲಾಯ್‌ಮೆಂಟ್ ಒರಿಯಂಟೆಡ್ ವರ್ಕ್ಸ್ ಏನಿತ್ತು ಉದಾಹರಣೆಗೆ ಶಾಲಾ ಕಟ್ಟಡಗಳು ಇರಬಹುದು ಸೇತುವೆ ಕಟ್ಟಿಸುವುದು ಇರಬಹುದು ಅಥವಾ ಡ್ರೈನೇಜ್ ಇರಬಹುದು ಇವುಗಳನ್ನು ಸ್ವಲ್ಪಮಟ್ಟಿಗೆ ತಡೆಹಿಡಿದು ಉಳಿದಂಥ ರೋಡ್ ಕೆಲಸಗಳು ಮತ್ತಿತರ ಕೆಲಸಗಳು ಅಂದರೆ ಹೆಚ್ಚು ಜನರಿಗೆ ಕೆಲಸಕಾರ್ಯವನ್ನು ಕೊಡತಕ್ಕ ಕೆಲಸಗಳನ್ನು ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಇದಕ್ಕಾಗಿ ನೀವು ಆ ಪ್ಲಾನನ್ನು ಬದಲಾವಣೆ ಮಾಡಿಕೊಳ್ಳಿ ಎನ್ನುವುದೇ ನಮ್ಮ ಮುಖ್ಯ ಉದ್ದೇಶ ಜನರಿಗೆ ಕೆಲಸ ಕೊಡಬೇಕೆಂಬ ಗುರಿಯಿಂದ ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ: ಇದಕ್ಕೆ ನಿಮಗೆ ಅಧಿಕಾರ ಇದೆಯೇ ಎಂದು ಪ್ರಶ್ನೆ ಮಾಡುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಮ್ಮ ಅಧಿಕಾರ ವ್ಯಾಪ್ತಿಯಲ್ಲೆ ನಾವು ಮಾಡಿದ್ದೇವೆ. ಅದು ಕಾನೂನುಬಾಹಿರವಾಗಿದೆ ಎಂದು ತಾವು ಕೋರ್ಟಿನಲ್ಲಿ ಕೇಸ್ ಹಾಕಿ ನೋಡೋಣ.

ಶ್ರೀ ಹೆಚ್.ಏಕಾಂತಯ್ಯ: ಅಷ್ಟಾದರೂ ತಾವು ಒಪ್ಪಿಕೊಳ್ಳುತ್ತೀರಲ್ಲ

MR.SPEAKER: He says that there is a diversion.

SRI M. MALLIKARJUN KHARGE: I admit that there is a diversion.

MR. SPEAKER: Diversion is done consciously.

SRI MALLIKARJUN KHARGE: There is diversion in the interest of the public.

MR. SPEAKER: Keeping larger interests of the society, there is diversion.

SRI M.MALLIKARJUNA KHARGE: It is according to the guidelines.

ಜವಹರ್ ರೋಜಗಾರ್ ಯೋಜನೆ ಗೈಡ್‌ಲೈನ್ಸ್ ಏನಿದೆ ಅದರ ಪ್ರಕಾರ ಮಾಡಿದ್ದೇವೆ ಎನ್ನುವುದು ನಮ್ಮ ವಾದ, ಇಲ್ಲ ಎನ್ನುವುದು ಅವರ ವಾದ. ಆದಕ್ಕೆ ಈಗಾಗಲೇ ಜಿಲ್ಲಾಪರಿಷತ್ತಿನ ಕೆಲವು ಅಧ್ಯಕ್ಷರು ಕೋರ್ಟಿಗೆ ಹೋಗಿದ್ದಾರೆ ಅಲ್ಲಿಂದ ಏನು ಬರುತ್ತದೆಂದು ಕಾದು ನೋಡೋಣ. ಅಲ್ಲಿ ಏನು ಬರುತ್ತದೋ ಅದರ ಮೇಲೆ ತೀರ್ಮಾನ ಮಾಡೋಣ ಎರಡನೆಯದಾಗಿ, ಪ್ರತಿಯೊಂದು ಜಿಲ್ಲೆಗೂ ತಾವು ಏನು ಕೊಟ್ಟಿದ್ದೀರಿ ಇಷ್ಟು ಭೀಕರವಾದ ಪರಿಸ್ಥಿತಿ ಇದೆ......

ಶ್ರೀ ಕೆ. ಲಕ್ಕಪ್ಪ: ಜಿಲ್ಲಾಪರಿಷತ್ತಿನವರು ಚಾರ್ಜು ಮಾಡುತ್ತಿದ್ದಾರೆ.

zilla parishads have not spent money in accordance with the zilla parishad Act. If that is violated what is the course open to us? ಶ್ರೀ ವಾಟಾಳ್ ನಾಗರಾಜ್: ಮಾನ್ಯ ಲಕ್ಕಪ್ಪನವರೇ ತಮ್ಮ ಕುರ್ಚಿಗೆ ಹೋಗಿ ಮಾತನಾಡಿ.

SRI K.LAKKAPPA: Ther is fundamental violation MR. SPEAKER: You are fundamentally violating

(Hon'ble member went to his seat)

MR.SPEAKER: Now you are in order.

SRI K LAKKAPPA: What is the course open to the Government? It is not a diversion or misapplication.It is only using of the funds by the Government for the betterment of the people and it should not be

MR.SPEAKER: For the people by the Government.

SRI K.LAKKAPPA: If that is not done, then we have to supersede the zilla Parishads. Are they going to accept that/ most of the zilla parsieds which are under your control they have not spent the noney. They have misused the money, abused the money.

MR.SPEAKER: Abused?

(ಗೊಂದಲ)

SRI K.LAKKAPPA: Yes Government has a repost that there is misuse of funds.

ಶ್ರೀ ಎಲ್.ಆರ್. ಶಿವರಾಮೇಗೌಡ: ನಮ್ಮ ಜಿಲ್ಲೆಯಲ್ಲಿ ಹಣ ಖರ್ಚಾಗದೇ ವಾಪಸ್ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ: ಒಂದು ಪಕ್ಷ ಖರ್ಚು ಮಾಡದೇ ಇದ್ದರೂ ಸಹ ಆ ಹಣವನ್ನು ಖರ್ಚು ಮಾಡುವುದಕ್ಕೆ ಇವರಿಗೆ ಅಧಿಕಾರ ಇಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಈಗಾಗಲೇ ಹೇಳಿದಹಾಗೆ ಅನೇಕ ಕಡೆಗೆ ಹಣ ಬಿಡುಗಡೆ ಮಾಡಿದ್ದೇವೆ. ಬೆಂಗಳೂರು ಅರ್ಬನ್ ಏರಿಯಾಕ್ಕೆ ಸುಮಾರು 60 ಲಕ್ಷ ರೂಪಾಯಿ ನಾವು ಬಿಡುಗಡೆ ಮಾಡಿದ್ದೇವೆ. ಮತ್ತು ಬೆಂಗಳೂರು ರೂರಲ್‌ಗೆ ಸುಮಾರು ಒಂದು ಕೋಟಿ ನಲವತ್ತೇಳು ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಬೇಕಾದರೆ ಬ್ರೈಫರ್ಕೇಟ್ ಮಾಡಿ ಹೇಳುತ್ತೇನೆ.

Bangalore Rural District-22 lakhs under C.R.F. NRWS 26 lakhs plan funds 10 lakhs, C.R.F.(Employment Generation) 33 lakhs,

JRYF - 53 lakhs. Total 147 lakhs. Kolar 272 lakhs Tumkur-2 crores 32 lakhs, Chitradurga-1crores 92 lakhs, Shumoga-1crore 78 lakhs, Mysore 3 crores 18 lakhs, Total funds released on various heads including JRYF for scarcity relief works

Mandya - 189 lakhs, Chikkamangalur - 153 lakhs, Hassan -2 crores 13 lakhs, Kodagu - 12 lakhs, Dakshina Kannada - 48 lakhs, Gulbrga - 2 crores 74 lakhs, Bidar - 99 lakhs, Raichur 199 lakhs, Bellary - 130 lakhs Belgaum 159 lakhs, Bijapur - 222 lakhs, Dharwad 371 lakhs, Uttara Kannada - 39 lakhs, Bangalore water Supply - 50 lakhs, Divisional Commissioners for drinking water - 38 lakhs. Total 35 crores 99 lakhs.

ಎಂದರೆ ಹೆಚ್ಚು 36 ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಇದು ಅಲ್ಲದೆ ಇದಕ್ಕೆ ಪೂರಕವಾಗಿ ಬೇರೆ ಕೆಲಸ ಕಾರ್ಯಗಳನ್ನು ಸರಕಾರ ಕೈಗೊಂಡಿದೆ. ನಿಮ್ಮ ಮಾನ್ಯ ಸದಸ್ಯ ಮಿತ್ರರಾದ ಲಕ್ಕಪ್ಪನವರು ಹೇಳಿದರು. ಅನೇಕ

ಜಿಲ್ಲಾ ಪರಿಷತ್ತುಗಳಿಂದ ನಾವು ವರದಿಯನ್ನು ತರಿಸಿಕೊಂಡಿದ್ದೇವೆ. ಜಿಲ್ಲಾ ಪರಿಷತ್ತುಗಳಲ್ಲಿ ಸಾಕಷ್ಟು ಹಣ ಇದೆ. ಅವರೂ ಕೂಡಾ ಈ ಬರಗಾಲ ಪರಿಸ್ಥಿತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಬರಗಾಲದಲ್ಲಿ ನ್ಯಾಚುರಲ್ ಕ್ಯಲಾಮಿಟಿ ಫಂಡ್‌ನಲ್ಲಿ ಬರುವಷ್ಟಕ್ಕೆ ಮಾತ್ರ ಸಿಮಿತವಾಗದೇ ಕಷ್ಟ ಕಾಲದಲ್ಲಿ ಅವರಿಗೆ ಏನು ಸರಕಾರ ಹಣ ಒದಗಿಸಿಕೊಟ್ಟಿದೆ ಕೇಂದ್ರ ಸರಕಾರವಾಗಲೀ ರಾಜ್ಯ ಸರಕಾರವಾಗಲಿ ಏನು ಕೊಟ್ಟಿದೆ ಈ ಒಂದು ಇತಿಮಿತಿಯಲ್ಲೂ ಕೂಡಾ ಅವರು ನಮ್ಮ ಕೆಲಸ ಮಾಡಬೇಕಾಗುತ್ತದೆ ಅದಕ್ಕೆ ಅವರು ಕೆಲವು ಕಡೆ ಏನು ಮಾಡಿದ್ದಾರೆ ಎಂದು ತಮ್ಮ ಮುಂದೆ ಸ್ಪಷ್ಟಪಡಿಸಬೇಕಾದರೆ ಅವರ ಓಪನಿಂಗ್ ಬ್ಯಾಲೆನ್ಸ್‌ನ್ನು ನಾನು ಇವತ್ತಿನದಿವಸ ಹೇಳುತ್ತೇನೆ.

1.4.90ಕ್ಕೆ ಜಿಲ್ಲಾ ಪರಿಷತ್ತುಗಳ ಬಳಿ ಖರ್ಚಾಗಿದೇ ಇರತಕ್ಕಂಥ ಡ್ರಾ ಮಾಡಿ ಇಟ್ಟುಕೊಂಡಿರತಕ್ಕಂಥ ಹಣ 28 ಕೋಟಿ 83 ಲಕ್ಷ ರೂಪಾಯಿಗಳು.

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಆಗಲೇ ಸುಮಾರು 50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದರು. ಅವರು ಹೇಳಿದಂತಹ ಅಂಕಿ ಅಂಶಗಳನ್ನು ನಾವೇನಾದರೂ ನಂಬಿಬಿಟ್ಟರೆ ಆಶ್ಚರ್ಯವಾಗುತ್ತದೆ. ಸಾಮಾನ್ಯವಾಗಿರತಕ್ಕಂಥ ಕಾರ್ಯಕ್ರಮಗಳ ಜೊತೆಗೆ ಸೇರಿಸಿ ಮಾಡಿರತಕ್ಕಂಥದ್ದು......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಸ್ವಲ್ಪ ಕೇಳಿ

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾನು ಈ ಸದನದ ಗಮನಕ್ಕೆ ತರುವುದೇನೆಂದರೆ ತಾವು ಎಲ್ಲಿ ಹಣ ಇಲ್ಲ ಎಂದು ಹೇಳಿದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನ್ಯಾಚುರಲ್ ಕೆಲಾಮಿಟಿಸ್ ಫಂಡ್‌ನಲ್ಲಿ ಹಣದ ಕೊರತೆ ಇರಬಹುದು. ಅದಕ್ಕೆ ನಾನು ಸಾಧ್ಯವಾದ ಮಟ್ಟಿಗೆ ಕೊರತೆಯನ್ನು ನೀಗಿಸಬೇಕು ಸಾಧ್ಯವಾದ ಮಟ್ಟಿಗೆ ಹಣಪೂರೈಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ನಾನು ಮಾಡುತ್ತೇನೆ ಆದರೆ ಪ್ರತಿಯೊಂದು ಜಿಲ್ಲೆಯಲ್ಲಿ ಏನು ಹಣ ಇದೆ ಮತ್ತೆ ನಾವು 9 ಕೋಟಿ 7 ಲಕ್ಷ ರೂಪಾಯಿಗಳನ್ನು ಮತ್ತೆ ಕೊಟ್ಟಿದ್ದೇವೆ. ಇಷ್ಟೆಲ್ಲಾ ಕೂಗು ಕೇಳಿ ಬರುತ್ತಿದೆ. ಅದಕ್ಕೆ ನಾನು ಒಂದು ಮಾತು ಹೇಳುತ್ತೇನೆ. ದಿನಾಂಕ 1-4-90ರಲ್ಲಿ ಜವಹರ ರೋಜಗಾರ್ ಯೋಜನೆಯಲ್ಲಿರತಕ್ಕ ಹಣ ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್‌ನಲ್ಲಿ 1 ಕೋಟಿ 20 ಲಕ್ಷ ರೂಪಾಯಿಗಳ ಸೇವಿಂಗ್ಸ್ ಆಗಿದೆ. ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್‌ನಲ್ಲಿ 35 ಲಕ್ಷ ರೂಪಾಯಿಗಳು. ಕೋಲಾರ ಜಿಲ್ಲೆಯಲ್ಲಿ 2 ಕೋಟಿ 65 ಲಕ್ಷ ರೂಪಾಯಿಗಳು ತುಮಕೂರು ಜಿಲ್ಲೆಯಲ್ಲಿ 2 ಕೋಟಿ 2 ಲಕ್ಷ ರೂಪಾಯಿಗಳು, ಚಿತ್ರದುರ್ಗ ಜಿಲ್ಲೆಯಲ್ಲಿ 1 ಕೋಟಿ 97 ಲಕ್ಷ ರೂಪಾಯಿಗಳು, ಶಿವಮೊಗ್ಗ ಜಿಲ್ಲೆಯಲ್ಲಿ 33 ಲಕ್ಷ ರೂಪಾಯಿಗಳು, ಮೈಸೂರು ಜಿಲ್ಲೆಯಲ್ಲಿ 2 ಕೋಟಿ 85 ಲಕ್ಷ ರೂಪಾಯಿಗಳು ಮಂಡ್ಯ ಜಿಲ್ಲೆಯಲ್ಲಿ 93 ಲಕ್ಷ ರೂಪಾಯಿಗಳು ಹಾಸನ 62 ಲಕ್ಷ ರೂಪಾಯಿಗಳು, ಚಿಕ್ಕಮಂಗಳೂರು ಜಿಲ್ಲೆಯಲ್ಲಿ 34 ಲಕ್ಷ ರೂಪಾಯಿಗಳು ಕೊಡಗು ಜಿಲ್ಲೆಯಲ್ಲಿ 31 ಲಕ್ಷ ರೂಪಾಯಿಗಳು, ದಕ್ಷಿಣ ಕನ್ನಡ ಜಿಲ್ಲೆಯಲ್ಲ 1 ಕೋಟಿ ರೂಪಾಯಿಗಳು, ಬೆಳಗಾಂ ಜಿಲ್ಲೆಯಲ್ಲಿ 2 ಕೋಟಿ 58 ಲಕ್ಷ ರೂಪಾಯಿಗಳು, ಬಿಜಾಪುರ ಜಿಲ್ಲೆಯಲ್ಲಿ 3 ಕೋಟಿ 37 ಲಕ್ಷ ರೂಪಾಯಿಗಳು, ಧಾರವಾಡ ಜಿಲ್ಲೆಯಲ್ಲಿ 1 ಕೋಟಿ 92 ಲಕ್ಷ ರೂಪಾಯಿಗಳು, ಉತ್ತರ ಕನ್ನಡ ಜಿಲ್ಲೆಯಲ್ಲಿ 33 ಲಕ್ಷ ರೂಪಾಯಿಗಳು, ಗುಲ್ಬರ್ಗ ಜಿಲ್ಲೆಯಲ್ಲಿ 2 ಕೋಟಿ 44 ಲಕ್ಷ ರೂಪಾಯಿಗಳು, ರಾಯಚೂರು ಜಿಲ್ಲೆಯಲ್ಲಿ 2 ಕೋಟಿ 90 ಲಕ್ಷ ರೂಪಾಯಿಗಳು, ಬಳ್ಳಾರಿ ಜಿಲ್ಲೆಯಲ್ಲಿ ನಿಲ್, ಬೀದರ್ ಜಿಲ್ಲೆಯಲ್ಲಿ 64 ಲಕ್ಷ ರೂಪಾಯಿಗಳು. As on 1-4-1990 there was amount of Rs. 28 crores 83 lakhs available with them under the Jawahar Rozgar yojana which was unspent as on that day Rs 66

crores. That is the amount released upto 31-1-1991 out of the total allocation of Rs. 106 crores 88 lakhs. Rs. 66 crores plus Rs. 28 crores totally there was an amount Rs.95 crores 16 lakhs and the amount they were able to spend upto 31-1-1991 is Rs 59 crores.

ಶ್ರೀ ಹೆಚ್. ಏಕಾಂತಯ್ಯ: ಅದಕ್ಕೆ ಕಾರಣ ಏನು ಸ್ವಾಮಿ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಸ್ವಲ್ಪ ಗಲಾಟೆ ಮಾಡಬೇಡಿ. ನಾನು ಉತ್ತರ ಹೇಳುವ ತನಕ ಸ್ವಲ್ಪ ಸಮಾಧಾನದಿಂದ ಕೇಳಿ. ಜವಹರ ರೋಜ್‌ಗಾರ್ ಯೋಜನೆಯಲ್ಲಿ ಎಂಪ್ಲಾಯ್‌ಮೆಂಟ್ ಜನರೇಶನ್‌ಗೋಸ್ಕರ ಅಂದರೆ ಜನಗಳಿಗೆ ಒದಗಿಸುವ ಉದ್ದೇಶದಿಂದ ಈ ಯೋಜನೆಯನ್ನು ಮಾಡಿದ್ದೇವೆ. ಈ ಹಣ ಜವಹರ್ ರೋಜ್‌ಗಾರ್ ಯೋಜನೆ ಕೆಳಗೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಇದೆ. ಇದಕ್ಕೆ ಪೂರಕವಾಗಿ ನಾವು ಸಹ ಹಣ ಬಿಡುಗಡೆ ಮಾಡಿದ್ದೇವೆ. ಆದರೂ ಸಹ ಇವರು ಹಣದ ಕೊರತೆ ಇದೆ ಎಂದು ಹೇಳುತ್ತಿದ್ದಾರೆ. ಜವಹರ್ ರೋಜ್‌ಗಾರ್ ಯೋಜನೆಯಲ್ಲಿ ಕೆಲಸ ಕೊಡುವ ದೃಷ್ಟಿಯಿಂದ ಮಾಡಿದ್ದೇವೆ. ಆದರೂ ಕೂಡ ಒಂದು ಕೂಗು ಎಲ್ಲಾ ಕಡೆ ಕೇಳಿ ಬರುತ್ತಿದೆ. ನಾನು ಹೋದ ಕಡೆ ಎಲ್ಲಾ ಜಿಲ್ಲಾಧಿಕಾರಿಗಳ ಜೊತೆಯಲ್ಲಿ [illegible] ಮಾಡುವಾಗ ಮುಖ್ಯ ಕಾರ್ಯದರ್ಶಿಗಳು ಜೊತೆ ರಿವ್ಯೂ ಮಾಡುವಾಗ [illegible] ಜಿಲ್ಲಾ ಪರಿಷತ್ತುಗಳ ಸ್ಥಾಯಿ ಸಮಿತಿಗಳ ಜೊತೆ ರಿವ್ಯೂ ಮಾಡುವಾಗ [illegible]ಗು [illegible] [illegible]ಂದರೆ ನಮ್ಮ [illegible] ಪ್ಲಾನ್ ಅಪ್ರೂವ್ ಆಗಿಲ್ಲ, [illegible] [illegible] ಅಪ್ರೂವ್ [illegible] ಮತ್ತು ಮೆಂಬರ್ಸ್‌ಲ್ಲಿ ಕೋ [illegible] [illegible] ಕೂಗು ಕೇಳಿ ಬರುತ್ತಿದೆ. ಇವತ್ತಿನದಿವಸ. ಅವರ [illegible]ದೆ.

[illegible]. [illegible]: ಸ್ವಾಮಿ [illegible] ಸರ್ಕಾರದ ಒಬ್ಬ ಸಚಿವರು [illegible] ಕೊಂಡುಕೊಳ್ಳಬಾರದು, ಕಬ್ಬಿಣ ಕೊಂಡುಕೊಳ್ಳಬಾರದು [illegible] ಫೆಬ್ರವರಿ 91 ರವರೆಗೂ ಅವರಿಗೆ ತಾವು ಅನುಮತಿ [illegible] ತಪ್ಪು?

(ಗೊಂದಲ)

[illegible] ಮಾಧು[illegible]: ಮಾನ್ಯ ಅಧ್ಯಕ್ಷರೇ ಮಿಲಿಯನ್ ವೆಲ್ ಕಾಂಪೋಜಿಶನ್ [illegible] ಎಷ್ಟು ಹಣ ಇದೆ ತಾವು ದಯಮಾಡಿ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಇದರೊಳಗೆ ತಾವೇನಾದರೂ ಇಲ್ಲದಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ, ಆಮೇಲೆ ನೋಡೋಣ

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಜೆ.ಆರ್.ವೈನಲ್ಲಿ ಕೊಟ್ಟಿರತಕ್ಕಂಥ 96 ಕ್ರೋರ್ಸ್‌ನಲ್ಲಿ 59 ಕೋಟಿ ಮಾತ್ರ ಖರ್ಚು ಮಾಡಿದ್ದಾರೆ. ಉಳಿದಿದ್ದು ಏಕೆ ಮಿಕ್ಕಿದೆ? ಸರ್ಕಾರದಿಂದ ಜಿಲ್ಲಾಪರಿಷತ್ತುಗಳಿಗೆ ಸಿಮೆಂಟ್ ಕೊಂಡುಕೊಳ್ಳಬಾರದು, ಸ್ಟೀಲ್ ಕೊಂಡುಕೊಳ್ಳಬಾರದೆಂದು ಆರ್ಡರ್ ಮಾಡಿದರು. ಅದಕ್ಕೋಸ್ಕರ ಫೆಬ್ರವರಿ 28ನೇ ತಾರೀಖಿನವರೆಗೂ ಎಲ್ಲಾ ಡೆವಲಪ್‌ಮೆಂಟ್ಸ್ ವರ್ಕ್ಸ್ ಸ್ಥಗಿತವಾಗಿತ್ತು. ಇದಕ್ಕೆ ಏನು ಉತ್ತರ ಕೊಡುತ್ತಾರೆ ಇವರು? ಮಿಲಿಯನ್ ವೆಲ್ ಸ್ಕೀಂನಲ್ಲಿ ಇದನ್ನು ಮಾಡಬೇಡ ಎಂದು ಸೂಚನೆ ಕೊಟ್ಟಿದ್ದರಿಂದ ದುಡ್ಡು ಖರ್ಚಾಗಲಿಲ್ಲ.

ಅಧ್ಯಕ್ಷರು : ಒಂದು ನಿಮಿಷ, 59 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ ಉಳಿದಿದ್ದು ಏಕೆ ಖರ್ಚಾಗಲಿಲ್ಲವೆಂದು ಡಿಸ್ಪೂಟ್ ಮಾಡುತ್ತಿದ್ದೀರಾ? ನೀವುಗಳು ಜಿಲ್ಲಾಪರಿಷತ್ತಿನ ಪರವಾಗಿ ಎಕ್ಸ್‌ಪ್ಲನೇಷನ್ ಕೊಡುತ್ತಿದ್ದೀರಿ ಅಷ್ಟೇ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಡೆವೆಲಪ್‌ಮೆಂಟ್ ವರ್ಕ್ಸ್ ಏಕೆ ನಿಂತಿದೆಯೆಂದು ಅಧಿಕಾರಿಗಳನ್ನು ಕೇಳಿದರೆ, ದುಡ್ಡು ಇಲ್ಲವೆಂದು ಹೇಳುತ್ತಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನದು ಒಂದು ಕಳಕಳಿ ಮನವಿ, ಅವರು ಡಿಫೆಂಡ್ ಮಾಡಿಕೊಳ್ಳುವುದಾದರೆ ಮಾಡಿಕೊಳ್ಳಿರಿ. ಅಧ್ಯಕ್ಷರೇ, ಕೆಲಸಕಾರ್ಯಗಳು ಎಲ್ಲಾ ಕಡೆ ನಡೆದಿದೆಯೋ ಇಲ್ಲವೋ ಎಂದು ಸಮಗ್ರವಾಗಿ ಸರ್ಕಾರವು ನೋಡಬೇಕಾಗುತ್ತದೆ. ಎರಡನೆಯದಾಗಿ, ಕೆಲವು ಬಾಬಿನಲ್ಲಿ ಹಣ ಇದೆಯೋ ಇಲ್ಲವೋ? ಇದ್ದರೂ ಕೂಡ ಏಕೆ ಖರ್ಚು ಮಾಡಿಲ್ಲ? ಜವಾಹರ್ ರೋಜ್ಗಾರ್ ಯೋಜನೆಯಿಂದ ಕೇಂದ್ರ ಸರ್ಕಾರದ ಕಡೆಯಿಂದ ಇನ್ನೂ ಹಣ ನಮಗೆ ಬರಬೇಕಾಗಿದೆ. ಜವಾಹರ್ ರೋಜ್ಗಾರ್ ಯೋಜನೆಯಲ್ಲಿ ಪ್ಲಾನ್ ಪ್ರಕಾರ ಕೊಡಬೇಕಾದ ಹಣವನ್ನೂ ಕೂಡಾ ಕಟ್ಟು ಮಾಡಿದ್ದಾರೆ ಎನ್ನತಕ್ಕ ವರದಿ ಬಂದಿದೆ. ಅದನ್ನು ನಾವು ಬಿಟ್ಟರು ಕೂಡಾ ಇವತ್ತು ಬಿಡುಗಡೆಯಾದ ಹಣದಲ್ಲಿ ಇದನ್ನು ನಾವು ಹೇಳುತ್ತಿದ್ದೇನೆ. ಜಿಲ್ಲಾಪರಿಷತ್ತುಗಳಾಗಲೀ, ಜಿಲ್ಲಾಪರಿಷತ್ತಿನ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಾಗಲೀ, ಸರ್ಕಾರವಾಗಲೀ ಇವರೆಲ್ಲರೂ ಕೂಡಿ ಇವತ್ತು ಕೆಲಸ ಮಾಡಬೇಕಾಗಿದೆ. ಆಗ ಇದು ಸಾಧ್ಯವಿದೆ. ಇದರಲ್ಲಿ ಎಂಪ್ಲಾಯ್‌ಮೆಂಟ್ ಜನರೇಷನ್ ಕ್ರಿಯೇಟ್ ಆಗಿದ್ದು ಸುಮಾರು 2 ಕೋಟಿ 84 ಲಕ್ಷ. ಇಷ್ಟು ಮ್ಯಾನ್ ಡೇಸನ್ನು ಜನರೇಟ್ ಮಾಡಿದ್ದೇವೆಂದು ಎಲ್ಲಾ ಜಿಲ್ಲಾಪರಿಷತ್ತಿನ ಅಧ್ಯಕ್ಷರುಗಳು ನಮಗೆ ವರದಿಯನ್ನು ಕಳುಹಿಸಿದ್ದಾರೆ. ಇದು ಹಿಡಿದುಕೊಂಡರೆ ನಮಗೆ 23 ಲಕ್ಷ, ಇದು ಪೂರಕವಾಗಿರತಕ್ಕಂಥಾದ್ದು. ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿಯವರು ಬರೀ 23 ಲಕ್ಷ ಮಾತ್ರ ಮಾಡಿದ್ದೀರಿ ಎಂದು ಕೇಳಿದರು. ನಾನು ಅದನ್ನು ಒಪ್ಪಿಕೊಂಡೆ. ಸ್ಕೇರ್ಸಿಟಿ ರಿಲೀಫ್‌ನಲ್ಲಿ ಇಷ್ಟು ಮಾತ್ರ ಮಾಡಿದ್ದು ಇನ್ನೊಂದು ತಮಗೂ ಕೂಡಾ ಕೊತ್ತಿದೆ. ಎಲ್ಲಾ ಜಿಲ್ಲೆಗಳಲ್ಲೂ ಡಿ.ಪಿ.ಎ.ಪಿ. ಪ್ರೋಗ್ರಾಮ್ ಇದೆ. ಆ ಡಿ.ಪಿ.ಎ.ಪಿ. ಪ್ರೋಗ್ರಾಮ್‌ನಲ್ಲೂ ಕೂಡಾ ಸುಮಾರು ಅನೇಕ ತಾಲ್ಲೂಕುಗಳು ಕವರ್ ಆಗುತ್ತವೆ. ಅದರಲ್ಲೂ ಕೂಡಾ ಇವತ್ತು ಏನಾಗಿದೆ ಎಂದರೆ, ಖರ್ಚು ಮಾಡುವುದಕ್ಕೆ ನಾವು ಜಿಲ್ಲಾಪರಿಷತ್ತುಗಳಿಗೆ ಸುಮಾರು 8 ಕೋಟಿ 91 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅದರಲ್ಲಿ ಖರ್ಚಾಗಿರುವುದು 6 ಕೋಟಿ. ಇನ್ನೂ 3 ಕೋಟಿ ರೂಪಾಯಿಗಳು ಅದರಲ್ಲೇ ಇದೆ. ಇದನ್ನು ತಮ್ಮ ಗಮನಕ್ಕೆ ಮತ್ತು ಎಲ್ಲಾ ಮಾನ್ಯ ಸದಸ್ಯರುಗಳ ಗಮನಕ್ಕೆ ತರುತ್ತಿದ್ದೇನೆ. ಈ ಭೀಕರ ಬರಗಾಲ ಪರಿಸ್ಥಿತಿಯಲ್ಲಿ ಎಲ್ಲಾ ಕಡೆ ಕೆಲಸಕಾರ್ಯಗಳನ್ನು ಪ್ರಾರಂಭ ಮಾಡಿದರೆ ಮತ್ತು ಎಲ್ಲಿ ಕೆಲಸ ಅಗತ್ಯ ಇದೆಯೋ ಅಲ್ಲಿ ಕೆಲಸ ಕೊಟ್ಟರೆ ಈ ಭಯದ ವಾತಾವರಣ ಹೊರಟುಹೋಗುತ್ತದೆ. ಆದರೆ ಅವರು ಇದನ್ನು ಮಾಡಿಲ್ಲ, ಅವರ ಮೇಲೆ ದೋಷಾರೋಪಣೆ ಮಾಡುವ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ಅದಕ್ಕೆ ನಾವೂ ನೀವು ಎಲ್ಲಾ ಸೇರಿ, ಅವರ ಮೇಲೆ ಒತ್ತಡ ತಂದು ಏಕೆ ನೀವು ಇದನ್ನು ಮಾಡುತ್ತಿಲ್ಲವೆಂದು ಕೇಳಬೇಕಾಗುತ್ತದೆ. ಇನ್ನೂ 3 ಕೋಟಿ ಹಣ ಅದರಲ್ಲಿದೆ. ಈಗಾಗಲೇ ವೆಸ್ಟರ್ನ್ ಘಾಟ್ ಡೆವಲಪ್‌ಮೆಂಟ್ ಪ್ರೋಗ್ರಾಮ್ ಇದೆ ಇದು ಸುಮಾರು 19 ತಾಲ್ಲೂಕುಗಳಲ್ಲಿವೆ ಮತ್ತು ಆ ತಾಲ್ಲೂಕುಗಳಲ್ಲಿ ಇವತ್ತು ಬರಗಾಲಕ್ಕೆ ತುತ್ತಾದವಕ್ಕೆ ಸಂಬಂಧಪಟ್ಟಿದ್ದು ಇದೆ.

ಶ್ರೀ ಸಿ. ಬೈರೇಗೌಡ : ಪಶ್ಚಿಮ ಘಟ್ಟಗಳಲ್ಲೂ ಕುಡಿಯುವ ನೀರಿನ ತೊಂದರೆ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲೂ ಕೂಡ ಇರತಕ್ಕ ಟೆನ್ಷನ್ ಅನನ್ನು ಸಾಲ್ವ್ ಮಾಡಿದರೆ ಈ ಸಮಸ್ಯೆ ಬಗೆಹರಿಯುತ್ತದೆ ಎನ್ನತಕ್ಕ ದೃಷ್ಟಿಯಯಿಂದ ಹೇಳಿದನೇ ಹೊರತಾಗಿ ನಾನು ಇದು ಒಂದೇ ಕಾರ್ಯಕ್ರಮ ಇದೆ. ಅದನ್ನು ನೀವು ತೆಗೆದುಕೊಳ್ಳಬೇಕೆಂದು ಹೇಳುತ್ತಿಲ್ಲ. ಅಲ್ಲೂ ಕೂಡ ಏನು ಆಗಿದೆಯೆಂದರೆ 7 ಕೋಟಿ 7 ಲಕ್ಷ ರೂಪಾಯಿಗಳು ಬಿಡುಗಡೆಯಾದರೆ ಅದರಲ್ಲಿ ಮೂರು ಕೋಟಿ ತೊಂಭತ್ತೇಳು ಲಕ್ಷ ರೂಪಾಯಿಗಳು ಖರ್ಚು ಆಗಿದೆ. ಹೀಗೆ ಒಂದಲ್ಲ ಅನೇಕ ಕಾರ್ಯಕ್ರಮಗಳಲ್ಲಿ ಇವತ್ತಿನ ದಿವಸ ಹಣ ಇದೆ. ಇದರ ಜೊತೆಯಲ್ಲಿ ಅದನ್ನು ಕೂಡ ಖರ್ಚು ಮಾಡುವುದಕ್ಕೆ ಡೈರೆಕ್ಷನ್ಸ್ ಕೊಟ್ಟಿದ್ದೇವೆ. ಡಿಸ್ಟ್ರಿಕ್ಟ್ ಇನ್‌ಛಾರ್ಜ್ ಮಿನಿಸ್ಟರ್ಸ್ ಅವರು ಪ್ರತಿಯೊಂದು ಜಿಲ್ಲೆಯಲ್ಲಿ ಈ ಎಲ್ಲಾ ಸ್ಕೇರ್ಸಿಟಿ ಪ್ರೋಗ್ರಾಮ್ಸ್ ಅನ್ನು ರಿವ್ಯೂ ಮಾಡಬೇಕು. ಯಾವ ಯಾವ ಕಾರ್ಯಕ್ರಮದಲ್ಲಿ ಎಷ್ಟೆಷ್ಟು ಹಣ ಇದೆ, ಅದನ್ನು ಮೊದಲು ಖರ್ಚು ಮಾಡಬೇಕು. ಜೊತೆಯಲ್ಲಿ ಎಲ್ಲಿ ಹಣ ಇಲ್ಲ ಅಂತಹ ಕಡೆ ಸ್ಕೇರ್ಸಿಟಿ ರಿಲೀಫ್‌ನಿದ ಹಣ ಕೂಡ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆಂದು ಹೇಳುವುದಕ್ಕೆ ಇದನ್ನು ನಾನು ಪ್ರಸ್ತಾಪ ಮಾಡಿದನೇ ಹೊರತು ಜಿಲ್ಲಾ ಪರಿಷತ್‌ನವರು ಇದನ್ನು ಮಾಡಿಲ್ಲ, ಸರಿಯಿಲ್ಲ ಎನ್ನತಕ್ಕ ವಾದ ಅಲ್ಲ. ಹೆಚ್ಚಾಗಿ 10 ಕೋಟಿ ರೂಪಾಯಿಗಳ ಬಗ್ಗೆ ತಾವು ಆಸಕ್ತಿ ವಹಿಸಿದ್ದೀರಿ. ಇನ್ನೂ ಸುಮಾರು 30-35 ಕೋಟಿ ರೂಪಾಯಿ unspent ಅವರ ಹತ್ತಿರ ಇದೆ. ಇದರ ಬಗ್ಗೆ ಸಹ ಆಸಕ್ತಿ ವಹಿಸಿ ಇಂತಹ ಕ್ರಿಟಿಕಲ್ ಟೈಮಿನಲ್ಲಿ ಎಲ್ಲಾ ಸದಸ್ಯರು ಸಹಕಾರ ಕೊಡುತ್ತಾರೆ ಎಂದು ನಾನು ಭಾವಿಸುತ್ತೇನೆ ಮತ್ತು ಅವರಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಈಗ ನೀವು ವಿಷಯವನ್ನು ಪ್ರಸ್ತಾಪ ಮಾಡಿದ್ದು ಏನೆಂದರೆ, ನೀವು ಕೇವಲ ಹಣವನ್ನು ಬಿಡುಗಡೆ ಮಾಡಿದಿರಿ ಆದರೆ ಖರ್ಚು ಎಷ್ಟು ಆಗಿದೆ ಎಂದು ಯಾರೂ ಹೇಳಲಿಲ್ಲ ಎಂದು ಹೇಳಿದಿರಿ. ನಾವು ಪ್ರತಿಯೊಂದು ಜಿಲ್ಲೆಯ ಡಿ.ಸಿ.ಗಳಿಗೆ ಯುಟಿಲೈಸೇಷನ್ ಸರ್ಟಿಫಿಕೇಟ್ ಕೊಡಿ ಎಂದು ಆದೇಶ ಕೊಟ್ಟಿದ್ದೇವೆ. ಆದರೆ ಕೆಲವು ಕೆಲಸದ ಮೇಲೆ ಅವರು 50 ಪರ್ಸೆಂಟ್ ಖರ್ಚು ಮಾಡಿರುತ್ತಾರೆ. ಅದು ಕಂಪ್ಲೀಟ್ ಆಗುವವರೆಗೆ ಯುಟಿಲೈಸೇಷನ್ ಸರ್ಟಿಫಿಕೇಟ್ ಕೊಡುವುದಕ್ಕೆ ಆಗುವುದಿಲ್ಲ. ಅನೇಕ ಜನ ಡಿ.ಸಿ.ಗಳು ಇವತ್ತು ಕಾಲು ಭಾಗ, ಕೆಲವರು 50 ಪರ್ಸೆಂಟ್, 60 ಪರ್‌ಸೆಂಟ್, 70 ಪರ್ಸೆಂಟ್ ಯುಟಿಲೈಸೇಷನ್ ಸರ್ಟಿಫಿಕೇಟ್ ಕಳಿಸಿಕೊಟ್ಟಿದ್ದಾರೆ. ಆದರೆ ನಾನು ಆ ಜಿಲ್ಲೆಗೆ ಹೋದಾಗ ಅನೇಕ ಮಾನ್ಯ ಶಾಸಕ ಮಿತ್ರರು ಕೂಡ ಅಲ್ಲಿ ಇದ್ದರು. ಅವರು ಸ್ವತಃ ಹೇಳಿದ್ದಾರೆ. ಈಗಾಗಲೇ ಖರ್ಚಾಗಿದೆ, ಅದಕ್ಕೆ ಬಿಲ್ ಕೊಡಬೇಕು. ಅದು ಪೇಮೆಂಟ್ ಆದ ತಕ್ಷಣ ಯುಟಿಲೈಸೇಷನ್ ಸರ್ಟಿಫಿಕೇಟ್ ಕೊಟ್ಟ ಹಾಗೆಯೇ, ಆದ್ದರಿಂದ ನೀವು ಅದನ್ನು ಲೆಕ್ಕಕ್ಕೆ ಹಿಡಿದುಕೊಳ್ಳಬೇಡಿ, ಹರಾ ಉಳಿದಿದೆ ಎಂದು ಭಾವಿಸಬಾರದು ಎನ್ನತಕ್ಕ ಮಾತನ್ನು ಅವರು ಕೂಡ ಹೇಳಿದರು ಹಾಗೂ ಅದು ನನ್ನ ಗಮನಕ್ಕೆ ಸಹ ಬಂತು. ಅದಕ್ಕಾಗಿ ನಾವು ಡಿ.ಸಿ.ಗಳಿಗೆ ಒಂದು ಡೈರೆಕ್ಷನ್ ಕೊಟ್ಟಿದ್ದೇವೆ. ಯಾವ ಯಾವ ಜಿಲ್ಲೆಗೆ ಬರ ಪರಿಹಾರ ಕಾಮಗಾರಿ ಕಾರ್ಯಕ್ರಮದಲ್ಲಿ ಹಣ ಬಿಡುಗಡೆ ಮಾಡಿದ್ದೇವೆ, ಆ ಹಣದ ಬಗ್ಗೆ ನೀವು ಎಕ್ಸ್‌ಪೆಂಡಿಚರ್ ಸ್ಟೇಟ್‌ಮೆಂಟ್ ಕೊಟ್ಟರೆ ಸಾಕು ಎಂದು ಹೇಳಿದ್ದೇವೆ. ಇವತ್ತಿನ ದಿವಸ ಅನೇಕ ಕಡೆಯಿಂದ ಅದು ಬರುತ್ತಿದೆ. ನಾವು ನ್ಯಾಚುರಲ್ ಕೆಲಾಮಿಟೀಸ್ ಫಂಡ್ನಲ್ಲಿ ರಿಲೀಸ್ ಮಾಡಿದ್ದರಲ್ಲಿ, ಸುಮಾರು 21 ಕೋಟಿ ರೂಪಾಯಿಯಲ್ಲಿ ಈಗಾಗಲೇ 16 ಕೋಟಿ ರೂಪಾಯಿಯದು ಬಂದಿದೆ. ಅಂದರೆ ಉಳಿದಂತಹದ್ದು ಕೂಡ ಎಕ್ಸ್‌ಪೆಂಡಿಚರ್ ಬುಕ್ ಆಗಿದೆ ಎಂದು ಗೊತ್ತಾದ ಮೇಲೆ ಎಕ್ಸ್‌ಪೆಂಡಿಚರ್ ಸ್ಟೇಟ್‌ಮೆಂಟ್ ಕಳಿಸಿಕೊಡುತ್ತಿದ್ದಾರೆ. ಅದಕ್ಕೆ ಯಾವ ತೊಂದರೆಯೂ ಇಲ್ಲ. ಮೊನ್ನೆ ನಾವು ಹಣ ಬಿಡುಗಡೆ ಮಾಡಿದ್ದೇವೆ. ತಾವು ಡೇಟ್‌ವಾರು ಹೇಳಿ ಎಂದು ಕೇಳಿದ್ದೀರಿ. ಯಾವ ಯಾವ ಡೇಟ್‌ಗೆ ಎಷ್ಟೆಷ್ಟು ಹಣ

ಬಿಡುಗಡೆ ಮಾಡಿದ್ದೇವೆ ಎಂಬ ಬಗ್ಗೆ ನನ್ನಲ್ಲಿ ಡೇಟ್ಸ್ ಇದೆ, ನಾನು ಬೇಕಾದರೆ ಓದಿ ಹೇಳುತ್ತೇನೆ, ನನ್ನ ಹತ್ತಿರ ಸವಿಸ್ತಾರವಾದ ಮಾಹಿತಿ ಇದೆ. ನಾನು ಕೇಳಿಕೊಳ್ಳತಕ್ಕದ್ದು ಇಷ್ಟೇ. ಮೊನ್ನೆ 23ನೇ ತಾರೀಖು ಕೆಲವು ಹಣ ಬಿಡುಗಡೆ ಮಾಡಿದ್ದೇವೆ. ಅದರ ಹಿಂದೆ 7ನೇ ತಾರೀಖು ಜವಾಹರ್ ರೋಜ್ಗಾರ್ ಯೋಜನೆಗೆ ಬಿಡುಗಡೆ ಮಾಡಿದ್ದೇವೆ. ಅದಕ್ಕೆ ಹೆಚ್ಚು ಹಣ ಖರ್ಚಾಗದೇ ಇರಬಹುದು. ಕೆಲವು ಕಡೆ ಡಿ.ಸಿ.ಗಳು ಕ್ವೈರಿ ಹಾಕಿ ಕ್ಲಾರಿಫೈ ಮಾಡಬೇಕು ಎಂದು ವಾಪಸ್ ಕಳಿಸಿದ್ದಾರೆ. ಮತ್ತೆ ನಾವು ಪುನಃ ನಮ್ಮ ರೂರಲ್ ಡೆವೆಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ನಿಂದ ಕ್ಲಾರಿಫಿಕೇಶನ್ಸ್ ಕಳಿಸಿ, ಟೆಲೆಕ್ಸ್ ಮೆಸೇಜ್‌ನಿಂದ ಇವತ್ತಿನ ದಿವಸದಿಂದ ನೀವು ಕೆಲಸ ಪ್ರಾರಂಭ ಮಾಡಿ ಎಂದು ಈಗಾಗಲೇ ಹೇಳಿದ್ದೇವೆ. ಅದಕ್ಕೆ ಯಾವ ತೊಂದರೆ, ತಾಪತ್ರಯವೂ ಕೂಡ ಬರುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕುಡಿಯುವ ನೀರಿಗಾಗಿ ಈ ಒಂದು ಸಂದರ್ಭದಲ್ಲಿ ಎಷ್ಟು ಹಣ ಖರ್ಚಾಗಿದೆ ಎನ್ನತಕ್ಕ ಒಂದು ಪ್ರಸ್ತಾಪ ಈಗ ಬಂತು. ಅರ್ಬನ್ ಮತ್ತು ರೂರಲ್ ಏರಿಯಾ ಎರಡೂ ಸೇರಿ ನಾವು ಈಗಾಗಲೇ ಸುಮಾರು 12 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಈ ಒಂದು ನೀರಿನ ಕೊರತೆಯು ನೀಗಬೇಕು. ಮತ್ತು ಇದೊಂದು ರೆಗ್ಯುಲರ್ ಪ್ರೋಗ್ರಾಮ್ ಅಲ್ಲ. ಡಿ.ಸಿ.ಗಳ ಮುಖಾಂತರ ಬಿಡುಗಡೆ ಮಾಡುತ್ತಾ ಇರತಕ್ಕದ್ದು 12 ಕೋಟಿ ರೂಪಾಯಿ. ಅದು ಕೆಲವು ಅರ್ಬನ್ ಏರಿಯಾಸ್ನಲ್ಲಿ ಮತ್ತು ಉಳಿದಂತೆ ರೂರಲ್ ಏರಿಯಾಸ್‌ನಲ್ಲಿ ಕೂಡ ಹಣದ ಬಿಡುಗಡೆ ಆಗಿದೆ ಎರಡೂ ಮೊತ್ತ ಸೇರಿ ಸುಮಾರು 12 ಕೋಟಿ ರೂಪಾಯಿಗಳು ಅಂದರೆ 11 ಕೋಟಿ 95 ಲಕ್ಷ ರೂಪಾಯಿ ಆಗುತ್ತದೆ. ಇಷ್ಟು ಹಣವನ್ನು ನಾವು ಇವೊತ್ತಿನ ದಿವಸ ನೀರಿಗಾಗಿ ಬಿಡುಗಡೆ ಮಾಡಿದ್ದೇವೆ. ಆ ಬಗ್ಗೆ ಜಿಲ್ಲಾವಾರು ಮಾಹಿತಿ ಕೂಡ ನನ್ನ ಹತ್ತಿರ ಇದೆ. ಅಷ್ಟರಿಂದಲೇ ನಾನು ತೃಪ್ತಿಯಾಗಿದ್ದೇನೆ ಎಂದು ಇಲ್ಲ. ಇವೊತ್ತು ಅನೇಕ ಜಿಲ್ಲೆಗಳಲ್ಲಿ ನಾವು ಹೋದಾಗ ಹೆಚ್ಚಿನ ಬೇಡಿಕೆ ನೀರಿಗಾಗಿಯೇ ಇತ್ತು. ಹಿಂದೆ 200-300 ಅಡಿಗಳಷ್ಟು ಕೊರೆದರೆ ಸಾಕಾಗುತ್ತಿತ್ತು. ಆದರೆ ಇವೊತ್ತು ಕೆಲವು ಕಡೆಗಳಲ್ಲಿ ಅಂಥವು ಬತ್ತಿ ಹೋಗಿವೆ. ಕೆಲವು ಕಡೆಗಳಲ್ಲಿ ರಿಪೇರಿಗಾಗಿ ನಿಂತಿವೆ. ಅದಕ್ಕಾಗಿ ನಾವು ಡಿ.ಸಿ.ಯವರಿಗೆ ಸ್ಪಷ್ಟವಾದ ಆದೇಶವನ್ನು ನೀಡಿ, ಎಲ್ಲಿ ರಿಪೇರಿಗಾಗಿ ಹಣ ಬೇಕಾಗಿದೆ ಅಂಥ ಕಡೆಗಳಲ್ಲಿ ಹಣವನ್ನು ಕೊಡಲು ಹೇಳಿದ್ದೇವೆ. ಇಂಥ ಸಂದರ್ಭದಲ್ಲಿ ಇದೇ ಫಂಡ್‌ನಿಂದ ನೀವು ಕೊಟ್ಟು ನಮಗೆ ಬರೆದರೆ ಅಡಿಶನಲ್ ಗ್ರಾಂಟ್‌ನ್ನು ರಿಲೀಸ್ ಮಾಡುತ್ತೇವೆ ಎನ್ನುವ ಮಾತನ್ನು ಕೂಡ ನಾನು ಕೋಲಾರ, ಮೈಸೂರು ಜಿಲ್ಲೆಗಳಿಗೆ ಭೇಟಿ ಇತ್ತಾಗ ಹೇಳಿದ್ದೇನೆ. ಹೀಗೆ ಪ್ರತಿಯೊಂದು ಜಿಲ್ಲೆಯನ್ನು ವಿಸಿಟ್ ಮಾಡಿದಾಗ ರಿಪೇರಿಗಾಗಿ ಇರತಕ್ಕಂಥ ಕೆಲಸವನ್ನು ನಿಲ್ಲಿಸಬಾರದು, ಅದನ್ನು ತತ್‌ಕ್ಷಣವೆ ರಿಪೇರಿ ಮಾಡಿಸಿ ನೀರು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಆದೇಶ ನೀಡಿದ್ದೇವೆ. ಮತ್ತು ಮಿನಿ ವಾಟರ್ ಸಪ್ಲೈ ಕೂಡ ನಮ್ಮ ಗಮನದಲ್ಲಿದೆ, ಕೆಲವು ಕಡೆಗಳಲ್ಲಿ ನಮ್ಮ ಮಾನ್ಯ ಸದಸ್ಯರುಗಳು ರೆಪ್ರಸೆಂಟ್ ಮಾಡಿ, 20-30 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಒಂದೊಂದು ಬೋರ್ ವೆಲ್ ಹಾಕಿಸುವ ಬದಲು ಒಂದು ಬೋರ್ ವೆಲ್‌ನಿಂದ ಒಂದು ಪೈಪ್‌ಲೈನ್ ಹಾಕಿಸಿದರೆ ಇನ್ನೊಂದು ಹಳ್ಳಿಗೆ ನೀರು ಕೊಡಬಹುದಾಗಿದೆ ಎಂದು ಹೇಳಿದ್ದಾರೆ. ಇದು ಒಳ್ಳೆಯ ಸಲಹೆಯಾಗಿದ್ದು ಅಂಥ ಯೋಜನೆಯನ್ನು ಕೂಡ ತೆಗೆದುಕೊಳ್ಳಬೇಕೆಂದು ನಾವು ಡಿ.ಸಿ.ಯವರಿಗೆ ಆದೇಶ ನೀಡಿದ್ದೇವೆ.

ಶ್ರೀಮತಿ ಚಂದ್ರಪ್ರಭಾ ಅರಸ್ : ಮಾನ್ಯ ಕಂದಾಯ ಸಚಿವರಲ್ಲಿ ಹೇಳುತ್ತೇನೆ. ಸಾಕಷ್ಟು ಬೋರ್ ವೆಲ್‌ಗಳು ಕೆಟ್ಟಿರತಕ್ಕಂಥವುಗಳೇನಿವೆ, ಅಂಥವುಗಳ ದುರಸ್ತಿ ಕೆಲಸಗಳು ತೀವ್ರವಾಗಿ ನಡೆಯುತ್ತಾ ಇಲ್ಲ. ಅದಕ್ಕೆ ಕೆಲವು ಕಾರಣಗಳು ಇವೆ. ಕೆಲವು ಮಂಡಲಗಳಲ್ಲಿ ಪ್ರಧಾನವಾಗಿಯಾಗಿ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ, ಹೊಂದಿಕೊಂಡು

ಕೆಲಸ ಮಾಡುತ್ತಾ ಇದ್ದಾರೆ. ಅಲ್ಲಿರುವ ಚೀಫ್ ಸೆಕ್ರೆಟರಿ, ಜ್ಯೂನಿಯರ್ ಇಂಜಿನೀಯರ್ ಮೊದಲಾದವರೆಲ್ಲರೂ ಹೊಂದಾಣಿಕೆಯಿಂದ ಕಾರ್ಯ ನಿರ್ವಹಣೆ ಮಾಡುತ್ತಿದ್ದಾರೆ. ಆದರೆ ಬಹಳಷ್ಟು ಕಡೆಗಳಲ್ಲಿ ಈ ರೀತಿಯಾದ ಅಟೆನ್‌ಶನ್ ಕೊಡುವುದಕ್ಕೆ ಮಂಡಳಗಳಿಗೆ ಆಗಿಲ್ಲ, ಅಂಥ ಕಡೆಗಳಲ್ಲಿ ದುರಸ್ತಿ ಕಾರ್ಯ ಆಗುತ್ತಾ ಇಲ್ಲ. ಅವರಿಗೆ ಇಂಥ ಕೆಲಸಗಳ ಬಗ್ಗೆ ನಿಗಾ ವಹಿಸುವುದಕ್ಕೆ ಆಗುತ್ತಿಲ್ಲ. ಒಂದೊಂದು ಮಂಡಳ ಪಂಚಾಯಿತ್ತಿ ವ್ಯಾಪ್ತಿಗೆ 20-30 ಹಳ್ಳಿಗಳು ಬರುತ್ತವೆ, ಅವುಗಳನ್ನೆಲ್ಲಾ ನೋಡಿಕೊಂಡು ಕೆಲಸ ನಿರ್ವಹಿಸುವುದಕ್ಕೆ ಅವರಿಂದ ಆಗದಿರಲೂಬಹುದು. ಅಷ್ಟೇ ಅಲ್ಲದೆ, ರಿಪೇರಿಗಾಗಿ ಕೊಡುವ 200 ರೂಪಾಯಿಗಳು ಸಾಕಾಗುವುದಿಲ್ಲ ಎಂಬ ಕೂಗು ಕೂಡ ಇದ್ದೇ ಇದೆ. ಅಷ್ಟೇ ಅಲ್ಲದೆ ಬೇಕಾದ ಬಿಡಿಭಾಗಗಳು ಸಿಗುವುದು ಕೂಡ ಕಷ್ಟ. ಇದೆಲ್ಲವನ್ನು ಮೀರಿ ಪ್ರಧಾನರು ಮತ್ತು ಜೂನಿಯರ್ ಇಂಜಿನೀಯರಿಗೆ ಕೋ ಆರ್ಡಿನೇಷನ್ ಇಲ್ಲದಿರುವುದು ಮುಖ್ಯವಾದ ಕಾರಣವಾಗಿದೆ. ಈ ದಿಶೆಯಲ್ಲಿ ನನ್ನ ಒಂದು ಸಲಹೆ ಅಂದರೆ, ಇದಕ್ಕೆ ಏಕರೂಪವಾದ ಒಂದು ತಾಲ್ಲೂಕು ಪಂಚಾಯತ್ ಸಮಿತಿ ಲೆವೆಲ್‌ನಲ್ಲಿ ಅಸಿಸ್ಟೆಂಟ್ ಇಂಜಿನೀಯರ್, ತಹಶೀಲ್‌ದಾರ್ ಹಾಗೂ ಶಾಸಕರು, ಹೀಗೆ ಎಲ್ಲರೂ ಇರುತ್ತಾರೆ. ಅಷ್ಟೆ ಅಲ್ಲದೇ ಅದರಲ್ಲಿ ಜಿಲ್ಲಾಪರಿಷತ್ತ ಸದಸ್ಯರೂ ಒಳಗೊಂಡಿರುತ್ತಾರೆ. ಆ ಸಮಿತಿಯಲ್ಲಿ ಎಲ್ಲಿ ಅಂಥ ದೂರುಗಳು ಬರುತ್ತವೆ, ಎಲ್ಲಿ ಆದ್ಯತೆಯನ್ನು ಕೊಡಬೇಕಾಗುತ್ತದೆ, ಇದನ್ನು ತೀವ್ರವಾಗಿ ಮಾಡತಕ್ಕಂಥ ವಿಷಯದಲ್ಲಿ ತಾವು ತಾಲ್ಲೂಕು ಪಂಚಾಯತಿಗೆ ವಹಿಸಿಕೊಟ್ಟದ್ದೀರಿ. ಅಥವಾ ಆಯಾಯ ಮಂಡಲದವರು ಮಾಡುತ್ತಾ ಇದ್ದಾರೆ. ಇದು ಹಾಗೆಯೇ ನಡೆಮುಕೊಂಡು ಬರುತ್ತಿದೆ. ಹೀಗಿದ್ದರೂ ದುರಸ್ತಿ ಕೆಲಸಗಳು ಸರಿಯಾಗಿ ಆಗುತ್ತಾ ಇಲ್ಲ. ಇದರಿಂದಾಗಿ ಬೋರ್ ವೆಲ್‌ಗಳಿಂದ ನೀರು ದೊರಕುತ್ತಾ ಇಲ್ಲ ಮತ್ತು ನೀರಿನ ಕೊರತೆ ಕಂಡುಬರುತ್ತದೆ. ಆದುದರಿಂದ ಈ ಉಸ್ತುವಾರಿ ಕಾರ್ಯವನ್ನು ತೀವ್ರಗೊಳಿಸಲು ಮತ್ತು ಸಮರ್ಪಕವಾಗಿ ಇರುವಂತೆ ನೋಡಿಕೊಳ್ಳಲು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಕುರಿತು ನಾವು ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ತಾವುಗಳು ಕೂಡ ರಿಪೇರಿಗಾಗಿ ಹಣವನ್ನು ಕೊಡಬೇಕೆಂದು ಹೇಳಿದ್ದೀರಿ. ಅದಕ್ಕೆ ಸ್ಪೆಶಲ್ ಆಗಿ 5-10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಬಂದರೆ ಜಿಲ್ಲಾ ಪರಿಷತ್ತಿನಲ್ಲಿ ಹಣ ಇಲ್ಲದಿದ್ದರೆ ಅಂಥದ್ದಕ್ಕಾಗಿ ನಾವು ಹಣವನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದೇನೆ. ಒಂದು ವೇಳೆ ಖರ್ಚು ಮಾಡಿ ನಮಗೆ ನೀವು ಪುನಃ ಬರೆಯಿರಿ ನಾವು ಅದನ್ನು ರೆಮಿಟ್ ಮಾಡುತ್ತೇವೆ ಎಂಬುದನ್ನು ಕೂಡ ಸ್ಪಷ್ಟವಾಗಿ ತಿಳಿಸಿದ್ದೇವೆ. ಡಿ.ಸಿ.ಯವರು ಕೂಡ ಇದನ್ನು ಒಪ್ಪಿಕೊಂಡಿದ್ದಾರೆ. ಈ ರೀತಿಯಾಗಿ ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ. ಮತ್ತು ಈ ಕೆಲಸಗಳು ಈಗಾಗಲೇ ನಡೆಯುತ್ತಿವೆ. ಅದಲ್ಲದೆ ಯಾವ ಹಳ್ಳಿಗಳಲ್ಲಿ ಇನ್ನೂ ಬೋರ್ ವೆಲ್‌ಗಳನ್ನು ತೆಗೆಸಬೇಕು, ಎಲ್ಲಿ ಕುಡಿಯುವ ನೀರಿನ ಕೊರತೆ ಇದೆ ಎಂಬ ಬಗ್ಗೆ ಈಗಾಗಲೇ ಡಿ.ಸಿ. ಡಿವಿಜನಲ್ ಕಮೀಶನರ್, ಚೀಫ್ ಸೇಕ್ರೆಟರಿಗಳ ಕಾನ್ಫರೆನ್ಸ್ 16ನೇ ತಾರೀಖು ನಡೆದಾಗ ಮಾಹಿತಿಗಳನ್ನು ನೀಡಿದ್ದಾರೆ ಅದನ್ನು ತೆಗೆದುಕೊಂಡಿದ್ದೇವೆ. ನಿಮ್ಮ ನಿಮ್ಮ ಜಿಲ್ಲೆಯಲ್ಲಿ ಅಫೆಕ್ಟೆಡ್ ತಾಲ್ಲೂಕುಗಳು ಯಾವುವು ಇವೆ, ಅಲ್ಲಿ ಎಷ್ಟೆಷ್ಟು ಬೋರ್ ವೆಲ್‌ಗಳು ಬೇಕು, ಆ ಕೆಲಸಕ್ಕಾಗಿ ಹಣ ಎಷ್ಟು ಬೇಕು ಎಂಬ ಬಗ್ಗೆ ಮಾಹಿತಿಯನ್ನು ಕೊಡಬೇಕೆಂದು ಹೇಳಿದಾಗ, ಖುದ್ದಾಗಿ ಎಲ್ಲಾ ಡಿ.ಸಿ.ಯವರು ಸೇರಿ. ಫ್ಲಡ್ ರಿಲೀಫ್ ಫಂಡನ್ನು ಕೂಡ ಕೇಳಿದ್ದಾರೆ, ಇದೆಲ್ಲವನ್ನು ಸೇರಿಸಿ ಸುಮಾರು 18 ಕೋಟಿ ರೂಪಾಯಿಗಳ ಒಂದು ಡಿಮ್ಯಾಂಡ್‌ನ್ನು ಅವರು ಕಳುಹಿಸಿದ್ದಾರೆ. ಅದರಲ್ಲಿ ಈಗಾಗಲೇ ನಾವು 3 ಕೋಟಿ ರೂಪಾಯಿಗಳನ್ನು ಒಂದು ಸಲ ಬಿಡುಗಡೆ ಮಾಡಿದ್ದೇವೆ. ಮತ್ತು ಅತ್ಯಂತ ಭೀಕರವಾದಂಥ ಪರಿಸ್ಥಿತಿ ಪ್ರಾರಂಭವಾಗುವುದು ವಿಶೇಷತಃ ಮಾರ್ಚ್, ಏಪ್ರಿಲ್, ಮೇ ಈ ಮೂರು ತಿಂಗಳುಗಳಲ್ಲಿ, ಇವುಗಳು ಅತ್ಯಂತ ನೀರಿನ ಕೊರತೆಯ ತಿಂಗಳುಗಳು.

ಇದನ್ನು ಕೂಡ ನಾವು ಅರ್ಥಮಾಡಿಕೊಂಡಿದ್ದೇವೆ. ಇದಕ್ಕೆ ಪ್ರತಿ ತಿಂಗಳು ಎಲ್ಲೆಲ್ಲಿ ಎಷ್ಟೆಷ್ಟು ಆದ್ಯತೆಯ ಮೇರೆಗೆ ಡಿ.ಸಿ.ಯವರು ಹಣವನ್ನು ಕೇಳುತ್ತಾರೋ ಅದರ ಅವಶ್ಯಕತೆಗನುಸಾರವಾಗಿ ಹಣವನ್ನು ನಾವು ಬಿಡುಗಡೆ ಮಾಡುತ್ತೇವೆ. ಇದರಲ್ಲಿ ಯಾವ ಕೊರತೆಯನ್ನು ಮಾಡುವುದಿಲ್ಲ, ಇದೇ ತಿಂಗಳಲ್ಲಿ 3-4 ದಿವಸಗಳಲ್ಲಿ ಕುಡಿಯುವ ನೀರಿಗೆ ಮತ್ತು ಕೆಲವುಕಡೆ ಎಲ್ಲಿ ಸ್ವಲ್ಪ ಎಂಪ್ಲಾಯ್‌ಮೆಂಟ್ ಜನರೇಶನ್ ಮಾಡಬೇಕಾಗಿದೆ ಅಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಎಲ್ಲಕ್ಕಿಂತಲೂ ಹೆಚ್ಚಿಗೆ ಕುಡಿಯುವ ನೀರಿಗೆ ಹೆಚ್ಚಿಗೆ ಆದ್ಯತೆಯನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದಕ್ಕೆ 5 ಕೋಟಿ ರೂಪಾಯಿಗಳನ್ನು 4-5 ದಿವಸಗಳಲ್ಲಿ ನಾನು ಬಿಡುಗಡೆ ಮಾಡುತ್ತೇನೆ. ಇದರ ಮೂಲಕ ಅನೇಕ ಜನರ ಬೇಡಿಕೆ ಏನಿದೆ ಅದನ್ನು ಪೂರೈಸಬಹುದು ಎಂದು ಹೇಳಬಯಸುತ್ತೇನೆ. ಅಷ್ಟೇ ಅಲ್ಲದೆ, ಕುಡಿಯುವ ನೀರಿನ ತೊಂದರೆಯನ್ನು ಇದು ನಿವಾರಣೆ ಮಾಡುತ್ತದೆ ಎಂದು ತಿಳಿದುಕೊಂಡಿದ್ದೇನೆ. ನಾನು ಕೊಟ್ಟಂಥ ಅಂಕಿ-ಅಂಶಗಳ ಪ್ರಕಾರ ಮತ್ತು ಅವರು ಏನು ಪ್ರತಿ ಜಿಲ್ಲೆಯಲ್ಲಿ ಕೆಲಸವನ್ನು ಮಾಡಿದ್ದಾರೆ ಅದನ್ನು ನೋಡಿದ್ದೇನೆ. ಅದು ಜಿಲ್ಲಾಪರಿಷತ್ ಆಗಲಿ, ವೆಲ್ ಬೋರಿಂಗ್ ಡಿವಿಜನ್‌ರವರಾಗಲಿ ಅಥವಾ ನಮ್ಮ ಇಲಾಖೆಯ ವತಿಯಿಂದ ಕೊಟ್ಟಂಥ ಹಣ ಇವೊತ್ತು ಎಷ್ಟರಮಟ್ಟಿಗೆ ಖರ್ಚು ಮಾಡಲಾಗಿದೆ ಎಂಬ ಬಗ್ಗೆ ಕೂಡ ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಮತ್ತು ಹಣ ಎಷ್ಟು ಕೊಟ್ಟಿದ್ದೇವೆ ಎಂಬ ಬಗ್ಗೆ ಹೇಳಿದ್ದೇನೆ. ಇನ್ನು ಅನೇಕ ಕಡೆಗಳಲ್ಲಿ ಡಿ.ಸಿ.ಯವರ ಹತ್ತಿರ ಹಣ ಉಳಿದಿದ್ದರೂ ಕೂಡ ತಕ್ಷಣ ಈ 5 ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡುತ್ತೇವೆ. ಅವರು ಈ ತಿಂಗಳಲ್ಲಿ ಹೆಚ್ಚು ಕಡಿಮೆ ಈ ಹಣವನ್ನು ಖರ್ಚು ಮಾಡಿ ಈ ಒಂದು ನೀರಿನ ಕೊರತೆಯನ್ನು ನಿಭಾಯಿಸುತ್ತಾರೆ ಮತ್ತು ಯಾವುದೇ ಪರಿಸ್ಥಿತಿಯಲ್ಲಿ ನೀರಿಗೆ ತೊಂದ್ರೆ ಇದೆ ಎನ್ನತಕ್ಕಂಥ ಭಯ ಯಾವ ಸದಸ್ಯರಲ್ಲಿಯೂ ಇರಬಾರದು ಇದೇ ರೀತಿಯಲ್ಲಿ ಫಾಡರ್ ಬ್ಯಾಂಕ್ ಬಗ್ಗೆ ಕೂಡ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಈಗಾಗಲೇ ಆ ಬಗ್ಗೆ ಹೇಳಿದ್ದೇನೆ. ಫಾಡರ್ ಬ್ಯಾಂಕ್ ಪ್ರಾರಂಭ ಮಾಡುವುದಕ್ಕೆ ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ. ಎಲ್ಲಿ ಮಾನ್ಯ ಸದಸ್ಯರುಗಳು ಇದರ ಅವಶ್ಯಕತೆ ಇದೆ ಎಂದು ಕೇಳಿದ್ದಾರೆ, ಡಿ.ಸಿ.ಯವರು ಕೇಳಿದ್ದಾರೆ, ಅಲ್ಲೆಲ್ಲಾ ಫಾಡರ್ ಬ್ಯಾಂಕ್‌ಗಳನ್ನು ಪ್ರಾರಂಭಿಸುವುದಕ್ಕೆ ಈಗಾಗಲೇ ನಾವು 26 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಕೆಲವು ಕಡೆಗಳಲ್ಲಿ ಇದನ್ನು ಪ್ರಾರಂಭ ಮಾಡಿದ್ದಾರೆ, ಆದರೆ ಕೆಲವು ಕಡೆ ಈ ಮೇವನ್ನು ನಮ್ಮ ಜಾನುವಾರುಗಳು ತಿನ್ನುತ್ತಿಲ್ಲ, ನಮಗೆ ಟ್ರಾನ್ಸ್‌ಪೋರ್ಟೇಷನ್ ವ್ಯವಸ್ಥೆ ಮಾಡಿಕೊಡಿ, ಅಥವಾ ಅದರ ಖರ್ಚುಗಳನ್ನು ವಹಿಸಿಕೊಂಡರೆ ನಾವೇ ತಂದುಕೊಳ್ಳುತ್ತೇವೆ ಎಂದೂ ಹೇಳಿದ್ದಾರೆ. ಅದಕ್ಕೂ ಕೂಡ ಡಿ.ಸಿ.ಯವರಿಗೆ ಸೂಕ್ತ ಕ್ರಮಕ್ಕಾಗಿ ಸ್ಪಷ್ಟವಾದ ಆದೇಶ ಕೊಟ್ಟಿದ್ದೇವೆ. ಇನ್ನು ಕೆಲವು ಕಡೆಗಳಲ್ಲಿ ವಿಶೇಷತಃ ಗಡಿಭಾಗಗಳಲ್ಲಿ ಮೇವು ಹೊರಗೆ ಹೋಗುತ್ತಿದೆ, ಅದನ್ನು ನಿಲ್ಲಿಸಬೇಕೆಂದು ಕೇಳಿಕೊಂಡಿದ್ದಾರೆ. ನನ್ನ ಜನರಿಗೆ ಅದು ಬಂದಾಗ ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಡಿ.ಸಿ.ಯವರಿಗೆ ಹೇಳಿದ್ದೇನೆ. ಹಾಗೆ ಮೇವು ಹೊರಗೆ ಹೋಗತಕ್ಕಂಥಾದ್ದನ್ನು ಬ್ಯಾನ್ ಮಾಡಬೇಕೆಂದು ಹೇಳಿದ್ದೇನೆ. ಅದಕ್ಕನುಸಾರವಾಗಿ ಮೈಸೂರಿನವರು ಹಾಗೂ ಗಡಿಭಾಗದವರು, ಡಿ.ಸಿ.ಯವರು ಬ್ಯಾನ್ ಆರ್ಡರನ್ನು ಇಶ್ಯೂ ಮಾಡಿದ್ದಾರೆ ಎಂದು ನನ್ನ ಗಮನಕ್ಕೆ ಬಂದಿದೆ. ಇನ್ನು ಕೆಲವು ಮಾನ್ಯ ಸದಸ್ಯರುಗಳು ಕುಡಿಯುವ ನೀರಿನ ಬಗ್ಗೆ ಸಣ್ಣ ಟ್ಯಾಂಕ್‌ಗಳನ್ನು ಕಟ್ಟಿಸಬೇಕೆಂದು ಕೇಳಿಕೊಂಡಿದ್ದಾರೆ. ಮಾನ್ಯ ಬೈರೇಗೌಡರು ಈ ಕುರಿತು ಹೇಳಿದ್ದಾರೆ. ಅದೇ ರೀತಿಯಲ್ಲಿ ಮೈಸೂರಿನಲ್ಲಿಯೂ ಕೂಡ ಇದೇ ಸಲಹೆಯು ಬಂದಿದೆ. ಈ ಟ್ಯಾಂಕ್‌ಗಳಿಗೆ ಒಂದೆರಡು ಸಾವಿರ ರೂಪಾಯಿಗಳ ಖರ್ಚು ಬರುತ್ತದೆ ಎಂದು ತಿಳಿಸಿದಾಗ ಅದನ್ನು ಕೂಡ ಅವಶ್ಯಕತೆ ಇದ್ದಲ್ಲಿ ಮಾಡುವಂತೆ ಡಿ.ಸಿ.ಯವರಿಗೆ ತಿಳಿಸಿದ್ದೇನೆ. ಈ ಬಗ್ಗೆ ಹಣವನ್ನು ಖರ್ಚು ಮಾಡಬೇಕೆಂದು ಸ್ಪಷ್ಟವಾಗಿ ತಿಳಿಸಿದ್ದೇನೆ.

ಆ ಕೆಲಸಗಳು ನಡೆಯುತ್ತಿವೆ ಎಂದು ನಾನು ನಂಬಿದ್ದೇನೆ. ಇಷ್ಟೆಲ್ಲಾ ಹೇಳಿ, ಆದೇಶ ಕೊಟ್ಟು ಎಲ್ಲಾದರೂ ಕೆಲಸಗಳು ಆಗದಿದ್ದಲ್ಲಿ ನನ್ನ ಗಮನಕ್ಕೆ ತಂದರೆ, ನಾನು ಖಂಡಿತವಾಗಿ ಅಂಥ ಕೆಲಸವನ್ನು ಮಾಡುವುದಕ್ಕೆ ಆದೇಶವನ್ನು ಕೊಡುತ್ತೇನೆ. ಹೀಗೆ ಫಾದರ್‌ಬ್ಯಾಂಕ್‌ಗೆ 26 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ನಾನು ಅಗ್ರಿಕಲ್ಚರಲ್ ಇಲಾಖೆಯಿಂದಾಗಲೇ ಅಥವಾ ಸಂಬಂಧಪಟ್ಟ ಬೇರೆ ಯಾವುದೇ ರಿಪ್ರೋರ್ಟ್‌ಗಳಿಗೂ ಹೋಗದೆ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅವರ ರಿಪ್ರೋರ್ಟನ್ನು ನಂಬಿಕೊಂಡು ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆ. ಮತ್ತು ಕೆಲಸದ ಬಗ್ಗೆ ಈಗಾಗಲೇ ಹೇಳಿದ್ದೇನೆ. ಸಾಕಷ್ಟು ಹಣ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಇದೆ, ಡಿ.ಪಿ.ಎ.ಪಿ.ಯಲ್ಲಿ ಇದೆ ಮತ್ತು ನ್ಯಾಚುರಲ್ ಕೆಲಾಮಿಟೀಸ್ ಫಂಡ್‌ನಲ್ಲಿ ಕೂಡ ಇದ್ದುದನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ ಅದನ್ನು ಕೂಡ ಖರ್ಚು ಮಾಡಬಹುದು. ಅಂತೆಯೇ ಡೆವೆಲಪ್‌ಮೆಂಟ್ ವರ್ಕ್ಸ್ ಅನ್ನು ಸ್ಪೀಡಪ್ ಮಾಡಬೇಕು. ಅದು ಮೈನರ್ ಇರಿಗೇಶನ್ ಇರಬಹುದು, ಮೇಜರ್ ಇರಿಗೇಶನ್ ಇರಬಹುದು, ಅವೆಲ್ಲವನ್ನೂ ಕೂಡ ಹೆಚ್ಚಿನ ರೀತಿಯಲ್ಲಿ ತೆಗೆದುಕೊಳ್ಳಬೇಕೆಂದು ಈಗಾಗಲೇ ನಾವು ಆದೇಶವನ್ನು ಕೊಟ್ಟಿದ್ದೇವೆ. ಎಲ್ಲಾ ಕಡೆಗಳಲ್ಲಿಯೂ ಕೂಡ ಈ ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಮತ್ತು ವಿಶೇಷವಾಗಿ ಕುಡಿಯುವ ನೀರಿಗೆ ಎಲ್ಲಾ ರೀತಿಯಿಂದ ಸರ್ಕಾರ ಸಹಾಯ ಮಾಡುತ್ತದೆ ಸಹಾಯ ಮಾಡುವುದಕ್ಕೆ ಸಿದ್ಧವಿದೆ. ಮತ್ತು ತಾವು ಹೇಳಿದಲ್ಲಿ ಈ ಕೆಲಸವನ್ನು ನಿಭಾಯಿಸುತ್ತೇವೆ ಎನ್ನತಕ್ಕಂಥ ಮಾತನ್ನು ವಿಶ್ವಾಸವನ್ನು ತಮಗೆ ನಾನು ಇವತ್ತಿನ ದಿವಸ ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ : ಎಲೆಕ್ಟ್ರಿಸಿಟಿ ಬಗ್ಗೆ ಏನೂ ಹೇಳಲಿಲ್ಲ.

ಅಧ್ಯಕ್ಷರು : ಎಲೆಕ್ಟ್ರಿಸಿಟಿ ಬಗ್ಗೆ ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಲಿದರಲ್ಲಾ. ಅವರದು ಆರು ಪ್ರಶ್ನೆಗಳು ಇವತ್ತಿನ ದಿವಸ ಇದ್ದವು.

ಶ್ರೀ ಸಿ. ಬೈರೇಗೌಡ : ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು ನಮ್ಮ ರಾಜ್ಯಾದ್ಯಂತ ಅದರಲ್ಲೂ ನಮ್ಮ ಜಿಲ್ಲೆಯಲ್ಲಿ ಪವರ್ ಇಲ್ಲದಿದ್ದರೆ ಒಂದು ತೊಟ್ಟು ಕೂಡಾ ಕುಡಿಯುವುದಕ್ಕೆ ನೀರು ಸಿಗುವುದಿಲ್ಲ, ಸಾಧ್ಯವೇ ಇಲ್ಲ.

ಅಧ್ಯಕ್ಷರು : ರಾಜ್ಯಾದ್ಯಂತ ಏನು ಸಮಸ್ಯೆ ಇದೆ, ಅದು ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಇದೆ. ಅದನ್ನೆಲ್ಲಾ ಒಟ್ಟು ಕ್ರೋಢೀಕರಿಸಿ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ಹೊಸದಾಗಿ ಹೇಳುವುದು ಏನು ಇದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಸ್ವಲ್ಪಮಟ್ಟಿಗೆ ಬಗೆಹರಿಸಿಕೊಂಡಿದ್ದಾರೆ. ಮತ್ತು ನಾವು ಕೂಡಾ ಈಗಾಗಲೇ ಒಂದು ಜನರಲ್ ಇನ್ಸ್‌ಟ್ರಕ್ಷನ್ಸ್‌ನ್ನು ಕೊಟ್ಟಿದ್ದೇವೆ. ಎಲ್ಲೆಲ್ಲಿ ಕುಡಿಯುವ ನೀರಿನ ಯೋಜನೆಗಳು ರೆಡಿ ಇದೆ, ಅಂಥದ್ದಕ್ಕೆ ಆದ್ಯತೆ ಕೊಟ್ಟು ಕನೆಕ್ಷನ್ ಮೊದಲು ಕೊಡಬೇಕು ಎಂದು ಈಗಾಗಲೇ ಹೇಳಿದೆ. ಕೆಲವು ಕಡೆ ಆ ರೀತಿ ಆಗಿದೆ. ನಿಮ್ಮ ಕಡೆಯಲ್ಲಿಯೂ ಇಂಪ್ರೂವ್‌ಮೆಂಟ್ ಆಗುತ್ತಿದೆ. ಈಗಾಗಲೇ ತಾವು ಸಾಕಾದಷ್ಟು ಮಟ್ಟಿಗೆ ಅದರ ಲಾಭವನ್ನು ಪಡೆದುಕೊಂಡಿದ್ದೀರಿ.

ಶ್ರೀ ಸಿ. ಬೈರೇಗೌಡ : ಪವರ್ ಇದ್ದರೆ ಮೋಟಾರ್ ರನ್ ಆಗುತ್ತದೆ. ಪವರ್ ಇಲ್ಲದೆ, ಅವರಿಗೆ ಇನ್ಸ್‌ಟ್ರಕ್ಷನ್ಸ್ ಕೊಟ್ಟಿದ್ದೇವೆ, ಆದ್ಯತೆಯ ಮೇಲೆ ಕೊಡಿ ಎಂದು ಹೇಳಿದರೆ ಅಲ್ಲಿ ಇಲ್ಲದಿದ್ದರೆ ಅವರು ಎಲ್ಲಿಂದ ತಂದುಕೊಡುತ್ತಾರೆ?

ಅಧ್ಯಕ್ಷರು : ಕನೆಕ್ಷನ್ಸ್‌ಕೊಡಿ ಎಂದು ಅವರು ಹೇಳುವುದು.

ಶ್ರೀ ಸಿ. ಬೈರೇಗೌಡ : ಅದನ್ನೇ ನಾನು ಹೇಳುತ್ತಿದ್ದೇನೆ. ಪವರ್ ಇಲ್ಲದಿದ್ದರೆ ಕನೆಕ್ಷನ್ಸ್‌ನ್ನು ಎಲ್ಲಿಂದ ತಂದುಕೊಡುತ್ತಾರೆ. ಇವತ್ತು ಇರತಕ್ಕಂಥದ್ದು ಆ ಸಮಸ್ಯೆ ಅನೇಕ ತಾಲ್ಲೂಕುಗಳಲ್ಲಿ, ಅನೇಕ ಗ್ರಾಮಗಳಲ್ಲಿ ಆ ಸಮಸ್ಯೆ ಇದೆ. ನಮ್ಮ

ಸಿಂಧ್ಯಾರವರು ಏನೋ ಒಂದು ಸಲಹೆಯನ್ನು ಕೊಡುತ್ತಿದ್ದಾರೆ, ಬ್ಯಾಟರಿ ಎಂದು ಹೇಳುತ್ತಿದ್ದಾರೆ, ನೋಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪವರ್ ಜನರೇಷನನ್ನು ಅವರು ಏಳು ವರ್ಷಗಳಲ್ಲಿ ಸರಿಯಾಗಿ ಮಾಡಿ ಇಟ್ಟಿದ್ದರೆ ಬ್ಯಾಟರಿಯನ್ನು ಹಾಕಿಸತಕ್ಕಂಥ ಪರಿಸ್ಥಿತಿಯೇ ಬರುತ್ತಿರಲಿಲ್ಲ, ಎಲ್ಲಾ ಕಡೆಗೂ ಕೂಡಾ ಕೊಟ್ಟುಬಿಡುತ್ತಿದ್ದೆವು.

ಶ್ರೀ ಹೆಚ್. ಏಕಾಂತಯ್ಯ : ತಾವು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದಕ್ಕಿಂತ ಮೊದಲು ಎಷ್ಟು ಯೋಜನೆಗಳನ್ನು ಕೇಂದ್ರ ಸರ್ಕಾರಕ್ಕೆ ವಿದ್ಯುತ್ ಉತ್ಪಾದನೆಯನ್ನು ಮಾಡಲಿಕ್ಕೆ ತಾವು ಶಿಫಾರಸ್ಸು ಮಾಡಿದ್ದೀರಿ, ಅದನ್ನಾದರೂ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ ಅನೇಕ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಅದರಲ್ಲಿ ವಿರೋಧ ಪಕ್ಷದ ನಾಯಕರು, ಉಪನಾಯಕರು, ಮಾನ್ಯ ವಾಟಾಳ್ ನಾಗರಾಜ್‌ರವರು, ಕಮರುಲ್ ಇಸ್ಲಾಂರವರು, ಭೈರೇಗೌಡರು, ಪ್ರೊಫೆಸರ್ ನಂಜುಂಡಸ್ವಾಮಿಯವರು, ಕೌಜಲಗಿಯವರು, ಪಾಟೀಲರು ಈ ರೀತಿಯಾಗಿ 15 ಜನ ಈ ವಿಷಯದ ಮೇಲೆ ಮಾತನಾಡಿದ್ದಾರೆ. ಡೀಸಿಲ್ಟಿಂಗ್ ಆಫ್ ಟ್ಯಾಂಕ್ಸ್ ಬಗ್ಗೆ ಹೇಳಿದ್ದಾರೆ. ಇಂಥದ್ದೆಲ್ಲಾ ಕಾಮನ್ ಸಜೆಷನ್ಸ್ ಮೊದಲಿನಿಂದಲೂ ಇದೆ. ಇವತ್ತು ಜನರಿಗೆ ಹೆಚ್ಚಿನ ಕೆಲಸವನ್ನು ಕೊಡಬೇಕಾದರೆ ಇಂಥ ಕೆಲಸವನ್ನು ತೆಗೆದುಕೊಳ್ಳಿ ಎನ್ನತಕ್ಕಂಥ ಇನ್ಸ್‌ಟ್ರಕ್ಷನ್ಸ್‌ನ್ನು ನಾವು ಕೊಟ್ಟಿದ್ದೇವೆ. ಯಾವುದೋ ಬಿಲ್ಡಿಂಗ್ ಕೆಲಸವಾಗಲಿ ಮತ್ತು ಎಲ್ಲಿ ಎಂಪ್ಲಾಯ್‌ಮೆಂಟ್ ಸಿಗುವುದಿಲ್ಲವೋ ಅಂಥ ಕೆಲಸಗಳನ್ನು ತೆಗೆದುಕೊಳ್ಳಬಾರದು. ರಿಪೇರಿ ಕೆಲಸವಾಗಲಿ, ಡೀಸಿಲ್ಟಿಂಗ್ ಆಗಲಿ, ರೋಡ್ ವರ್ಕ್ಸ್ ಆಗಲಿ, ಸಾಯಿಲ್ ಕನ್‌ಸರ್ವೇಷನ್ ಆಗಲಿ, ಡಿ.ಪಿ.ಎ.ಪಿ.ನ ಪೆಂಡಿಂಗ್ ಕೆಲಸಗಳು ಇದ್ದರೆ ಅಂಥದ್ದನ್ನು ತೆಗೆದುಕೊಳ್ಳಬೇಕು, ಅದಕ್ಕೆ ಅದ್ಯತೆ ಕೊಡಬೇಕು ಎಂದು ಇನ್ಸ್‌ಟ್ರಕ್ಷನ್ಸ್‌ನ್ನು ಕೊಟ್ಟಿದ್ದೇವೆ. ಅದರ ಪ್ರಕಾರ ಅನೇಕ ಕಡೆ ಇವತ್ತು ಕೆಲಸವನ್ನು ಮಾಡುತ್ತಿದ್ದಾರೆ. ಮತ್ತು ಇದು ಎಲ್ಲಿ ನಡೆದಿಲ್ಲ ಎಂದು ತಾವು ಹೇಳಿದರೆ ಅಲ್ಲಿ ನಾನು ಇನ್ಸ್‌ಟ್ರಕ್ಷನ್ಸ್‌ನ್ನು ಇದರ ಬಗ್ಗೆ ಕೊಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಹೌಸ್ ಕಮಿಟಿಯನ್ನು ಮಾಡಬೇಕು, ಎಲ್ಲಾ ಕಡೆಗೂ ಹೋಗಬೇಕು ಎಂದು ಹೇಳಿದ್ದಾರೆ. ಬಹುಶಃ ಈ ರೀತಿ ಹೇಳಿದ ಮೇಲೆ ಕಮಿಟಿಯ ಅವಶ್ಯಕತೆ ಇಲ್ಲ ಎಂದು ನಾನು ಭಾವಿಸಿದ್ದೇನೆ. ಸರಿಯಾಗಿ ಇದು ನಡೆದಿಲ್ಲ, ಮುಂದೆ ನೀರಿನ ವ್ಯವಸ್ಥೆ ಸರಿಯಾಗಿ ಆಗಿಲ್ಲ ಎಂದು ಹೇಳಿದರೆ ನಾವು ಮುಂದೆ ನೋಡೋಣ. ಇಲ್ಲದಿದ್ದರೆ ಇದು ಬೇಕೇಬೇಕು ಎಂದು ಹೇಳಿದರೆ ಈ ರಿಪೋರ್ಟ್‌ನ್ನು ಪೂರ್ತಿಯಾಗಿ ಅವರಿಗೆ ಕೊಡುತ್ತೇನೆ, ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನದು, ರಿಮೋಟ್ ಕಂಟ್ರೋಲ್ ಸ್ಪೇಷ್‌ನ್‌ದು, ಆಮೇಲೆ ಉಳಿದಂಥ ಇಲಾಖೆಯ ವತಿಯಿಂದ ಅವರಿಂದ ಬಂದಂಥ ರಿಪೋರ್ಟ್‌ನ್ನು ನಾನು ಅವರಿಗೆ ಕೊಡುತ್ತೇನೆ. ಇದು ಆದಮೇಲೂ ಕೂಡಾ ಬೇಕೇಬೇಕು ಎಂದರೆ ಅದನ್ನು ಮಾನ್ಯ ಅಧ್ಯಕ್ಷರಿಗೆ ಬಿಟ್ಟಿದ್ದು. ನಾನು ಇವತ್ತು ಹೇಳತಕ್ಕಂಥದ್ದು ಇಷ್ಟೆ.

ಶ್ರೀ ಹೆಚ್. ಏಕಾಂತಯ್ಯ : ತಾವು ನಿಯೋಗ ಹೋದಂಥ ಸಮಯದಲ್ಲಿ ಯಾವ ಪರಿಸ್ಥಿತಿ ಇತ್ತೋ ಅದಕ್ಕಿಂತ ತೀವ್ರವಾದ ಪರಿಸ್ಥಿತಿ ಈಗ ಇದೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅಷ್ಟು ಇದ್ದಿದ್ದರೆ ನೀವು ಬಿಡುತ್ತಿರಲಿಲ್ಲ. ಪ್ರತಿ ಜಿಲ್ಲೆಗೂ ನಾನು ಹೋಗಿದ್ದೆ. ಯಾವ ರೀತಿಯಾದ ರಿಪೋರ್ಟ್ ಬಂದಿದೆ, ರೆಪ್ರೆಸೆಂಟೇಷನ್‌ಗಳು ಬಂದಿದೆ ಎನ್ನುವುದು ನನಗೆ ಗೊತ್ತಿದೆ. ನಾನು ಒಂದೇ ಜಾಗದಲ್ಲಿ ಕುಳಿತು ಅಥವಾ ಒಂದೇ ತಾಲ್ಲೂಕಿಗೆ ಹೋಗಿ ಮಾಡಿಲ್ಲ, ಸಂಪೂರ್ಣವಾಗಿ 18 ಜಿಲ್ಲೆಗಳಲ್ಲಿ ನಾನು ತಿರುಗಿದ್ದೇನೆ.ಸುಮಾರು ನಾಲ್ಕೈದು ತಾಸು ಒಂದೊಂದು ಕಡೆ ಕುಳಿತಿದ್ದೇನೆ. ಒಂದು ಕಡೆ ಒಂದೆರಡು ತಾಸು ಮಾಡಿರಬಹುದು. ಆದರೆ ಮಿನಿಮಮ್

ನಾಲ್ಕೈದು ಗಂಟೆ ಕುಳಿತು ಪ್ರತಿಯೊಂದು ಇಲಾಖೆಯಲ್ಲಿ ಎಷ್ಟು ಕೆಲಸವನ್ನು ಮಾಡಿದ್ದಾರೆ, ಅವರ ಸೇವಿಂಗ್ಸ್ ಎಷ್ಟು ಇದೆ, ಎಷ್ಟು ಆಸಕ್ತಿ ವಹಿಸಿ ಕೆಲಸಗಳು ಕಾರ್ಯಗಳು ಆಗಿದೆ ಎನ್ನುವುದರ ಬಗ್ಗೆ ಎಲ್ಲವನ್ನೂ ಕೂಡಾ ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಏಕಾಂತಯ್ಯನವರಿಗೂ ಗೊತ್ತು. ಅವರು ಏತಕ್ಕೋ ವಾಕ್‌ಔಟ್ ಮಾಡುತ್ತಿದ್ದಾರೆ, ಪರವಾಗಿಲ್ಲ. ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳಿ ಇಂಥ ಒಂದು ಪರಿಸ್ಥಿತಿಯಲ್ಲಿ ಎಲ್ಲಾ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರುಗಳು ಸಹಕರಿಸುತ್ತಾರೆ. ಏಕೆಂದರೆ, ಇದು ಒಂದು ಗಂಭೀರವಾದ ಪರಿಸ್ಥಿತಿ ಇದೆ. ನಾವು ಯಾರೂ ಕೂಡಾ ಇದನ್ನು ಅಲ್ಲಗಳೆಯುವುದಿಲ್ಲ. ಮತ್ತು ಸಾಧ್ಯವಾದ, ಮಟ್ಟಿಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ಈ ಒಂದು ಕುಡಿಯುವ ನೀರಿನ ವ್ಯವಸ್ಥೆ, ಹೆಚ್ಚಿನ ರೂಪದಲ್ಲಿ ಮತ್ತು ಆದ್ಯತೆಯ ಮೇರೆಗೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮತ್ತು ಶಾಂತ ರೀತಿಯಿಂದ ನನ್ನ ಉತ್ತರವನ್ನು ಕೇಳಿದ್ದಕ್ಕಾಗಿ ಅವರಿಗೂ ಮತ್ತು ತಮಗೂ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಇದು ಒಂದು ತರಹ ಲೆಕ್ಕ ಒಪ್ಪಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆಂದು ಕಾಣುತ್ತದೆ. ಆ ಲೆಕ್ಕದಲ್ಲೂ ಕೂಡ ರಂಗಸ್ವಾಮಿ ಲೆಕ್ಕದಲ್ಲಿ ಖರ್ಚು ಮಾಡಬೇಕೆಂದು ಕೇಳಿದ್ದಾರೆ. ಹೆಚ್ಚು ಹಣವನ್ನು ಜೆ.ಆರ್.ವೈ ನಲ್ಲಿ ಖರ್ಚು ಮಾಡಿದ್ದಾರೆ. ಅದು ಯಾವ ರೀತಿಯಾಗುತ್ತದೋ ಅದರ ಪರಿಣಾಮ ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ತೀರ್ಮಾನವಿರುವುದರಿಂದ ಆ ಲೆಕ್ಕವನ್ನು ಮುಂದೆ ಕೊಡುತ್ತೇವೆಂದು ಹೇಳಿದ್ದಾರೆ. ನಾನು ಬಹಳ ಮುಖ್ಯವಾಗಿ ಎರಡು ವಿಚಾರಗಳನ್ನು ಕೇಳಿದ್ದೆ. ಬರಗಾಲ ಪ್ರದೇಶದಲ್ಲಿರತಕ್ಕಂತಹ ರೈತರಿಗೆ ತಕಾವಿ ಸಾಲವನ್ನು ಕೊಡಿ ಎಂದು ಕೇಳಿದ್ದೆ. 26 ಲಕ್ಷ ರೂಪಾಯಿಗಳ ಪಾಡರ್‌ಗೆಂದು ಒದಗಿಸಿದ್ದಾರೆ. ಆ 26 ಲಕ್ಷ ರೂಪಾಯಿಗಳನ್ನು 132 ತಾಲ್ಲೂಕುಗಳಿಗೆ ಹಂಚಬೇಕು. 5 ಸಾವಿರ ಚಿಲ್ಲರೆ ಗ್ರಾಮಗಳಿಗೆ ಹಂಚಬೇಕಾಗುತ್ತದೆ. ಒಂದೊಂದು ಗ್ರಾಮಕ್ಕೆ 4-5 ರೂಪಾಯಿ ಬೀಳುತ್ತದೆ. ನಿಮ್ಮ ಲೆಕ್ಕದಲ್ಲಿ ಸರಾಸರಿ ನಾಲ್ಕು ರೂಪಾಯಿ ಬೀಳುತ್ತದೆ. ಇದು ನೀವೇ ಕೊಟ್ಟ ಲೆಕ್ಕದ ಪ್ರಕಾರ ಸಿಗುತ್ತದೆ. ನೀವು 26 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವುದು ಮುಖ್ಯವಲ್ಲ. ನಾವೇ ಟ್ರಾನ್ಸ್‌ಪೋರ್ಟ್ ಮಾಡಿಕೊಳ್ಳುತ್ತೇವೆ ನಮಗೆ ಸಾಲ ಕೊಡಿ ಎಂದು ರೈತರು ಕೇಳುತ್ತಿದ್ದಾರೆ. ಅವರಿಗೆ ತಕಾವಿ ಸಾಲವನ್ನು ಕೊಡುವ ಬಗ್ಗೆ ಏನಾದರೂ ಆಲೋಚನೆ ಮಾಡಿದ್ದೀರಾ? ಗೋಶಾಲೆಗಳನ್ನು ತೆರೆಯುವ ಬಗ್ಗೆ ಒಂದು ಶಬ್ದ ಕೂಡ ಹೇಳಲಿಲ್ಲ. ಡೆಪ್ಯೂಟಿ ಕಮಿಷನರಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅಲ್ಲಲ್ಲಿ ಗೋಶಾಲೆಗಳನ್ನು ತೆಗೆಸಿ ಜಾನುವಾರುಗಳಿಗೆ ಬೇಕಾಗಿರತಕ್ಕಂತಹ ನೀರನ್ನು ಕೊಟ್ಟು ಒಂದೆರಡು ತಿಂಗಳು ಅವುಗಳನ್ನು ಸಾಕತಕ್ಕಂತಹ ಪ್ರಯತ್ನ ಮಾಡಿ ಎಂದು ಹೇಳಿದರೆ ಅದಕ್ಕೆ ಉತ್ತರ ಹೇಳುವುದಿಲ್ಲ. ಬರಗಾಲ ಪರಿಹಾರದ ಹೆಸರಿನಲ್ಲಿ ಸಾಯಿಲ್ ಕನ್ಸರ್‌ವೇಷನ್‌ಗೆ ಹಣವನ್ನು ಖರ್ಚು ಮಾಡಿದ್ದಾರೆ. ಈಗ ಅದರ ವಸೂಲಾತಿಗೆ ನೋಟೀಸುಗಳು ಹೋಗಿದೆ. ನೀವು ಇಲ್ಲಿ ಬರ ಪರಿಹಾರಕ್ಕೆಂದು ಇಷ್ಟು ಹಣವನ್ನು ಖರ್ಚು ಮಾಡಿದ್ದೇವೆಂದು ಲೆಕ್ಕ ಕೊಡುತ್ತೀರಿ ಅಲ್ಲಿ ವಸೂಲಾತಿಗೆಂದು ನೋಟೀಸು ಕೊಡುತ್ತೀರಿ. ಆದ್ದರಿಂದ ಸಾಯಿಲ್ ಕನ್ಸರ್ವೇಷನ್‌ಗೆ ಖರ್ಚು ಮಾಡಿರತಕ್ಕಂತಹ ಹಣವನ್ನು ವಸೂಲು ಮಾಡುವುದಿಲ್ಲವೆಂದು ಹೇಳಿ ಎಂದು ನಾನು ಹೇಳಿದೆ. ಅದರ ಬಗ್ಗೆ ಏನೂ ಹೇಳಲಿಲ್ಲ. ನಿಮಗೆ ಅಲ್ಲಲ್ಲಿ ಗೋ ಶಾಲೆಗಳನ್ನು ತೆರೆಯುವುದಕ್ಕೆ ಕಷ್ಟವಾದರೆ ಗ್ರಾಮೀಣ ಪ್ರದೇಶದಲ್ಲಿರತಕ್ಕಂತಹ ಪರಿಸ್ಥಿತಿಯನ್ನು ಅರ್ಥ ಮಾಡಕೊಂಡು ಆಯಾಯ ಗ್ರಾಮಕ್ಕೆ ಬೇಕಾಗಿರತಕ್ಕಂತಹ ಫಾಡರ್ ಏನು ಇದೆ. ಅದಕ್ಕೆ, ತಾಲ್ಲೂಕು ಮಟ್ಟದಲ್ಲಿ ಬ್ಯಾಂಕ್‌ಗಳನ್ನು ಮಾಡಿ ಅಥವಾ ಗ್ರೂಪ್ ವಿಲೇಜಸ್ ಎಂದು ಮಾಡಿ

ಎಂದು ಹೇಳಿದರೆ ಅದರ ಬಗ್ಗೆ ಏನೂ ಹೇಳಲಿಲ್ಲ. ಬರೀ ಲೆಕ್ಕ ಒಪ್ಪಿಸಿದರೆ ಏನು ಪ್ರಯೋಜನ. ಇದರ ಬಗ್ಗೆ ಸರಿಯಾದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವುಗಳನ್ನು ಜಾರಿಗೆ ಕೊಡತಕ್ಕಂತಹ ಕೆಲಸ ಮಾಡಬೇಕು.

ಅವಶ್ಯವಾದರೆ . ಗಂಜಿ ಕೇಂದ್ರಗಳನ್ನು ತೆಗೆಯಿರಿ ಎಂದು ನಾನು ಹೇಳಿದ್ದೆ, ಅದರ ಬಗ್ಗೆ ಒಂದು ಶಬ್ದ ಕೂಡ ಹೇಳಲಿಲ್ಲ. ಮಾನ್ಯ ಘೋರ್ಪಡೆಯವರು ಹೇಳಿದ ಹಾಗೆ, 59 ಕೋಟಿ ರೂಪಾಯಿಯಷ್ಟು ಹಣ ಬಹಳ ದೊಡ್ಡ ಪ್ರಮಾಣದಲ್ಲಿ ಬರುತ್ತದೆಂದು ' ಆಲೋಚನೆ ಮಾಡಿದರು. ಅದು ಎಲ್ಲಿದೆ? 34 ಕೋಟಿಯದನ್ನು ಹೇಳುತ್ತಿಲ್ಲ. ಕುಡಿಯುವ ನೀರಿಗೆಂದು 24 ಕೋಟಿಯನ್ನು ಅಡಿಷನಲ್ ಗ್ರಾಂಟ್ ಆಗಿ ಖರ್ಚು ಮಾಡುತ್ತೇವೆಂದು ಮಾನ್ಯ ಘೋರ್ಪಡೆಯವರು ಈ ಶಾಸನ ಸಭೆಯಲ್ಲಿ ಹೇಳಿದ್ದಾರೆ. ಇಲ್ಲಿ ಸರಕಾರ ಬದಲಾವಣೆಯಾಗಿದೆ ಎಂದು ನಾನು ತಿಳಿದಿರಲಿಲ್ಲ. ಮುಖ್ಯ ಮಂತ್ರಿಗಳು ಮಾತ್ರ ಬದಲಾವಣೆಯಾಗಿದ್ದಾರೆಂದು ನಾನು ತಿಳಿದಿದ್ದೆ. ಆದರೆ ಇಲ್ಲಿ ನೋಡಿದರೆ ಸರಕಾರವೇ ಬದಲಾವಣೆಯಾಗಿದೆ. ಹಿಂದಿನ ಸರಕಾರ ನಿಮ್ಮ ಲೆಕ್ಕದಲ್ಲಿ ಇಲ್ಲ. ಬಂಗಾರಪ್ಪನವರ ಸರ್ಕಾರ ಬೇರೆ ಪಕ್ಷದ ಸರ್ಕಾರವೆಂದು ಕಾಣಿಸುತ್ತದೆ. ಆದುದರಿಂದ ಮುಂದೆ ಇನ್ನಾರು ತಿಂಗಳ ಮೇಲೆ ಇನ್ಯಾವ ಸರಕಾರ ಬರುತ್ತದೋ ನೀವು ಹೇಳಿದ ಕಾರ್ಯಕ್ರಮ ಏನಾಗುತ್ತದೋ ಗೊತ್ತಿಲ್ಲ. ಶಾಸನಸಭೆಗೆ ಏನು ಮಾತುಕೊಟ್ಟಿದ್ದೀರೊ ಅದನ್ನು ಏನು ಮಾಡಿದ್ದೀರಿ ಎಂದು ದಯಮಾಡಿ ಹೇಳಿ ಈ ಕಾರ್ಯಕ್ರಮಗಳ ದೃಷ್ಟಿಯಿಂದ ತಾವು ಏನು ಮಾಡುತ್ತೀರಿ ಎನ್ನುವುದನ್ನು ದಯಮಾಡಿ ಹೇಳಿ. ಬರೀ ಲೆಕ್ಕ ಒಪ್ಪಿಸುವುದಷ್ಟೇ ನಿಮ್ಮ ಕೆಲಸ ಅಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ಒಂದು ಬಹಳ ಮುಖ್ಯವಾದ ವಿಚಾರವನ್ನು ಸರಕಾರದ ಗಮನಕ್ಕೆ ತಂದಿದ್ದೆ. ರಾಜ್ಯದಲ್ಲಿರತಕ್ಕಂತಹ ಬರಗಾಲ ಪರಿಸ್ಥಿತಿಯ ಪರಿಹಾರಕ್ಕಾಗಿ ತಾವು ಕೇಂದ್ರ ಸರಕಾರದ ನೆರವಿಗೆ ಕೋರಿಲ್ಲ. ತಾವು ದಯಮಾಡಿ ಕೇಂದ್ರ ಸರ್ಕಾರದ ನೆರವಿಗೆ ಕೋರಬೇಕು. ಈ ಸದನದಲ್ಲಿ ಕುಳಿತುಕೊಂಡು ಅವರೇನೂ ಸಹಾಯ ಕೊಡುವುದಿಲ್ಲವೆಂದು ಹೇಳಬೇಡಿ. You take all the Opposition Members into confidence and also the ruling party Members. Let us go to the Prime Minister. ಎನ್ನತಕ್ಕಂತಹ ಮಾತನ್ನು ನಾನು ಹೇಳಿದ್ದೆ. ಅದರ ಬಗ್ಗೆ ತಾವೇನೂ ಹೇಳಲಿಲ್ಲ. ಇವತ್ತು ಪ್ರಧಾನ ಮಂತ್ರಿಗಳ ಹತ್ತಿರ ಹೋಗುವುದಕ್ಕೆ ನಿಮಗೆ ತೊಂದರೆ ಏನು? ನಿಯಮ 310 ರಲ್ಲಿ ನಾನು ಒಂದು ಮೋಷನ್ ಅನ್ನು ಕಳಿಸಿದ್ದೇನೆ. ತಾವೇನು ಸ್ಟಾಟಿಸ್ಟಿಕ್ಸ್ ಕೊಟ್ಟಿದ್ದೀರಿ ಆ ಎಲ್ಲಾ ಸ್ಟಾಟಿಸ್ಟಿಕ್ಸ್ ಅನ್ನು ನಾನು ರೆಫ್ಯೂಟ್ ಮಾಡುತ್ತೇನೆ. ತಾವು ಹೇಳಿರತಕ್ಕಂಥಾದ್ದು ಸತ್ಯಕ್ಕೆ ಬಹಳ ದೂರವಾಗಿರತಕ್ಕಂಥಾದ್ದು ಎಂದು ನಾನು ಹೇಳುತ್ತಿದ್ದೇನೆ. ಈಗ ಅದನ್ನು ಹೇಳುವುದಕ್ಕೆ ಹೋದರೆ ಅದರಲ್ಲಿ ರಾಜಕೀಯ ಬೆರೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆಂದು ಹೇಳುತ್ತೀರಿ. ಸದನದ ಸದಸ್ಯರ ಒಂದು ಸಮಿತಿಯನ್ನು ಮಾಡೋಣ, ಈ 3 ತಿಂಗಳಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಪ್ರವಾಸ ಮಾಡೋಣ. ಜಿಲ್ಲಾಧಿಕಾರಿಗಳಿಗೆ ಇವರಲ್ಲಿ ರಾಜಕೀಯ ಬೆರೆಸುವುದು ಬೇಡವೆಂದು ಹೇಳುತ್ತೀರಿ. ಹಾಗಾದರೆ ನಿಮ್ಮ ಹತ್ತಿರ ಎಷ್ಟು ದುಡ್ಡು ಇದೆ, ಸರ್ಕಾರ ಎಷ್ಟು ದುಡ್ಡನ್ನು ಬಿಡುಗಡೆ ಮಾಡಿದೆ ಏಕೆ ಖರ್ಚಾಗಿಲ್ಲ, ಎನ್ನುವುದನ್ನು ನಾವು ಹೇಳೋಣ. ಎಲ್ಲಾ ಪಕ್ಷದವರೂ ಕೂಡ ಇದರಲ್ಲಿ ಇರಬೇಕು. ನೀವೇ ಬೇಕಾದರೆ ಅದಕ್ಕೆ ಅಧ್ಯಕ್ಷರಾಗಿ ಇರಿ. ಇದನ್ನು ಏಕೆ ತಾವು ಒಪ್ಪಿಕೊಳ್ಳಬಾರದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಬೀದರ್‌ನಲ್ಲಿ ಬರಗಾಲ ಇಲ್ಲವೆಂದು ಹೇಳಿದ್ದಾರೆ. ಅದಕ್ಕೆ 99 ಲಕ್ಷ ರೂಪಾಯಿ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. 64 ಲಕ್ಷ ರೂಪಾಯಿ ಖರ್ಚುಮಾಡಿಲ್ಲವೆಂದು ಹೇಳುತ್ತಿದ್ದಾರೆ. ನಾನಾದರೂ ಕೇಳುತ್ತೇನೆ, ಇದೆಲ್ಲಾ ಅದರಲ್ಲಿ

ಸೇರಿದೆಯೆ? ತಾವು ಎಷ್ಟು ಹಣವನ್ನು ಕೊಟ್ಟಿದ್ದೀರಿ? 5 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿನ ವ್ಯವಸ್ಥೆಯ ಸಲುವಾಗಿ ರಿಲೀಸ್ ಮಾಡುತ್ತೇವೆಂದು ಹೇಳಿದ್ದಾರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಫ್ಲಡ್ ರಿಲೀಫ್‌ಗೆ ಎಂದು ಹೇಳಿದ್ದೇವೆ ನೋಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: 64 ಲಕ್ಷ ರೂಪಾಯಿ ಉಳಿದಿದೆ ಎಂದು ಹೇಳಿದಿರಿ. ಇದರಲ್ಲಿ ಅದನ್ನು ಸೇರಿಸಿದ್ದೀರಾ? ಇವತ್ತಿನ ತನಕ 35ಲಕ್ಷ ರೂಪಾಯಿಗಳನ್ನು ಮಾತ್ರ ತಾವು ರಿಲೀಸ್ ಮಾಡಿದ್ದೀರಿ. 99 ಲಕ್ಷ ರೂಪಾಯಿ ಇನ್ನೂ ರಿಲೀಸೇ ಆಗಿಲ್ಲ. ನಾನು ಮೊನ್ನೆ ಕೂಡ ಕೇಳಿಕೊಂಡು ಬಂದಿದ್ದೇನೆ. ಅಷ್ಟು ದುಡ್ಡು ಅಲ್ಲಿಗೆ ಹೋಗಿಲ್ಲ. 1987-88,1988-89ರಲ್ಲಿ ಮಳೆ ವಿಪರೀತವಾಗಿ ಬಿದ್ದು ಬೆಳೆಯೆಲ್ಲಾ ಹಾಳಾಗಿ ಹೋಗಿದೆ. ಅಲ್ಲಿ ಬರಗಾಲ ಇಲ್ಲವೆಂದು ತಾವು ಹೇಳುತ್ತಿದ್ದೀರಿ. ತಾವೇ ಮಂತ್ರಿಗಳಾಗಿದ್ದೀರಿ, ತಮಗೆ ಚೆನ್ನಾಗಿ ವಿಚಾರ ಗೊತ್ತಿದೆ. ಪರಿಸ್ಥಿತಿ ಏನಿದೆಯೆಂದು ಗೊತ್ತಿದೆ.ಆದರೂ ಕೂಡ ತಾವು ಕುಡಿಯುವ ನೀರಿನ ಬಗ್ಗೆ ಏನನ್ನೂ ಹೇಳಿಲ್ಲ. ಈಗ 5 ಕೋಟಿ ರೂಪಾಯಿ ಕೊಟ್ಟಿದೆ ಎಂದು ತಾವು ಹೇಳಿದ್ದೀರಿ. ಇದರಲ್ಲಿ ಬೀದರ್ ಸೇರಿದೆಯೆ? ದಯವಿಟ್ಟು ಹೇಳಬೇಕು. ಕೆಲವು ಹಳ್ಳಿಗಳು ನಾನು ಹೋಗಿ ನೋಡಿದ್ದೇನೆ. ಅಲ್ಲಿ ಪರಿಸ್ಥಿತಿ ಏನಿದೆ ಎಂದರೆ, ಮಂಚದ ಮೇಲೆ ಒಬ್ಬರು ಕುಳಿತು ಒಂದು ಕೊಡ ನೀರನ್ನು ತಂದು ಸ್ನಾನ ಮಾಡುತ್ತಾರೆ, ಮಂಚದ ಕೆಳಗೆ ಒಂದು ಬುಟ್ಟಿಯನ್ನು ಇಟ್ಟು ಆ ನೀರಿನಲ್ಲಿ ಬಟ್ಟೆಯನ್ನು ಒಗೆಯುತ್ತಾರೆ. ಇಂಥ ಪರಿಸ್ಥಿತಿ ಇದ್ದರೂ ಕೂಡ ಅಲ್ಲಿ ಬರಗಾಲವಿಲ್ಲ ಎಂದು ತಾವು ಹೇಳುತ್ತಿದ್ದೀರಿ. ಇದು ಸರಿಯೆ? ದಯವಿಟ್ಟು ಹೇಳಿ. ಶ್ರೀ ಎಂ. ವೈ. ಘೋರ್ಪಡೆ: ನಾನು ಮಧ್ಯೆ ಪ್ರವೇಶ ಮಾಡಿ ಕೇಳಿರತಕ್ಕ ಪ್ರಶ್ನೆಗೆ ಮಾನ್ಯ ಸಚಿವರಾದ ಖರ್ಗೆಯವರ ಪತ್ತಿರ ಉತ್ತರವಿಲ್ಲ ಎಂದು ಅವರ ಭಾಷಣದಿಂದ ಸ್ಪಷ್ಟವಾಗುತ್ತದೆ. ಬರಗಾಲದ ಬಗ್ಗೆ ಉತ್ತರವನ್ನು ಹೇಳುವಾಗ ಯಾವುದೇ ಇಲಾಖೆಯಾಗಲೀ ಕುಡಿಯುವ ನೀರಿನ ಸಮಸ್ಯೆಯನ್ನು ಬಿಟ್ಟು ಚರ್ಚೆಮಾಡುವುದು ಅಸಾಧ್ಯ. ಇದು ಅತಿ ಮುಖ್ಯವಾದ ವಿಷಯ. ಆದ್ದರಿಂದ ನಾನು ಹೇಳುತ್ತಿದ್ದೇನೆ. ಈ ಅಂಕಿಸಂಖ್ಯೆಗಳನ್ನು ನಾನು ಸ್ವತಃ ತಯಾರು ಮಾಡಿದ್ದಲ್ಲ, ನಮ್ಮ ಬಜೆಟ್‌ನಲ್ಲಿರತಕ್ಕ ಅಂಕಿ ಸಂಖ್ಯೆಗಳು ಅದು ಯಾವ ಕಾರ್ಯಕ್ರಮಗಳನ್ನು ಸಾಧನೆ ಮಾಡುವುದಕ್ಕೆ ಇತ್ತು ಆ ಕಾರ್ಯಕ್ರಮಗಳ ಬಗ್ಗೆ ಸರ್ಕಾರ ಏನು ಮಾಡಿದೆ ಎಂಬುದನ್ನು ಕೇಳುವುದಕ್ಕೆ ನಮಗೆ ಹಕ್ಕು ಇದೆ. ನಾನು ಇದರ ಬಗ್ಗೆ ಹೇಳುವುದಾದರೂ ಇಷ್ಟೆ. ಜುಲೈ ತಿಂಗಳಲ್ಲಿ ಕುಡಿಯುವ ನೀರಿಗೋಸ್ಕರ 35ಕೋಟಿ ರೂಪಾಯಿಗಳನ್ನು ಮಾತ್ರ ಸೇರಿಸಿತ್ತು. ಜುಲೈ ತಿಂಗಳಲ್ಲಿ ಅದಕ್ಕೆ ಮತ್ತೆ 25 ಕೋಟಿ ರೂಪಾಯಿಗಳನ್ನು ಸೇರಿಸಿ ಒಟ್ಟು 60 ಕೋಟಿ ರೂಪಾಯಿ ಎಂದು ಮಾಡಿದ್ದಾಯಿತು. ಇದಕ್ಕೆ ಕಾರಣ ಏನೆಂದರೆ ಕರ್ನಾಟಕದಲ್ಲಿ ಭೀಕರ ಪರಿಸ್ಥಿತಿ ಇರುವಾಗ 35ಕೋಟಿ ರೂಪಾಯಿಗಳಿಂದ ಸಮಸ್ಯೆಯನ್ನು ಸಂಪೂರ್ಣವಾಗಿ ಅಥವಾ ಜನರಿಗೆ ತೃಪ್ತಿಯಾಗುವ ರೀತಿಯಲ್ಲಿ ಪರಿಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದನ್ನು ನಾವು ಮನಗಂಡು ಇದನ್ನು ಮಾಡಿದ್ದು. ಆ 35 ಕೋಟಿ ರೂಪಾಯಿಗಳಲ್ಲಿ ಫಿಸಿಕಲ್ ಟಾರ್ಗೆಟ್ ಏನಿತ್ತು ಎಂದರೆ 2800ಬೋರ್‌ವೆಲ್‌ಗಳು, 608 ಮಿನಿ ವಾಟರ್ ಸಪ್ಲೈ ಸ್ಕೀಂಗಳು, 638 ಪೈಪ್ ವಾಟರ್‌ಸಪ್ಲೈ ಸ್ಕೀಂಸ್ ಆಗಬೇಕು. ಇದು ಈ 35 ಕೋಟಿ ರೂಪಾಯಿಗಳ ಕಾರ್ಯಕ್ರಮ. ಇದಕ್ಕೆ ಮತ್ತೆ 25 ಕೋಟಿ, ರೂಪಾಯಿಗಳನ್ನು ಸೇರಿದ ಮೇಲೆ ಫಿಸಿಕಲ್ ಟಾರ್ಗೆಟ್ ನ್ಯಾಯವಾಗಿ ಎಷ್ಟಿರಬೇಕೆಂದರೆ ಒಟ್ಟು ಬೋರ್‌ವೆಲ್‌ಗಳು 5ಸಾವಿರ. ಈ 60ಕೋಟಿ ರೂಪಾಯಿಗಳಿಂದ ಕಳೆದವರ್ಷ ಕರ್ನಾಟಕದಲ್ಲಿ ವಿಶೇಷವಾಗಿ ನಾವು ಕೆಲಸಮಾಡಲಿಕ್ಕೆ ಸಾಧ್ಯವಿತ್ತು. ಇದು ಮಾನ್ಯ ಖರ್ಗೆಯವರ ಡ್ರಾಟ್ ರಿಲೀಫ್ ಅಲ್ಲಿದೆ ಇದೆ. ಡ್ರಾಟ್ ರಿಲೀಫ್ ಎಂದರೆ ಅದು ಯಾವಾಗಲೂ ಪ್ರತ್ಯೇಕವಾದ ಕಾರ್ಯಕ್ರಮ. ನಮ್ಮ ಬಜೆಟ್ ಡೆವಲಪ್‌ಮೆಂಟ್

ಸ್ಕೀಂಸ್‌ನಲ್ಲಿ ಮಾಡುವುದಕ್ಕೆ ಸಾಲುವುದಿಲ್ಲ. ಅದಕ್ಕೆ ಪೂರಕವಾಗಿ ಉಪಯೋಗ ಮಾಡಲಿಕ್ಕೆ ಕಾರ್ಯಕ್ರಮ ಆವರದ್ದು. I am talking of the main budget. It is a commitment.

MR SPEAKER. Don't you think that, when the budget is going to be presented?

SRI GHORPADE: This is about 1990-91. This is about what should have been done by March 31st. I am talking of July 1990. The year is coming to an end and we should have completed this.

MR. SPEAKER: Eight months have lapsed.

SRI. M.Y. GHORPADE: The new budget will come for 91-92. I am talking of the programme for 1990-91. I am saying that, upto July, the Programme for water supply was Rs. 34.8 Crores to be precise and Rs. 25 crores was added in July. The Hon. Finance Minister made a solemn assurance.

MR . SPEAKER: I was under the impression that the then Finance Minister made some statement here that he was expecting certain revenues.

SRI. M.Y. GHORPADE: I was very much part of the Karnataka cabinet then and it is also largely in response to what I had seen in the villages and what I had reported to both the Finance Minister and the Chief Minister in the Cabinet that these additions were made to Rural Water Supply, Housing and for Latrines. I will give you those figures. The financial management was so designed that we could at that point of time in July, afford to add Rs. 25 crores here. Another Rs. 15 crores of Housing and Rs. 5 crores to Sanitation and for Hyderabad-Karnataka Development, it was raised from Rs. 45 crores to Rs. 50 crores.

Quite a bit of additional allotment was made in July because we were confident of financial management , we were confident of controlling the financial deficit in the State in spite of increasing allocations to the programme vitally needed by the people. ಬಡವರ ಬಗ್ಗೆ ಭಾಷಣ ಮಾಡುತ್ತೇವೆ, ಬಡಜನರಿಗೆ ಬೇಕಾತಂಥ ಕಾರ್ಯಕ್ರಮಕ್ಕೆ ವಿಶೇಷ ಆದ್ಯತೆಯನ್ನು ಕೊಡುವಾಗ ಹಣಕಾಸಿನ ಜವಾಬ್ದಾರಿಯಿಂದ ಕೊಟ್ಟಿರುವುದೇ ಹೊರತು ಯಾವ ರಾಜಕೀಯಕೋಸ್ಕರವಾಗಿ ಮಾಡಿದ್ದಲ್ಲ. ಏತಕ್ಕೆ ಹೇಳುತ್ತಿದ್ದೇನೆಂದರೆ ನಾನೇ ಹೋಗಿ ಡಿವಿಜನಲ್ ಲೆವಲ್‌ನಲ್ಲಿ ನೋಡಿದ್ದೇನೆ.

SRI M. VEERAPPA MOILY: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರಾದಂಥ ಘೋರ್ಪಡೆಯವರು ಮಾತನಾಡುವಾಗ ಬಹಳ ಕೂಲಂಕುಶವಾಗಿ ಹೇಳಿದ್ದಾರೆ. ಬಜೆಟ್‌ನಲ್ಲಿ 38 ಕೋಟಿ ರೂಪಾಯಿಗಳ ಕಮಿಟ್‌ಮೆಂಟ್ ಏನು ಇದೆ, The commitment in the budget relates to only Rs. 34 or 35 crores in so far as the additionality which was announced while replying to the budget by the then Finance Minister, namely about Rs. 250 crores Rs. 25 crores was the component of it, that has not been voted by this House. Out of Rs. 250 crores , Rs. 25

crores was the water supply component and was only the assumption anticiapating certain revenues in the years to come and in the months to come, after the then Hon. Finance Minister replied. That was an assumption up to 31st March, not a commitment in the budget. Ther are two parts in what the hon.member has said. One about commitment in the budget which was voted. That is only Rs. 34 or 35 crores as far as water component is concerned. Out of it, if I remember correct, Rs. 12 crores was the component of scarcity or water supply, and , of course we can always reappropriate from the other funds of water supply to the scarcity. ಅದನ್ನು ಯಾವಾಗಲೂ ಕೊಡಬಹುದು. That is a different matter. ಅಫೇಕ್ಷನಾಲಿಟಿ ನಾವು ಕೊಡಬಹುದು That is a different matter. ಆದರೆ Rs. 25 crores was not the commitment. ಏತಕ್ಕೆಂದರೆ, ಇಲ್ಲಿ ಮಾತನಾಡುವಾಗ ಸಾರ್ವಜನಕರಿಗೆ ಅಥವಾ ಈ ಸದನಕ್ಕೆ ನಾವು ಸ್ಪಷ್ಟವಾದ ಚಿತ್ರವನ್ನು ಸರ್ಕಾರದ ಪರವಾಗಿ ಕೊಡಬೇಕಾಗುತ್ತದೆ.

(INTERRUPTIONS)

ಶ್ರೀ ಡಿ. ಬಿ. ಚಂದ್ರೇಗೌಡ: ಅವರು ಸದನದಲ್ಲಿ ಹೇಳಿದ್ದನ್ನು ಹೇಳುತ್ತಿದ್ದಾರೆ.

SRI M. VEERAPPA MOILY: That is a point for debate. That was an assumption given and not voted in the budget. It is not in the Appropriation Bill, nor Appropriation Act. That is a very clear picture. Hon.Members has also worked as Finance Minister, it is not part and parcel of the Appropriation Act.

(INTEERUPTIONS)

SRI M. MALLIKARJUNA KHARGE: ಈಗ ಮೊದಲು ಬರಗಾಲದಿಂದ ನನ್ನನ್ನು ಮುಕ್ತ ಮಾಡಿ. ಆಮೇಲೆ ಸ್ಪೆಶಲ್ ಸಬ್‌ಜೆಕ್ಟ್ ಇಟ್ಟು ಒಂದು ದಿವಸ ಚರ್ಚೆ ಮಾಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ: ಇದು 11ನೇ ತಾರೀಖು ಇದೆ. ಇವತ್ತು ಇದರ ಬಗ್ಗೆ ಚರ್ಚೆ ಇಲ್ಲ. ಕುಡಿಯುವ ನೀರಿನ ಬಗ್ಗೆ ಬರಗಾಲದ ಬಗ್ಗೆ ಎಷ್ಟು ಹಣ ಕೊಡಬೇಕು. ಆ ಆಯವ್ಯಯದಲ್ಲಿ ಎಷ್ಟು ಪ್ರಾವಿಷನ್ ಇದೆ ಎಂಬ ಬಗ್ಗೆ ಅವರು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ.

Financial assumption whether it is correct or not, on 11th we are presenting the budget. We will be knowing what is the financial position. Whether that assumption is correct or not why deteriorated , whether it has deteriorated at all. ಇದೇ 11ರಂದು ಬಜೆಟ್ ಪ್ರಸೆಂಟೇಷನ್ ಮಾಡುತ್ತಿದ್ದೇವೆ. ಸಂಪೂರ್ಣ ಚಿತ್ರವನ್ನು ಅಂದು ಕೊಡುತ್ತಿದ್ದೇವೆ.

It should not be one way traffic. That is the balance sheet of the Government which will be presented on the 11th. I think we can afford to wait upto that. We have a debate on that and then we can discuss.

SRI. D. B. CHANDRE GOWDA: I really commend the Minister trying to defend, that is not the point. He wants to know what exactly is the position?

SRI M.Y. GHORPADE: I have also handled the Fiinances. I had the honour to do so for 6 or 7 years. I think it was before Mr. Moily did that. I am unlikely to make irresponsible statement. On the other hand, I maintain that it was an irresponsible statement that was made on behalf of this Government when they said that they were not aware of the commitment made that was made on behalf of the Government of Karnataka by Mr. Rajashekhara Murthy and Myself in July Budget. Mr. Moily knows very well, after all even the budget is a solemn assurance given by the ruling party as to how they are going to handle the finance, what will be the income, and what will be the expenditure. Nobody is going to hang the Finance Minister or the Chief Minister or anybody else, if the performance does not completely tally with it. In that sense , it is not a legal commitment. You cannot go to a court and say that this is in the budget and that this did not happen. But it certainly enables the Members to say that it was a solemn commitment made by you, why did you not do it. therefore, in that sense, as an indication it is not a legal commitment. But it is a solemn commitment about the Government as to how it deploys its scarce resources. In that sense, when the grants are being voted in the House-afrer all I was replying to my grants, Rural Development and the Hon.Finance Minister was replying to his grants, certainly we were well within our constitutional responsibility to announce on behalf of the Government that we have made certain alterations or improvements in the budget and we have realised that certain more priorities have to be given and we are going to give it and we have announced. Certainly the opposition or any member on this side is entitled to hold them responsible that you promised, what have you done and in that senses with all due respect to Mr. Moily, I think that his intervention is not helpful and it does not in any way.

SRI M. VEERAPPA MOILY: You have not properly interpreted my statement. ಪರಸ್ಪರ ಸೌಜನ್ಯವಾದರೂ ತೋರಿಸಬೇಕಲ್ಲ.

ಶ್ರೀ ವಾಟಾಳ್ ನಾಗರಾಜ್: ಸೌಜನ್ಯತೆ ಕಾಣುತ್ತಿಲ್ಲ ಪರಸ್ಪರ ವಾದ ವಿವಾದ ಆಗುತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಅದನ್ನು ನಾವು ನೋಡಿಕೊಳ್ಳುತ್ತೇವೆ.

ಅಧ್ಯಕ್ಷರು: ಎಲ್ಲಾ ನಗುಮುಖದಲ್ಲಿ ನಡೆಯುತ್ತಿದೆ. ಆದ್ದರಿಂದ ಸೌಜನ್ಯತೆಗೆ ಅಭಾವ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ನಮ್ಮ ಕೆಲಸ ಅವರು ಮಾಡುತ್ತಿದ್ದಾರೆ.

ಆದ್ದರಿಂದ ನಾವು ಸಹಕಾರ ಕೊಡುತ್ತಿದ್ದೇವೆ.

ಶ್ರೀ ಎಂ. ವೈ. ಘೋರ್ಪಡೆ: ನಾನು ಹೇಳುತ್ತಿರುವುದು ಬೇರೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಸನ್ಮಾನ್ಯ ಶಾಸಕರಾದಂಥ ಹಾಗೂ ಮಾಜಿ ಸಚಿವರಾದಂಥ ಘೋರ್ಪಡೆಯವರ ವಾದಕ್ಕೂ ನನ್ನ ವಾದಕ್ಕೂ ಏನೂ ವ್ಯತ್ಯಾಸವಿಲ್ಲ. That is where you have mistaken. You have not understood what I have said. Absolutely there is no difference. 'Not helpful' all these epithets may not be necessary. I admit you are more intelligent than me . No doubt I agree

SRI H. EKANTHAIAH: Both are intelligent.

(INTERRUPTIONS)

ಶ್ರೀ ಪಾಟೀಲ್ ನಾಗರಾಜ್: ನಿಮ್ಮದು ಒಂದು ತರಹ ಬುದ್ಧಿವಂತಿಕೆ, ಅವರದು ಒಂದು ತರಹ ಬುದ್ಧಿವಂತಿಕೆ. ಅದನ್ನು ಒರೆ ಹಚ್ಚಬೇಕಾಗಿಲ್ಲ.

SRI M. VEERAPPA MOILY: What I said was epithets need not be used. The question is very simple. Whether, it is part and parcel of his budget passed by this House. My answer was, it was not. What was assumed and what was assured on the floor of the House during the course of the reply was not part and parcel of the budget passed in the House. I still stand on that. Let us make it very clear because we should not go with a wrong impression outside. Even while the then Hon'ble Rural Development Minister put his Demand for vote, this Rs. 25 crores was not incorporated in that demand. Let us be very clear. It was an assurance given on behalf of the Government.

(INTERRUPTIONS)

MR. SPEAKER: He can take care of himself.

SRI M. VEERAPPA MOILY: I can take care of myself. Here there is some misunderstanding, not understanding of things.

(Interruptions)

SRI M. Y. GHORPADE: During budget discussion whether in parliament or here I am entitled to

MR. SPEAKER: Would you like to meet this particular point?

SRI M. Y. GHORPADE: Sir, it is a native argument if I may say so. When replying to the budget discussion or demands for grants whether in Parliament or here, the Minister on behalf of the government is fully entitled to make any alteration on the floor of the House. How many times a minister has not made an assurance on the floor of the house modifying these things and given solemn assurance by saying yes, we will accept this and we will do this? Therefore, the simpler thing for the Government is, that instead of going into legal argument because there is not law involved here, whether the assurance given by the then government is going to be hououred or not by this government. They are fully entitled not to honour the assurance given.

They are fully entitled not to spend that 25 crores. They may not spend 35 crores also and tell the House when they were not able to spend this 35 crores also. There is no legal compulsion either for 25 crores or 35 crores.

SRI M. VEERAPPA MOILY: Yes, some solemn assurance was given by the Hon'ble Minister at that time. Is it not the duty of the government to keep it up? Yes, I agree with that. That is all the point. But that always depends upon the mobilisation of funds in the months to come.

ಅದರ ಬಗ್ಗೆ ಮುಂದೆ ಚರ್ಚೆ ಬರುತ್ತದೆ, ನಾವು ಮಾತನಾಡೋಣ.

MR. SPEAKER: Mr. Moily, it is a question of credibility of the Finance Minister. The Finance Minister at a given point of time makes a commitment to this august House saying in addition to 35 crores which I have proposed in the budget proposals I am able providing another 25 crores in order to strengthen the drinking water facilities in the rural areas, so on and so forth. Does it or does it not become a commitment on the part of the Government.

SRI M. VEERAPPA MOILY: That is a point we will debate.

MR. SPEAKER: Is it open for debate or the commitment is binding on the Government.

ಶ್ರೀ ಎಂ.ವೈ. ಘೋರ್ಪಡೆ: ನಾನು ಇನ್ನೊಂದು ಮಾತನ್ನು ಹೇಳಿ ಮುಗಿಸುತ್ತೇನೆ. ಇದು ಬರೀ ಕಮಿಟ್‌ಮೆಂಟ್ ಅಷ್ಟೇ ಅಲ್ಲ. ಡಿವಿಜನಲ್ ಲೆವೆಲ್‌ನಲ್ಲಿ ಜಿಲ್ಲಾಧಿಕಾರಿಗಳು ಆಫಿಷಿಯಲ್ ನಾನ್ ಆಫಿಶಿಯಲ್ಸ್ ಸೇರಿ ಚರ್ಚೆ ಮಾಡಿ ಎಮರ್ಜೆನ್ಸಿ ಪ್ರೋಗ್ರಾಮ್ ಒಂದನ್ನು ತಯಾರು ಮಾಡುವುದಕ್ಕೆ ನಾವು ಸರ್ಕಾರದ ವತಿಯಿಂದ ಹೇಳಿದ್ದೀವಿ. ಎಮರ್ಜೆನ್ಸಿ ಪ್ರೋಗ್ರಾಮ್ ಎಂದರೆ ಒಂದೊಂದು ತಾಲ್ಲೂಕಿನಲ್ಲಿ 5-10 ಕಡೆ ಬಹಳ ಕಷ್ಟ ಪರಿಸ್ಥಿತಿ ಎಲ್ಲಿದೆ, ಬೋರ್‌ವೆಲ್ ಹಾಕಿದರೂ ನೀರು ಸಿಗುತ್ತಿಲ್ಲ, ಅಂತಹ ಕಡೆ ಬೇರೆ ಕಡೆಯಿಂದ ನೀರನ್ನು ತರಲೇಬೇಕಾಗುತ್ತದೆ. ಅಂತಹ ಹಳ್ಳಿಗಳನ್ನು ಐಡೆಂಟಿಫೈ ಮಾಡಿ ಯುದ್ಧದೋಪಾದಿಯಲ್ಲಿ ಬರಗಾಲ ಬರುವುದಕ್ಕಿಂತಾ ಮುಂಚೆ ಮಾಡಬೇಕೆಂದು ಮಾಡಿದ್ದೇವೆ. ನನ್ನ ತಾಲ್ಲೂಕಿನಲ್ಲೂ ಇಂತಹ 6-7 ಹಳ್ಳಿಗಳು ಇದ್ದು ಈ ವಿಷಯ ನನಗೆ ತಿಳಿದಿದೆ. ಇದು ಕಮಿಟ್‌ಮೆಂಟ್ ಅಷ್ಟೇ ಅಲ್ಲ, ಆ ಕಾರ್ಯಕ್ರಮವನ್ನು ಯಾವ ರೀತಿ ಕಾರ್ಯಗತ ಮಾಡಬೇಕೆಂದು ಇದರ ಬಗ್ಗೆ ಡಿವಿಜನಲ್ ಲೆವೆಲ್‌ನಲ್ಲಿ ಸಾಕಷ್ಟು ಚರ್ಚೆಯಾಗಿ ತೀರ್ಮಾನಕ್ಕೆ ಬಂದಿದ್ದೇವೆ. ಇದು ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯದರ್ಶಿಗಳಿಗೆ ಗೊತ್ತಿದೆ. ಆ ಕಾರ್ಯಕ್ರಮ ಏನಾಯಿತು ಎಂಬುದನ್ನು ಕೇಳುವ ಹಕ್ಕು ನಮಗಿದೆ. ಇದಕ್ಕೆ ಸರಿಯಾದ ಉತ್ತರವನ್ನು ಅವರು ನಮಗೆ ಹೇಳಬೇಕು. ಈ ಬಗ್ಗೆ ಮಾನ್ಯ ಏಗ್ನೆಯವರ ಹತ್ತಿರ ಅಂಕಿಸಂಖ್ಯೆ ಇಲ್ಲದಿದ್ದರಿಂದ ಅವರು ಹೇಳುವುದಕ್ಕಾಗುವುದಿಲ್ಲ. ಆ ಕಾರಣದಿಂದ ಸರ್ಕಾರದ ವತಿಯಿಂದ ಜವಾಬ್ದಾರಿಯುತವಾದ ಸಂಪೂರ್ಣ ಅಂಕಿಸಂಖ್ಯೆಯಿಂದ ನಮಗೆ ಉತ್ತರ ಬರಬೇಕೆಂದು. ನಾನು ಕೇಳುತ್ತಿದ್ದೇನೆ. ಮಾನ್ಯ ಏಗ್ನೆಯವರ ಮನಸ್ಸಿನಲ್ಲಿ ಜವಾಹರ್‌ರೋಜ್ಗಾರ್ ಯೋಜನೆ ಬಗ್ಗೆ ಏನು ವಿಚಾರ ಇದೆ ಅದು ಸರಿಯಿಲ್ಲ ಎಂದು ನನಗನ್ನಿಸುತ್ತದೆ. ಮಾನ್ಯ ಅಧ್ಯಕ್ಷರೇ, ನೀವು ಇದರ ಬಗ್ಗೆ ಗಮನ ಕೊಡಬೇಕು. ರೋಜ್ಗಾರ್ ಯೋಜನೆಯಲ್ಲಿ ಬೇಕಾದಷ್ಟು ಹಣ ಇದೆ. ನಾವು ಅದನ್ನು ಬರಗಾಲದಲ್ಲಿ

ಉಪಯೋಗಿಸಬಹುದೆಂದು ವಿಚಾರ ಅವರಲ್ಲಿ ಇದೆ. ಅದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಹೋದ ವರ್ಷ ಮಾರ್ಚಿ ತಿಂಗಳಲ್ಲಿ 120 ಕೋಟಿ ನಮ್ಮ ಕರ್ನಾಟಕಕ್ಕೆ ಬರಬೇಕಾಗಿತ್ತು. 120 ರಲ್ಲಿ 100 ಕೋಟಿ ರೂಪಾಯಿ ಖರ್ಚಾಯಿತು. ಮಾರ್ಚಿ 90 ಕ್ಕೆ ಕರ್ನಾಟಕದಲ್ಲಿ 120 ಕೋಟಿಯಲ್ಲಿ 100 ಕೋಟಿ ರೂಪಾಯಿಗಳು ಜವಾಹರ್ ರೋಜ್ಗಾರ್ ಯೋಜನೆಯಲ್ಲಿ ಖರ್ಚಾಯಿತು. ನಾನು ಮಂತ್ರಿ ಆಗಿದ್ದಾಗ 20 ಕೋಟಿ ರೂಪಾಯಿಗಳು ಲ್ಯಾಪ್ಸ್ ಆಗದಹಾಗೆ ಅದನ್ನು ಸ್ಪಿಲ್ ಓವರ್‌ನಲ್ಲಿ ಸೇರಿಸುತ್ತೇವೆ ಎಂದು ಹೇಳಿದ್ದೆ. ಮಾನ್ಯ ಖರ್ಗೆಯವರು 1991 ರಲ್ಲಿ 66 ಕೋಟಿ ಮಾತ್ರ ಬಂದಿದೆ ಎಂದು ಹೇಳುತ್ತಾರೆ. ಈಗ 66 ಕೋಟಿ ಬಂದಿದ್ರೆ, ಹೋದವರ್ಷ 100 ಕೋಟಿ ಖರ್ಚಾಗಿತ್ತು. ಈಗ 66 ಕೋಟಿ ಬಂದಿದೆ ಅಂದರೆ ಕೇಂದ್ರದಲ್ಲಿ ನೀವು ಇದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ 120 ಕೋಟಿಯಲ್ಲಿ ಕೇಂದ್ರದಿಂದ ಬರುವ ಹಣ 80 ಪರ್ಸೆಂಟ್ ಇದೆ. ಎಂದರೆ ಹೆಚ್ಚುಕಡಿಮೆ 100 ಕೋಟಿ ಕೇಂದ್ರದಿಂದ ಬರುತ್ತದೆ. ಕರ್ನಾಟಕದ ಹಣ 20 ಕೋಟಿ ಮಾತ್ರ. ಹೀಗಿರುವಾಗ 120 ಕೋಟಿ ಖರ್ಚಾಗುವ ಕಾರ್ಯಕ್ರಮದಲ್ಲಿ ಕೇಂದ್ರದ್ದು 100 ಕೋಟಿ ಬರಬೇಕು. ಕೇವಲ 66 ಕೋಟಿ ಬಂದಿದೆ ಎಂದು ಹೇಳುವುದಾದರೆ ಅದು ಬಹಳ ಸೀರಿಯಸ್ ಆಗುತ್ತದೆ. ಈ ವಿಷಯವನ್ನು ಕೇಂದ್ರದ ಹಣಕಾಸಿನ ಸಚಿವರು ಜೊತೆ, ಪ್ರಧಾನಿಗಳ ಜೊತೆ ಮಾತನಾಡಿ ಕೇಂದ್ರದ ಕಾರ್ಯಕ್ರಮಕ್ಕೆ ರಾಜ್ಯದಲ್ಲಿ ಇಷ್ಟು ಕುಂಠಿತವಾಗಿದೆ ಎಂದು ಕೇಳುವ ಹಕ್ಕು ಕರ್ನಾಟಕಕ್ಕೆ ಇದೆ. ಅದನ್ನು ತಾವು ಕಳೆದುಕೊಳ್ಳಬಾರದು. ಆ ಯೋಜನೆಯಲ್ಲಿ ಬೇಕಾದಷ್ಟು ಹಣ ಇದೆ. ಹಣದಿಂದ ಬರಗಾಲದ ಕಾರ್ಯಕ್ರಮ ಮಾಡುವುದಕ್ಕೆ ಸಾಧ್ಯವಿದೆ ಎಂದು ಹೇಳುವುದನ್ನು ನಾನು ನಂಬುವುದಿಲ್ಲ. ಆ ಕಾರ್ಯಕ್ರಮ ಆಯಾಯ ಹಳ್ಳಿಗೆ ನೇರವಾಗಿ ಬರುತ್ತದೆ. ಹಳ್ಳಿಗೆ ಬೇಕಾದ ಕಾರ್ಯಕ್ರಮವನ್ನು ಅವರು ಆಗಲೆ ಹಾಕಿಕೊಂಡಿರುತ್ತಾರೆ. ಆ ಜನರಿಗೆ ಬರಗಾಲ ಬಂದಾಗ ಹೆಚ್ಚಿಗೆ ಕಾಮಗಾರಿಗಳನ್ನು ಕೊಡುವ ಅವಶ್ಯಕತೆ ಬಂದಾಗ ಅದರ ಉಪಯೋಗ ಬಹಳಷ್ಟು ಆಗುವುದಿಲ್ಲ. ಅದರ ಜೊತೆಗೇ ಬರಗಾಲದ ಕಾರ್ಯಕ್ರಮಗಳನ್ನೂ ಮಾಡಬೇಕಾಗುತ್ತದೆ. ಇವತ್ತು 120 ಕೋಟಿ ಬರುವ ಕಡೆ 66 ಕೋಟಿ ಮಾತ್ರ ಬಂದಿದೆ. ಇದು ಬಹಳ ಗಮನಾರ್ಹ ವಿಷಯ. ಇದನ್ನು ಬಹಳ ಸೀರಿಯಸ್ಸಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು 135 ತಾಲ್ಲೂಕುಗಳಲ್ಲಿ ಬರಗಾಲ ಇರಬಹುದು. ಕೆಲವು ಕಡೆ ಹೆಚ್ಚಿನ ಭೀಕರ ಪರಿಸ್ಥಿತಿ ಇರಬಹುದು. ಈ ಪರಿಸ್ಥಿತಿಯಲ್ಲಿ ಹೆಚ್ಚಿನ ಸಹಾಯ ಬೇಕಾಗುತ್ತದೆ. ಇವತ್ತಿನ ದಿವಸ ನೇರವಾಗಿ ಹೆಚ್ಚಿನ ಉದ್ಯೋಗ ಒದಗಿಸುವುದಕ್ಕೆ ಬೇಕಾದಷ್ಟು ಸೌಕರ್ಯಗಳು ಇವೆ. ಆ ಕೆಲಸವನ್ನು ಮಾನ್ಯ ಖರ್ಗೆಯವರು ಮಾಡಬೇಕು. ಬೇಕಾದಷ್ಟು ಹಣ ಇದೆ ಬರಗಾಲ ಅದರಿಂದ ನೀಗಿಸಿಕೊಳ್ಳುವುದಕ್ಕೆ ಸಾಧ್ಯ ಇದೆ ಎನ್ನುವ ವಿಚಾರ ಅವರು ವ್ಯಕ್ತಪಡಿಸಲಿಕ್ಕೆ ಪ್ರಯತ್ನ ಮಾಡಿದರೆ ಆಗ ಬರಗಾಲ ವಿರುದ್ಧ ನಾವು ಏನು ಒಂದು ಯುದ್ಧ ಮಾಡಬೇಕಾಗುತ್ತದೆ ಅದು ಸ್ವಲ್ಪ ಕುಂಠಿತವಾಗುತ್ತದೆ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. The Hon'ble Speaker should help me and the House to get clear out figures on water supply and also clear out policy statement what they intend to do about these commitments on rural water supply because it is a very very serious matter. There are no rigs available, officers are available . In villages we had asked them to identify. They can easily go to villages and put these things and solve the problem in the next 2-3 months if they have not already done so. Our idea was by March it should be fully poised to ensure that there is no serious water problem in any village in Karnataka where tremendous

human sufferings will take place. I hope the Hon.ble Minister will also admit that my intervention is not politically motivated. It is motivated purely out of consideration and concern, perhaps the poorest sections of humanity living in the villages of Karnataka.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಒಂದು ಕ್ಲಾರಿಫಿಕೇಷನ್ ಇದೆ ಏಕೆಂದರೆ, ನಾನು ಹೇಳುವಾಗ ಮೊದಲೇ ಹೇಳಿದೆ, ಸ್ಕೇರ್‌ಸಿಟಿ ಹಣ ಏನಿದೆ ಇದಕ್ಕೆ ಪೂರಕವಾಗಿ ಇವೆಲ್ಲಾ ಸ್ಕೀಮ್ಸ್ ಒಂದು ಕಡೆ ಇವೆ. ಅದರ ಜೊತೆಯಲೇ ಈ ಹಣವನ್ನು ಕೂಡ ಖರ್ಚುಮಾಡಬೇಕು ಎಂದು ಹೇಳಿದೆನೇ ಹೊರತು ಅದನ್ನೇ ಯೂಸ್ ಮಾಡಿ ಎಂದು ಅಲ್ಲ. ಅವರವರ ಕ್ಷೇತ್ರವಲ್ಲಿ ಅವರ ಉಪಯೋಗ ಮಾಡಿಕೊಂಡರೆ, ನಮ್ಮದು ಅನೇಕ ಸಮಸ್ಯೆಗಳು ಬಗೆಹರಿಯುತ್ತವೆ ಎನ್ನುವ ದೃಷ್ಟಿಯಿಂದ ನಾನು ಹೇಳಿದೆನೇ ಹೊರತು, ಇದೇ ಹಣ ಡೈವರ್ಟ್ ಮಾಡಿ ಎಲ್ಲಾ ಕಡೆ ಮಾಡುತ್ತೇವೆ ಎನ್ನತಕ್ಕದ್ದು ಇಲ್ಲ.

ಈಗ ಲೇಟೆಸ್ಟ್ ಫಿಗರ್ಸ್ ನಾನು ಹೇಳುತ್ತೇನೆ. ಈಗ ಜವಾಹರ್ ರೋಜ್‌ಗಾರ್ ಯೋಜನೆಗೆ ಮೊನ್ನೆಯವರೆಗೆ 66 ಕೋಟಿ ರೂಪಾಯಿ ಬಿಡುಗಡೆ ಮಾಡಿದೆ. ಪುನಃ ಹೊಸದಾಗಿ ಅಂಕಿ ಸಂಖ್ಯೆ ಕೊಟ್ಟರು. ಜನವರಿ 1991ರವರೆಗೆ 66 ಕೋಟಿ 32 ಲಕ್ಷ ರಿಲೀಸ್ ಆಗಿದೆ. ಥರ್ಡ್ ಇನ್‌ಸ್ಟಾಲ್‌ಮೆಂಟ್ ಪುನಃ ಅವರು ರಿಲೀಸ್ ಮಾಡಿದ್ದು 7-2-91ಕ್ಕೆ 21 ಕೋಟಿ 68 ಲಕ್ಷ ರೂಪಾಯಿ. ಆಮೇಲೆ ಫೋರ್ತ್ ಇನ್‌ಸ್ಟಾಲ್‌ಮೆಂಟ್ ಆಫ್ ಸ್ಟೇಟ್ ಷೇರ್ ರಿಲೀಸ್ಡ್ ಆನ್ 7-2-91 4 ಕೋಟಿ 82 ಲಕ್ಷ ರೂಪಾಯಿ. ಮತ್ತು ಅನ್ ಸ್ಪೆಂಟ್ ಬ್ಯಾಲೆನ್ಸ್ 28 ಕೋಟಿ ರೂಪಾಯಿ. 121 ಕೋಟಿ 65 ಲಕ್ಷ ಸೋ ಆ್ಯಸ್ ಇಟ್ ಈಸ್ ಅಂದರೆ 66 ಕೋಟಿ ಅಲ್ಲ, ಈಗಾಗಲೇ ಸುಮಾರು 90 ಕೋಟಿ ಹತ್ತಿರ ನಮಗೆ ಬಂದು ಮುಟ್ಟಿದೆ. ಮತ್ತೆ ನಾಲ್ಕನೇ ಇನ್‌ಸ್ಟಾಲ್‌ಮೆಂಟಿನಲ್ಲಿ ಇನ್ನೊಂದು 15 ಕೋಟಿ 56 ಲಕ್ಷ ಮಾತ್ರ ಬರಬೇಕು. ಅದು ಕೂಡ ಶಾರ್ಟ್‌ಲೀ ರಿಲೀಸ್ ಆಗುತ್ತವೆ ಎಂದು ಹೇಳಿದ್ದಾರೆ. ಅವರು ನಮಗೆ ಎಷ್ಟು ಹಣ ಕೊಡಬೇಕಾಗಿತ್ತೋ 106ಕೋಟಿ ರೂಪಾಯಿ, ಅಷ್ಟು ಸಂಪೂರ್ಣ ಹಣ ಬರುತ್ತದೆ. ಅದರಲ್ಲಿ ಯಾವುದೇ ತೊಂದರೆ ಇಲ್ಲ. ಇದರ ಸ್ಪಷ್ಟವಾದ ಗೌರ್ನ್‌ಮೆಂಟ್ ಆರ್ಡರ್‌ನ್ನು ಈಗಾಗಲೇ ಇಷ್ಯೂ ಮಾಡಿದ್ದೇವೆ. ಮೊದಲು ಅವರು ಮಾಹಿತಿ ಒದಗಿಸಿಕೊಟ್ಟಿದ್ದು 66 ಕೋಟಿ ರೂಪಾಯಿ ಮಾತ್ರ ಬಂದಿತ್ತು. ಈಗ ಲೇಟೆಸ್ಟ್ ಇನ್‌ಫರ್‌ಮೇಷನ್ ಈ ರೀತಿ ಇದೆ. 66 ಪ್ಲಸ್ 21 ಕೋಟಿ ಅಂದರೆ 87 ರಿಂದ 88 ಕೋಟಿ ರೂಪಾಯಿ ಆಗುತ್ತದೆ. ಅನಂತರ 4 ಕೋಟಿ 82 ಲಕ್ಷ ಅಂದರೆ ಸುಮಾರು 5 ಕೋಟಿ ಅಂದರೆ ಒಟ್ಟು 92 ಕೋಟಿ ಆಯಿತು. ಈಗ 15 ಕೋಟಿ 56 ಲಕ್ಷ ರಿಲೀಸ್ ಮಾಡುತ್ತೇವೆಂದು ಟೆಲೆಕ್ಸ್ ಬಂದಿದೆ.

ಶ್ರೀ ಎಂ.ವೈ. ಘೋರ್ಪಡೆ: ನಾನು ಹಳ್ಳಿಗಳಿಗೆ ಹೋದಾಗ ಎರಡು ಇನ್‌ಸ್ಟಾಲ್‌ಮೆಂಟ್ ರಿಲೀಸ್ ಆಗಿದೆ, ಇನ್ನೂ ಎರಡು ಇನ್‌ಸ್ಟಾಲ್‌ಮೆಂಟ್ ರಿಲೀಸ್ ಆಗಬೇಕಾದರೆ ಎಂದು ಹೇಳುತ್ತಿದ್ದರು. ಅದಕ್ಕೋಸ್ಕರ ಅದನ್ನು ನಿಮ್ಮ ಗಮನಕ್ಕೆ ತಂದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: 7-2-91 ಕ್ಕೆ ರಿಲೀಸ್ ಆಗಿದೆ ಎಂದು ಹೇಳಿದ್ದೇನೆ. ಈಗ ಈ ನಾಲ್ಕು ಇನ್‌ಸ್ಟಾಲ್‌ಮೆಂಟ್ ಬಂದಿದೆ. ಇದರಲ್ಲಿ ಯಾವ ತಾಪತ್ರಯವೂ ಕೂಡ ಇಲ್ಲ. ಅದಕ್ಕಾಗಿ ಸಾಕಷ್ಟು ಹಣ ಇದೆ. ಪ್ರತಿ ಮಂಡಲ್‌ದಲ್ಲೂ ಈ ತಿಂಗಳಲ್ಲಿ ಸಾಕಷ್ಟು ಹಣ ಖರ್ಚುಮಾಡಬಹುದು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಚಂದ್ರೇಗೌಡರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕೆ ಉತ್ತರ ರೆಡಿಯಿದೆ. ಎಲ್ಲವನ್ನು ಹೇಳಬೇಕಾದರೆ ಒಂದು ತಾಸು ಆಗುತ್ತದೆಂದು ಕೆಲವು ಮುಖ್ಯಾಂಶಗಳನ್ನು ಮಾತ್ರ ಹೇಳಿದ್ದೇನೆ. ನಾನು ಬರೆದುಕೊಂಡಿಲ್ಲವೆಂದು ಅಲ್ಲ, 132 ತಾಲ್ಲೂಕುಗಳ ಲಿಸ್ಟ್‌ನ್ನು ಕೇಳಿದ್ದಾರೆ. ಡೈವರ್ಷನ್ ಆಫ್ ಜವಾಹರ್ ರೋಜ್ಗಾರ್ ಫಂಡ್ಸ್ ಬಗ್ಗೆ ಆ ವಿವರ ಕೇಳಿದ್ದಾರೆ. ಧಾರವಾಡ ಜಿಲ್ಲೆಯ ಬಗ್ಗೆ ಕೇಳಿದ್ದಾರೆ. ಧಾರವಾಡ ಜಿಲ್ಲೆಗೆ ಹೆಚ್ಚು ಹಣವನ್ನು ಕೊಟ್ಟಿದ್ದೇವೆ. ಸೈಕ್ಲೋನ್ ರಿಗ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾಲ್ಕು ಸೈಕ್ಲೋನ್ ರಿಗ್‌ಗಳನ್ನು ಸಪ್ಲೈ ಮಾಡಿದ್ದೇವೆ ಮತ್ತು 20 ಪೈಸ್ಟೀಡ್ ರಿಗ್‌ಗಳನ್ನು ಪ್ರವೇಟ್‌ನಲ್ಲಿ ಎಂಗೇಜ್ ಮಾಡಿಸಿದ್ದೇವೆ. ಗಂಜಿ ಕೇಂದ್ರಗಳನ್ನು ತೆರೆಯುವ ಬಗ್ಗೆ ಹೇಳಿದ್ದಾರೆ. ಕೆಲವು ಜಿಲ್ಲಾಧಿಕಾರಿಗಳು ಅದರ ಅವಶ್ಯಕತೆಯಿಲ್ಲವೆಂದು ಹೇಳಿದ್ದಾರೆ.ಎಲ್ಲಿ ಅವಶ್ಯಕತೆ ಇದೆಯೆಂದು ಕಂಡುಬಂದರೆ, ಅಂತಹ ಕಡೆ ಜಿಲ್ಲಾಧಿಕಾರಿಗಳು ರೆಕಮೆಂಡ್ ಮಾಡಿದರೆ ಖಂಡಿತವಾಗಿ ಎಲ್ಲೆಲ್ಲಿ ಪ್ರಾಕ್ಟಿಕಬಲ್ ಆಗಿ ಬೇಕೋ ಅದನ್ನು ಮಾಡುತ್ತೇವೆ. ಮತ್ತು ಫಾಡರ್ ಬ್ಯಾಂಕ್ ನಾನು ಹೇಳಿದ್ದೇನೆ. ತಾವು ಇರಲಿಲ್ಲ. ಈಗಾಗಲೇ ಫಾರೆಸ್ಟ್ ಕಾರ್ಪೊರೇಷನ್‌ನಿಂದ ಫಾಡರನ್ನು ಸಪ್ಲೈ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಎಲ್ಲಿ ಆ ಹುಲ್ಲನ್ನು ದನಗಳು ತಿನ್ನುವುದಿಲ್ಲ ಅಂತಹ ಕಡೆ ನೀವೇ ತರಿಸಿಕೊಡತಕ್ಕ ವ್ಯವಸ್ಥೆಯನ್ನು ಮಾಡಿ ಅಥವಾ ಟ್ರಾನ್ಸ್‌ಪೋರ್ಟೇಶನ್ ಚಾರ್ಜ್ ಕೊಡಿಯೆಂದು ಅದಕ್ಕೆ ಹಣವನ್ನು ನಿಗದಿ ಮಾಡಿದ್ದೇವೆ. ಕೆಲವು ಕಡೆ ಫಾಲ್ಸ್ ಟ್ರಾಕ್ಟರ್‌ಗಳ ನಂಬರುಗಳನ್ನು ಹಾಕಿ ಮಿಸ್‌ಯೂಸ್ ಮಾಡುತ್ತಿದ್ದಾರೆ. ಫಾಲ್ಸ್ ಲಾರಿ ನಂಬರುಗಳನ್ನು ಹಾಕಿ ಹಣವನ್ನು ಮಿಸ್‌ಯೂಸ್ ಮಾಡುತ್ತಿದ್ದಾರೆ. ಅದಕ್ಕೋಸ್ಕರ ತಹಶೀಲ್ದಾರ್‌ರವರ ಪರ್ಮಿಶನ್ ತೆಗೆದುಕೊಳ್ಳಬೇಕಾಗುತ್ತದೆ. ಅಂತಹದ್ದು ನನ್ನ ಗಮನಕ್ಕೆ ಇನ್ನು ಬಂದಿಲ್ಲ. ತಹಶೀಲ್ದಾರ್‌ರವರ ಪರ್ಮಿಶನ್ ತೆಗೆದುಕೊಂಡು ಬಂದವರಿಗೆ ಹಣವನ್ನು ಕೊಡಲಿಕ್ಕೆ ನಿಗದಿ ಮಾಡಿದ್ದೇವೆ. ಅದರ ಪ್ರಕಾರ ಯಾರ್‍ಯಾರು ಮುಂದೆ ಬರುತ್ತಾರೆ ಅವರಿಗೆ ಕೊಡತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಸಿ. ಬೈರೇಗೌಡ: ಹಣವನ್ನು ಕೊಡುತ್ತೇವೆಂದು ಹೇಳಿದ್ದೀರಿ. ಕೆಲವು ಕಡೆ ರೈತರು ಮೇವನ್ನು ಬೆಳೆದು ಕೊಡುತ್ತಾರೆ. ನಮ್ಮ ಜಿಲ್ಲೆಯಲ್ಲಿ ಆ ಕೆಲಸ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅಂತಹದ್ದು ನೀವು ಮಾಡಿದರೆ ಅದಕ್ಕೆ ನಾನು ಒಪ್ಪಿಗೆ ಕೊಟ್ಟಿದ್ದೇನೆ. ಯಾರು ಮುಂದೆ ಬರುತ್ತಾರೆ ಅಂತಹವರಿಗೆ ಗೋ ಅಹೆಡ್ ಎಂದು ಹೇಳಿದ್ದೇನೆ. ಅದಕ್ಕೆ ನೀವು ಒಂದು ಸ್ಕೀಮ್ ಕೊಟ್ಟಿದ್ದಿರಿ. ಅದನ್ನು ಅಪ್ರೂವ್ ಮಾಡಿದ್ದೇನೆ. ನದಿ ದಡಗಳಲ್ಲಿ ಮತ್ತು ಕೆರೆ ಅಂಗಳದಲ್ಲಿ ಜಲ್ಲೆ ಇರಬಹುದು, ಹುಲ್ಲನ್ನು ಬೆಳೆಯುವುದಕ್ಕೆ ಯಾರ್‍ಯಾರು ಮುಂದೆ ಬರುತ್ತಾರೆ ಅಂತಹವರಿಗೆ ಫಾಡರ್ ಬೆಳೆಸುವುದಕ್ಕೆ ಅಲ್ಲಿ ಸಹಾಯ ಮಾಡಿಯೆಂದು ಹೇಳಿದ್ದೇವೆ. ಆ ಕೆಲಸವನ್ನು ವ್ಯವಸಾಯ ಇಲಾಖೆಯ ಮುಖಾಂತರ ಮಾಡಿಸಿದ್ದೇವೆ. ಇದಕ್ಕೆ ಎಲ್ಲೆಲ್ಲಿ ರಿಕ್ವೆಸ್ಟ್ ಬರುತ್ತದೆ ಅದಕ್ಕೂ ಕೂಡ ನಾವು ಸಹಾಯ ಮಾಡುತ್ತೇವೆ. ಮತ್ತೆ ಗೋಶಾಲೆಯ ಬಗ್ಗೆ ಹೇಳಿದ್ದಾರೆ. ಗೋಶಾಲೆಯನ್ನು ಧಾರವಾಡ ಜಿಲ್ಲೆಯಲ್ಲಿ ಎಕ್ಸ್‌ಪೆರಿಮೆಂಟ್ ಮಾಡಬೇಕೆಂದು ಜಿಲ್ಲಾಧಿಕಾರಿಗಳು ಪ್ರಯತ್ನ ಮಾಡಿದರೆ ಬಹಳಷ್ಟು ಜನ ಮುಂದೆ ಬರುತ್ತಿಲ್ಲ. ನೀವು ಹೇಳಿದಹಾಗೆ, ಗೋಶಾಲೆಗಳಿಗೆ ದನಕರುಗಳನ್ನು ತಂದುಬಿಟ್ಟರೆ ರೋಗರುಜಿನಗಳು ಬರಬಹುದೆಂದು ಅದರಿಂದ ತೊಂದರೆಯಾಗುತ್ತದೆಂದು ಅದ್ದೊಂದು ಭಯದಿಂದ ಬಹಳಷ್ಟು ಜನ ಅದಕ್ಕೆ ಒಪ್ಪಿಗೆ ಕೊಡುತ್ತಿಲ್ಲ. ಜನರು ಒಪ್ಪಿಗೆ ಕೊಟ್ಟರೆ ಗೋಶಾಲೆ ಓಪನ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬಹುದು, ಅವಶ್ಯಕತೆಯ ಆಧಾರಕ್ಕನುಸಾರವಾಗಿ ಮಾಡಬಹುದು. ಮತ್ತೆ ತಕಾವಿ ಲೋನ್ ಬಗ್ಗೆ ಹೇಳಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡಬೇಕಾಗುತ್ತದೆ. ಮುಖ್ಯ ಮಂತ್ರಿಗಳ ಜೊತೆಯಲ್ಲಿ

ಮಾತನಾಡಿ ಎಷ್ಟು ಹಣವನ್ನು ಬಿಡಬಹುದೆಂದು ನೋಡೋಣ. ಅದು ಒಂದು ದೃಷ್ಟಿಯಿಂದ ಒಳ್ಳೆಯದು. ನಾವು ಲೋನ್ ಕೊಡುತ್ತೇವೆ, ಅದು ಏನಾಗುತ್ತದೆಂದರೆ ಫ್ರೀ ಅಂದರೆ ಬಹಳಷ್ಟು ಜನ ಮಿಸ್‌ಯೂಸ್ ಮಾಡಬಹುದು. ಅದು ಒಳ್ಳೆಯ ಸಲಹೆ ಇದೆ. ಅದರ ಬಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಯಾವುದಾದರೂ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ತಕಾವಿ ಸಾಲ ರಿಕವರಿ ಬಗ್ಗೆ ನಮ್ಮ ಕೆ.ಹೆಚ್. ಪಾಟೀಲರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಒಂದು ಸಂತೋಷದ ಸುದ್ದಿ ಏನೆಂದರೆ ಕೇಂದ್ರ ಸರ್ಕಾರ ಈಗಾಗಲೇ 1500 ಕೋಟಿ ರೂಪಾಯಿ ಅಗ್ರಿಕಲ್ಚರಲ್ ಡೆಟ್ ರಿಲೀಫ್ ಫಂಡ್ ಇಟ್ಟಿದ್ದೇವೆಂದು ಹೇಳಿದ್ದಾರೆ. ಅದು ಏನು ಕಾರ್ಯಕ್ರಮ ಇದೆ ಅದನ್ನು ನೋಡಿಕೊಂಡು ಅದರೊಂದು ಆಧಾರದ ಮೇಲೆ ರಾಜ್ಯಸರ್ಕಾರವೂ ಮಾಡಬೇಕಾಗುತ್ತದೆ. ಹಿಂದೆ ವೀರೇಂದ್ರ ಪಾಟೀಲರು ಅಧಿಕಾರದಲ್ಲಿ ಇದ್ದಾಗ ಕೇಂದ್ರ ಸರ್ಕಾರಕ್ಕೆ ಇದರ ಬಗ್ಗೆ ಒಂದು ಪತ್ರ ಬರೆದಿದ್ದಾರೆ. ನೀವು ಕಾರ್ಯಕ್ರಮ ತೆಗೆದುಕೊಳ್ಳುತ್ತೀರೋ ಅದರೊಂದು ಆಧಾರದ ಮೇಲೆ ನಾವು ಸಹ ಮಾಡುತ್ತೇವೆಂದು ಪತ್ರ ಬರೆದಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ: ಸಾಯಿಲ್ ಕನ್ಸರ್ವೇಶನ್‌ಗಾಗಿ ಸರ್ಕಾರ ಏನು ಹಣವನ್ನು ಖರ್ಚು ಮಾಡಿದೆ. ಅದನ್ನು in the name of drought relief ಖರ್ಚು ಮಾಡಿದ್ದೀರಿ. ಈಗ ಅದರ ವಸೂಲಿಗೆ ನೋಟೀಸ್ ಕಳುಹಿಸಿದ್ದಾರೆ. ಅದರ ಬಗ್ಗೆ ಎಕ್ಸಾಮಿನ್ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅಂತಹ ನಿದರ್ಶನಗಳು ಇದ್ದರೆ ಅಥವಾ ಸಾರ್ವಜನಿಕವಾಗಿ ಅದರ ಬಗ್ಗೆ ಚರ್ಚೆಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆಂದು ಇಷ್ಟುಮಾತ್ರ ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ. ಮಾನ್ಯ ಸಿಂಧ್ಯರವರು ಕೂಡ ಕೇಂದ್ರ ಸರ್ಕಾರಕ್ಕೆ ನೀವು ಪತ್ರ ಬರೆಯಬೇಕಾಗಿತ್ತು ಎಂದು ಹೇಳಿದರು. ನಾನು ಈಗಾಗಲೇ ಹೇಳಿದ್ದೇನೆ ನಾನು ಪತ್ರವನ್ನು ಬರೆದಿದ್ದೇನೆ.

ನಾನು ಇದರ ಬಗ್ಗೆ ಒಂದು ಸಲ ಅಲ್ಲ, ಹತ್ತು ಸಲ ಸಂಬಂಧಪಟ್ಟಂಥ ಕೇಂದ್ರ ಸರ್ಕಾರದ ಫೈನಾನ್ಸ್ ಡಿಪಾರ್ಟ್‌ಮೆಂಟ್ ಜೊತೆಯಲ್ಲಿ, ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನ ಜೊತೆಯಲ್ಲಿ ಕೂಡ ಮಾಹಿತಿ ಪಡೆದುಕೊಂಡಿದ್ದೇನೆ. ನಾನು ಸ್ವತಃ ಶ್ರೀ ದೇವಿಲಾಲ್ ಅವರನ್ನು ಭೇಟಿಯಾಗಿದ್ದೆ ಮತ್ತು ಶ್ರೀ ಚಂದ್ರಶೇಖರ್ ಅವರನ್ನು ಭೇಟಿಯಾಗಿ ಮನವಿ ಕೊಟ್ಟರೆ, ಅವರು ಹೇಳತಕ್ಕದ್ದು ಏನು ಎಂದರೆ, ಈಗ ನಾವು ನ್ಯಾಚುರಲ್ ಕೆಲಾಮಿಟಿ ಫಂಡ್ ಅಂತ ನಿಗದಿ ಮಾಡಿದಮೇಲೆ ಅದಕ್ಕಿಂತ ಹೆಚ್ಚು ಖರ್ಚು ಸಂಭವಿಸಿದರೆ ನೀವು ಅಡ್ವಾನ್ಸ್ ಗ್ರಾಂಟ್ ಅಂತ 5 ಪರ್ಸೆಂಟ್ ಡ್ರಾ ಮಾಡಬೇಕೇ ಹೊರತಾಗಿ ಇದಕ್ಕಿಂತ ಜಾಸ್ತಿ ಕೊಡುವುದಿಲ್ಲ. ಮೆಮೊರಾಂಡಮ್ ಕೊಟ್ಟ ಮೇಲೆ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡುವುದು, ಟೀಮ್ ಕಳಿಸುವುದು, ಈ ಪದ್ಧತಿಯನ್ನು ಈಗ ನಿಲ್ಲಿಸಿದ್ದೇವೆ. ಯಾವ ರಾಜ್ಯದಲ್ಲೂ ಕೂಡ ಈ ಪದ್ಧತಿಯನ್ನು ಈಗ ಅನುಸರಿಸುತ್ತಿಲ್ಲ. ಮತ್ತು ಒಂಭತ್ತನೇ ಫೈನಾನ್ಸ್ ಕಮಿಷನ್ ಪ್ರಕಾರ ಈ ಪದತಿಯನ್ನು ಕೈಬಿಟ್ಟು ನಿಗದಿಪಡಿಸಿದ ಹಣವನ್ನು ಮಾತ್ರ ಖರ್ಚು ಮಾಡಬೇಕೆಂದು ಹೇಳಿದ್ದಾರೆ. ಆದ್ದರಿಂದ ನಾವು ಪ್ರಯತ್ನ ಮಾಡಬಹುದೇ ಹೊರತಾಗಿ ಸುಮ್ಮನೆ ಕಾನೂನಿನಲ್ಲಿ ನಮಗೆ ಈಗಾಗಲೇ ಕೊಟ್ಟಮೇಲೆ ಏನೂ ಮಾಡುವಂತಿಲ್ಲ. ಆದರೂ ಕೂಡ ಪ್ರಯತ್ನ ಮಾಡೋಣ. ಈಗಾಗಲೇ ಪ್ರಧಾನಿ ಮತ್ತು ಉಪಪ್ರಧಾನಿಯವರಿಗೆ ಪತ್ರ ಬರೆದಿದ್ದೇವೆ. ಅವರು ಡೆಲಿಗೇಶನ್ ಹೋಗಬೇಕೆಂದು ಹೇಳಿದ್ದಾರೆ. ಅವಶ್ಯಕತೆ ಬಿದ್ದರೆ ಡೆಲಿಗೇಶನ್ ತೆಗೆದುಕೊಂಡು ಹೋಗೋಣ. ಈಗ ಕೊಡುವುದಕ್ಕೆ ಕಾನೂನಿನಲ್ಲಿ ಗುಂಜಾಯಿಷ್ ಇಲ್ಲ ಅದಕ್ಕೆ ಕೊಡಬೇಕಾದರೆ ನಮ್ಮ ಹಣದಿಂದ ಕೊಡಬೇಕೆಂದು ಇದೆ. ಅದಕ್ಕಾಗಿ ಬಹುಶಃ ಡೆಲಿಗೇಶನ್ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್: ನಿಯೋಗ ಹೋಗುವುದು ಬಹಳ ಕಷ್ಟ. ಅಷ್ಟರೊಳಗೆ ಸರ್ಕಾರ ಇರುತ್ತದೋ ಇಲ್ಲವೋ ಆದುದರಿಂದ ಈಗ ನಿಯೋಗ ಹೋಗುವುದರ ಬಗ್ಗೆ ಯೋಚನೆ ಮಾಡುವುದು ಬೇಡ. ಏಕೆಂದರೆ ಯಾವ ಘಳಿಗೆಯಲ್ಲಿ ಏನಾಗುತ್ತದೆ ಎಂದು ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಆಮೇಲೆ ಕಮಿಟಿ ಬಗ್ಗೆ ಹೇಳಿದ್ದಾರೆ. ಈಗಾಗಲೇ ನಾನು ಸ್ಪಷ್ಟಪಡಿಸಿದ್ದೇನೆ. ಈ ಎಲ್ಲ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ನೀರಿಗಾಗಿ ಮತ್ತು ಸ್ವಲ್ಪಮಟ್ಟಿಗೆ ಕೆಲಸಕ್ಕಾಗಿ 5 ಕೋಟಿ ರೂಪಾಯಿಗಳನ್ನು ತಕ್ಷಣ ರಿಲೀಸ್ ಮಾಡುತ್ತೇನೆ ಎಂದು ಈಗಾಗಲೇ ಹೇಳಿದ್ದೇನೆ. ಅದಕ್ಕಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಶ್ರೀ ನಾಗಮಾರಪಲ್ಲಿಯವರು ಹೇಳಿದರು, ನಾವು 90 ಲಕ್ಷ ಕೊಟ್ಟಿದ್ದು ಫ್ಲಡ್ ರಿಲೀಫ್ ವರ್ಕ್‌ಗೆ. ಅದು ಫ್ಲಡ್‌ಗೆ ಇದ್ದುದನ್ನು ಸ್ಕೇರ್‌ಸಿಟಿಗೆ ಕೊಡಿ ಎಂದರೆ ಹೇಗೆ? ನಾವು ಏತಕ್ಕೆ ಕೊಟ್ಟಿದ್ದೇವೋ, ಅದಕ್ಕಾಗಿ ಉಪಯೋಗ ಮಾಡಬೇಕು.

ಶ್ರೀ ಗುರುಪಾದಪ್ಪ ನಾಗರಮಾರಪಲ್ಲಿ: ಅಲ್ಲಿ ನೀರೇ ಇಲ್ಲ ಸ್ವಾಮಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇಂದು ಬಾಯಿ ಇದ್ದವ ಬರಗಾಲದಲ್ಲಿ ಬದುಕಿದ ಎಂದಹಾಗೆ ಆಗಿದೆ. ಕಷ್ಟ ಇದ್ದಲ್ಲಿ ಸಹಾಯ ಮಾಡೋಣ. ನೀವು ಹಿಂದೆ ನಮ್ಮಲ್ಲಿ ಫ್ಲಡ್ ಎಫೆಕ್ಟಡ್ ಏರಿಯಾ ಇಷ್ಟು ಇದೆ, ತೊಂದರೆಯಾಗಿದೆ, ಹಣ ಬಿಡುಗಡೆ ಮಾಡಿ ಎಂದು ಪ್ರಶ್ನೆ ಕೇಳಿದ್ದೀರಿ. ನಾವು ಅದಕ್ಕೆ ಬಿಡುಗಡೆ ಮಾಡಿದ ಹಣವನ್ನು ಕೂಡ ಸ್ವಲ್ಪ ಅಲ್ಲಿ ಖರ್ಚುಮಾಡಿ ಸಹಾಯಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಅಲ್ಲಿ ಬಿಡುಗಡೆ ಮಾಡುವುದಕ್ಕೆ ದುಡ್ಡು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಹಣ ಇದೆ, ಕೊಟ್ಟಿದ್ದೇವೆ. ಅದಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಮತ್ತು ಶ್ರೀ ಘೋರ್ಪಡೆಯವರು ಪ್ರಸ್ತಾಪ ಮಾಡಿದ್ದರು. 60 ಕೋಟಿ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಶ್ರೀ ವೀರಪ್ಪ ಮೊಯಿಲಿಯವರು ಕೂಡ ಉತ್ತರ ಕೊಟ್ಟರು. ಅವರು ಸಮಾಧಾನ ಪಟ್ಟಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇಷ್ಟು ಮಾತ್ರ ಹೇಳುತ್ತೇನೆ. ನಾನು ಸಾಧ್ಯವಾದಷ್ಟು ಮಟ್ಟಿಗೆ ಕುಡಿಯುವ ನೀರಿಗಾಗಿ ಸರ್ವಪ್ರಯತ್ನವನ್ನೂ ಮಾಡುತ್ತೇನೆ ಎಂದು ಕೊನೆಯದಾಗಿ ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು: ಬೋರ್ ಹೊಡೆಯುವ ಸಲುವಾಗಿ ರಾಜ್ಯ ಸರ್ಕಾರದಲ್ಲಿ ರಿಗ್ ಯಂತ್ರಗಳಿಲ್ಲ. ಈಗ ಆಗ್ರೋದಿಂದ ಹೊಡೆಯುತ್ತಿಲ್ಲ, ಪ್ರೈವೇಟ್‌ದಿಂದಲೂ ಹೊಡೆಯುತ್ತಾ ಇಲ್ಲ ಆದ್ದರಿಂದ ರಿಗ್ ಯಂತ್ರಗಳನ್ನು ಖರೀದಿ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಈಗಾಗಲೇ ಇದರ ಬಗ್ಗೆ ನಾನು ಹೇಳಿದ್ದೇನೆ. ಡಿಪಾರ್ಟ್‌ಮೆಂಟ್‌ನಲ್ಲಿ ಇಲ್ಲದೇ ಇದ್ದರೆ ಪ್ರೈವೇಟ್‌ನಿಂದ ತೆಗೆದುಕೊಂಡು ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು: ಪ್ರತಿ ವರ್ಷ ಬರಗಾಲ ಬರುತ್ತದೆ. ಆದ್ದರಿಂದ ಸ್ಪೆಸಿಫಿಕ್ಕಾಗಿ ರಿಗ್ ಮೆಷಿನ್‌ಗಳನ್ನು ತೆಗೆದುಕೊಂಡರೆ ಒಳ್ಳೆಯದು.

ಅಧ್ಯಕ್ಷರು: ರಿಗ್ ಮೆಷಿನ್ ಮಾಡುತ್ತಾರೆ. ಶ್ರೀ ಸಿಂಧ್ಯರವರೇ, ನಿಮ್ಮ ಮೋಶನ್ ಏನಾಗುತ್ತದೆ ಈಗ ? ಅದನ್ನು ನೀವು ಮೂವ್ ಮಾಡಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ಮೂವ್ ಮಾಡಿದ್ದೇನೆ, ಸಾರ್ ಬರೆದುಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾನು ಅವರಿಗೆ ಕೇಳಿಕೊಂಡಿದ್ದೇನೆ, ಇದರ ಅವಶ್ಯಕತೆ ಇಲ್ಲವೆಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಅಂಕಿಅಂಶಗಳನ್ನು ವಿರೋಧ ಪಕ್ಷದ ಸದಸ್ಯರೆ ಅಲ್ಲ ಆಡಳಿತ ಪಕ್ಷದ ಸದಸ್ಯರು ಸಹ ಒಪ್ಪುತ್ತಿಲ್ಲ. ಯಾರಿಗೂ ಸಮಾಧಾನ ಆಗಿಲ್ಲ. ನನಗೆ ಗೊತ್ತಿದೆ I still refute all the statistics which he had given.

ಈಗ ಇವರು ಹೇಳಿದ್ದು ಸರಿ ಎಂದು ಹೇಳುತ್ತಾರೆ. ನೀವು ಹೇಳುತ್ತಿರುವುದು ಸರಿ ಇಲ್ಲ ಎಂದು ನಾವು ಹೇಳುತ್ತಿದ್ದೇವೆ. ಅಲ್ಲದೆ ಕೆಲಸ ಆಗುವುದಿಲ್ಲ, ಕುಡಿಯುವ ನೀರಿಗೆ ಬಹಳ ತೊಂದರೆ ಇದೆ. ಜಿಲ್ಲಾಧಿಕಾರಿಗಳು ಮತ್ತು ಇತರರು ಕೆಲಸ ಸರಿಯಾಗಿ ಮಾಡುತ್ತಿಲ್ಲ ಎಂದು ನಾವು ಹೇಳುತ್ತೇವೆ. ಲೆಜಿಸ್ಲೇಟರ್ಸ್ ಕಮಿಟಿ ಮಾಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. 1972 ರಲ್ಲಿ ಮಾಡಿದ್ದಾರೆ. ಹಿಂದೆ ಎಲ್ಲಾ ಮಾಡಿಲ್ಲವೇನು? Why not we do it? What is the problem? ಈಗ ಸರ್ಕಾರಕ್ಕೆ ಆಗುವುದಿಲ್ಲ ಎನ್ನುವುದಾದರೆ press for the voting. ನೀವು ನೋಡೋಣ ಎಂದು ಹೇಳುವುದರಲ್ಲಿ ಯಾವ ಭರವಸೆ ಇದೆ. ಕೇಂದ್ರಸರ್ಕಾರಕ್ಕೆ ಹೋಗುವುದರಿಂದ ಯಾವುದೇರೀತಿಯ ಉಪಯೋಗವಿಲ್ಲವೆಂದು ಹೇಳುತ್ತೀರಿ. ಇಷ್ಟೆಲ್ಲಾ ಬಾಯಿಬಡೆದುಕೊಂಡ ಮೇಲೆ 5 ಕೋಟಿ ರೂಪಾಯಿ ಸಿಕ್ಕಿದೆ. ಇದರಿಂದ ಒಂದು ತಾಲ್ಲೂಕಿಗೆ 10 ಬೋರ್‌ವೆಲ್ ಹಾಕುವುದಕ್ಕಾಗುವುದಿಲ್ಲ. ಒಂದು ತಾಲ್ಲೂಕಿಗೆ 8ಬೋರ್‌ವೆಲ್ ಹಾಕಬಹುದು ಇದರಿಂದ ಸಮಸ್ಯೆ ನಿವಾರಣೆಯಾಗುತ್ತದೆಯೇ? ನೀವು ಬೆಂಗಳೂರು ನಗರಕ್ಕೆ ಏನಾದರೂ ಕೊಟ್ಟಿದ್ದೀರಾ, ಮಂಗಳೂರಿಗೆ ಏನಾದರೂ ಕೊಟ್ಟಿದ್ದೀರಾ, ಚಿತ್ರದುರ್ಗಕ್ಕೆ ಏನಾದರೂ ಕೊಟ್ಟಿದ್ದೀರಾ. ನಿಮ್ಮ ಕಾರ್ಯಕ್ರಮದಿಂದ ಏನಾದರೊಂದು ಪ್ರಕಟಣೆ ಮಾಡಿದ್ದೀರಾ? ನೀವು ಅಂಕಿಅಂಶ ಕೊಟ್ಟಿದೀರಿ. ನಿಮ್ಮ ರೂಲಿಂಗ್ ಪಾರ್ಟಿಯವರು ಹೆಚ್ಚಿಗೆ ಜನ ಇರುತ್ತಾರೆ, ನಾವೂ ಬರುತ್ತೇವೆ, ಇದು ಏನಾಗಿದೆ ಎಂದು ನೋಡೋಣ. ಈ ನಿರ್ಣಯವನ್ನು ಒಪ್ಪುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಎಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ : ಮಾನ್ಯ ಅಧ್ಯಕ್ಷರೇ, ಈ ಬರಗಾಲದ ಬಗ್ಗೆ ಸದನದಲ್ಲಿ ಅನೇಕಬಾರಿ ಚರ್ಚೆಮಾಡಿರುವುದನ್ನು ನಾವೆಲ್ಲರೂ ನೋಡಿದ್ದೇವೆ. ಈ ಚರ್ಚೆ ಇದೇ ಮೊದಲು ಇದೇ ಕೊನೆ ಎಂದಲ್ಲ. ಸಲಹಾ ಮಂಡಳಿಯಲ್ಲೂ ಕೂಡ ಮಾತನಾಡುವಾಗ, ಸನ್ಮಾನ್ಯ ಮುಖ್ಯಮಂತ್ರಿಗಳು ಕೂಡ ಹೇಳಿದರು, ಏನೆಂದರೆ ಇವತ್ತು ನಾವು ಮೊದಲು ಹೇಳಿಕೆ ಕೊಡಬೇಕು ಅನಂತರ ಚರ್ಚೆ ಮಾಡೋಣ ಎಂದು. ಈ ಸದನದ ಈ ತಿಂಗಳು 21ನೇ ತಾರೀಖಿನವರೆಗೂ ನಡೆಯುತ್ತದೆ. ಕರ್ನಾಟಕದ ರಾಜ್ಯದಲ್ಲಿ ಏನೇನು ಪರಿಸ್ಥಿತಿ ಇದೆ ಎಂಬುದನ್ನು ವಿಚಾರ ಮಾಡಿಕೊಂಡು ಹೇಳಬಹುದು. ಈ ಪರಿಸ್ಥಿತಿ ಇನ್ನೂ ಉಲ್ಬಣವಾಗಬಹುದು ಅಥವಾ ಕಡಿಮೆಯಾಗಬಹುದು. ಈ ವಿಚಾರ ಸಲಹಾ ಮಂಡಳಿಯಲ್ಲೂ ಬಂತು. ಇವತ್ತು ಸದನದ ಸಮಿತಿ ಆಗಬೇಕೆಂದು ತಮ್ಮ ಮೋಷನ್ ಇದೆ. ಇದು ಇವತ್ತೇ ಆಗಬೇಕೆಂದು ಪ್ರೆಸ್ ಮಾಡತಕ್ಕಂಥ ಅವಶ್ಯಕತೆ ಇರಲಿಲ್ಲ. After all, upto 21st we are sitting and any day we can consider that motion.

ಅಧ್ಯಕ್ಷರು : ನೀವು ಒಂದು substantative motion ನನಗೆ ಬರೆದುಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮುಖ್ಯಮಂತ್ರಿಗಳು ಅವರ ಸೌಜನ್ಯತೆಯನ್ನು ತೋರಿಸಿದ್ದಾರೆ. ನನ್ನ ಶಂಕೆ ಏನೆಂದರೆ, ಈಗ್ಗೆ ಒಂದು ತಿಂಗಳ ಹಿಂದೆ ಅಧಿವೇಶನ ಸೇರಿದ್ದೆವು. ಬರಗಾಲ ಬಗ್ಗೆ ಚರ್ಚೆ ಮಾಡಿದ್ದೆವು. ಇದರ ಮೇಲೆ ಏನೂ

ಪರಿಣಾಮವಾಗಿಲ್ಲ. ಈಗ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತಿದೆ. ಆ ದೃಷ್ಟಿಯಿಂದ ಹೇಳುತ್ತೇನೆ. ತಾವು ಕೊಟ್ಟಿರತಕ್ಕ ಅಂಕಿ ಅಂಶಗಳ ಬಗ್ಗೆಯೂ ಕೂಡ ನಾವು 5-6 ಜನ ಸೇರಿ ಚರ್ಚೆ ಮಾಡಿ ವಿಷಯ ಸಂಗ್ರಹಣೆ ಮಾಡುತ್ತೇವೆ. ತಾವು 21ನೇ ತಾರೀಖಿನವರೆಗೂ ಪೆಂಡಿಂಗ್ ಇರುವುದಾದರೆ, I don't press for it right today.

ಅಧ್ಯಕ್ಷರು : ನೀವು ಬೇರೆ ನೋಟೀಸ್ ಕೊಡಬೇಕು. ಏಕೆಂದರೆ, ಅವರ ಸ್ಟೇಟ್‌ಮೆಂಟ್ ಮೇಲೆ ಈ ಚರ್ಚೆ ನಡೆದಿದೆ. 301 ಪ್ರಕಾರ ಬೇರೆ ಸಬ್‌ಸ್ಟ್ಯಾನ್‌ಷಿಯಲ್ ಮೋಷನ್ ಕಳುಹಿಸಿಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆಯಿತು, ನಾನು ಕಳುಹಿಸಿಕೊಡುತ್ತೇನೆ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

ಶ್ರೀಮತಿ ಚಂದ್ರಪ್ರಭಾ ಅರಸ್(ಹುಣಸೂರು) : ಸನ್ಮಾನ್ಯ ಅಧ್ಯಕ್ಷರೇ, " ಮಾರ್ಚ್ 1,1991ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ."

ಶ್ರೀ ಪ್ರಭಾಕರ ಎಸ್.ರಾಣೆ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮತಿ ಚಂದ್ರಪ್ರಭಾ ಅರಸುರವರು ಮಂಡಿಸಿರುವ ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟಂತೆ ವಂದನಾ ನಿರ್ಣಯದ ಪ್ರಸ್ತಾಪವನ್ನು ಅನುಮೋದಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀಮತಿ ಚಂದ್ರಪ್ರಭಾ ಅರಸ್ : (ಹುಣಸೂರು) : ಸನ್ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ, ವಂದನಾ ನಿರ್ಣಯವನ್ನು ಮಂಡಿಸಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ನಾಳೆ ದಿವಸ ನನಗೆ ಹೆಚ್ಚಿನ ಕಾಲಾವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಸಭೆ ಮುಂದುವರೆದು, ನಾಳೆ ಬೆಳಿಗ್ಗೆ 11 ಗಂಟೆಗೆ ಸಮಾವೇಶವಾಗುತ್ತದೆ.

(ಸದನವು, ಸಂಜೆ 7 ಗಂಟೆಗೆ ಮುಕ್ತಾಯವಾಗಿ, ಮತ್ತೆ ದಿನಾಂಕ : 6-3-91 ರಂದು ಬುಧವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)